ತಾ॥ ೨೬ ನೆಯ ದಿವಸ ಮುಂಬಯಿಯ ಸತ್ಯಾಗ್ರಹ ಯುದ್ಧ ಮಂಡಳದವರು ಬಾಡೋಲಿ ದಿನದ ನಿಮಿತ್ತವಾಗಿ ಸಾಯಂಕಾಲ ೫ ಗಂಟೆಗೆ ಮೆರವಣಿಗೆ ಹೊರಡಿಸಿದ್ದರು. ಪೋಲೀಸ ಕಮೀಶನರರು ನೋಟೀಸು ಹೊರಡಿಸಿ ಮೆರವಣಿಗೆಗೆ ಪ್ರತಿಬಂಧ ಮಾಡಿದ್ದರಿಂದ ಪೋಲೀಸ ಅಧಿಕಾರಿಗಳು ಹಿಂದಿಯಲ್ಲಿಯೇ ಮೆರವಣಿಗೆಯನ್ನು ಹಿಡಿದರು. ಮತ್ತು ಯುದ್ಧ ಮಂಡಳದ ಅಧಿಕಾರಿಗಳನ್ನು ಸೆರೆಹಿಡಿದುಕೊಂಡು ಹೋದರು. ಬಳಿಕ ಉಳಿದ ಜನರು ಲಾಠಿಗಳಿಂದ ಚದುರಿಸಲ್ಪಟ್ಟರು. ಸುಮಾರು ೩೫ ಜನರಿಗೆ ಗಾಯಗಳಾದವು. ಈ ಸುದ್ದಿಯನ್ನು ಕೇಳಿ ಬೇರೆ ಬೇರೆ ಭಾಗಗಳೊಳಗಿನ ಜನರು ಬೇರೆ ಬೇರೆ ಮೆರವಣಿಗೆ ಹೊರಡಿಸಿ ಸಭಾಸ್ಥಾನವಾದ ಅಜಾದ್ ಮೈದಾನದ ಕಡೆಗೆ ಸಾಗಿದರು. ಪೋಲೀಸರು ಕೆಲವು ಮೆರವಣಿಗೆಗಳನ್ನು ಹಾಗೆಯೆ ಹೋಗಗೊಟ್ಟ ಕೆಲವನ್ನು ಮಾತ್ರ ಹಾದಿಯಲ್ಲಿ ತಡೆದರು. ತಡೆಯಲ್ಪಟ್ಟ ಮೆರವಣಿಗೆಯಲ್ಲಿ ಸ್ತ್ರೀಯರ ಮೆರವಣಿಗೆಯೂ ಒಂದು ಇತ್ತು. ಪೋಲೀಸರು ಅವರಿಗೆ ತಿರುಗಿ ಹೋಗಲು ಕೇಳಿಕೊಂಡರು. ಅವರು ನಿರಾಕರಿಸಿದರು' ನಂತರ ಕೆಲವು ಪೋಲೀಸರು ಬಂದು ಅವರನ್ನು ಕೈದು ಮಾಡಿಕೊಂಡು ಹೋದರು. ಪೋಲೀಸರಿಂದ ಅಡ್ಡಿಯಿಲ್ಲದೆ ಸಾಗಿದ ಮೆರವಣಿಗೆಗಳು ಅಜಾದ ಮೈದಾನಕ್ಕೆ ಹೋಗಿ ಮುಟ್ಟಿದವು. ಅಜಾದ ಮೈದಾನವು ಸಾವಿರಾರು ಜನರಿಂದ ಕಿಕ್ಕಿರಿದು ತುಂಬಿ ಹೋಗಿತ್ತು. ಅಲ್ಲಿ ಸಭೆ ಜರುಗಿ ಬಾಡೋಲಿ ಜನರ ವಿಷಯಕ್ಕೆ ಸಹಾನುಭೂತಿ ತೋರಿಸುವ ತೀರ್ಮಾನುಗಳು ಮಾಡತ್ತಾಮಾಡಲ್ಪಟ್ಟವು.

ಯುದ್ಧಮಂಡಳದವರು ವಿಚಾರಣೆಗೆ ಗುರಿಮಾಡಲ್ಪಟ್ಟರು. ಅವರಿಗೆ ಕೆಳಗಿನಂತೆ ಶಿಕ್ಷೆಯು ಆಯಿತು. ಶ್ರೀಮತಿ ಉಮಿಲಾ ಪಹುತಾ ಮತ್ತು ಶ್ರೀಮಾನ ಮೋಜಾಬಾ ಲ ತಿಂಗಳ ಸಾದಾ ಶಿಕ್ಷೆ. ೧೫೦ ರೂ. ದಂಡ, ಇಲ್ಲವೆ ೧೫ ತಿಂಗಳ ಶಿಕ್ಷೆ. ಗುರಾ ಮಹುಸೇನ ೪ ತಿಂಗಳ ಶಿಕ್ಷೆ.

ಶ್ರೀಮತಿ ಗಂಗಾಬೇನ ಪಟೇಲರು ೧೪ ನೆಯ ಯುದ್ಧಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಶ್ರೀ ಚಿಂತಾಮಣಿಯವರು
ಚಿಂತಾಕುಲರಾದರು

ಪ್ರೆಸ್ರಿಸ್ಸದ ಪ್ರತಿನಿಧಿಯು ಭೆಟ್ಟಿಗೆ ಹೋದಾಗ ಶ್ರೀ ಚಿಂತಾಮಣಿಯವರು ಅವರಿಗೆ ತಿಳಿನಿನಂತೆ ತಿಳಿಸಿದ್ದಾರೆ:—

ಹಿಂದುಸ್ಥಾನದಲ್ಲಿಯಾ ಪರಿಸ್ಥಿತಿಯು ಈಗ ತೀರ ಕೆಟ್ಟುಹೋಗಿದೆ. ಇಲ್ಲಿ ಬಂಡೀಗಾಲಿಯು ಪರಿಷತ್ತು ನಡೆವಿರುವಾಗ ಅಲ್ಲಿ ದಬ್ಬಾಳಿಕೆಯೇ ದ್ವಿಗುಣಿಸದಾಗಿ ಸಾಗಿಸಲ್ಪಟ್ಟಿದೆ. ಇದನ್ನು ಕಂಡು ಯಾರಿಗಾದರೂ ಪರಿಷತ್ತಿಗೆ ಗೊಂದೆಯಾ ಆಟವೆಂದು ಹೆಸರಿಟ್ಟಲ್ಲಿ ನನಗೇನೂ ಸೋಜಿಗ ವೆನಿಸುವದಿಲ್ಲ. ಈ ಪರಿಷತ್ತಿನ ಮೂಲಕವಾಗಿ ಹಿಂದುಸ್ಥಾನದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಲು ಹೊರಟ ಭಾರತಮಂತ್ರಿಗಳು ಹಾಗು ವ್ಹಾಯಿಸರಾಯರು ಪ್ರಾಂತಿಕ ಅಧಿಕಾರಿಗಳಿಗೆ ಒತ್ತಾಳಿಕೆಯ ಬಿಗುವನ್ನು ಕೆಲವು ಕಾಲದ ವರೆಗೆ ಸ್ವಲ್ಪ ಸಡಿಲಿಸಲು ಆಜ್ಞೆಯನ್ನು ವಿಧಿಸಬೇಕಾಗಿತ್ತು. ಅವರು ಹಾಗೆ ಮಾಡದ್ದನ್ನು ಕಂಡು ನನಗೆ ಆಶ್ಚರ್ಯ ವೆನಿಸುತ್ತದೆ, ಹಿಂದುಸ್ಥಾನವು ವಿಶೇಷತಃ ಮುಂಬಯಿಯಿಂದ ಇದೇ ತಿಳಿದು ಬಂದ ಸುದ್ದಿಯು ನನ್ನನ್ನು ಬಹು ಚಿಂತಾಕುಲನನ್ನಾಗಿಮಾಡಿದೆಯೆಂದು ತಿಳಿಸಲು ನನಗೆ ಏನೂ ಸಂಕೋಚ ವೆನಿಸುವದಿಲ್ಲ.

ಮಹಾರಾಷ್ಟ್ರದ ಮುಖಂಡರ
ಬಿಡುಗಡೆ

ಮಹಾರಾಷ್ಟ್ರದಲ್ಲಿಯು ಕಾಂಗ್ರೆಸ್ ಮುಖಂಡರಾದ ಶ್ರೀ ಭುಸ್ಕುಟೆ, ಡಿ. ವ್ಹಿ. ಗೋಖಲೆ, ಸಹಸ್ರಬುದ್ಧೆ, ಪ್ರೊ ಜಾವಡೇಕರ, ಜಾ. ಆಗಾಶೆ ಮೊದಲಾದವರು ತಮ್ಮ ತಮ್ಮ ತಿಳಿಯ ಅವಧಿಯನ್ನು ಮುಗಿಸಿಕೊಂಡು ಜೇಲಿನಿಂದ ಬಿಡುಗಡೆ ಹೊಂದಿ ಒಂದಿದ್ದಾರೆ

ಓದುಗರಿಗೆ

ಮುದ್ರಣಾಲಯದೊಳಗಿನ ಮಳೆಜೋಡಿಗುವವರಿಲ್ಲದೆ ಮೊನ್ನೆ ಗಂಟುಬೇನೆಯು ಪೈಲಿ ತೆಗೆಯಿಸಿ ಕೊಂಡದ್ದರಿಂದ ಕನ್ನಡಿಗನು ತಡವಾಗಿ ಹೊರಟಿನು. ಓದುಗರು ಕ್ಷಮಿಸ ಬೇಕು.

ಸೊಲ್ಲಾಪುರದ ಅಪೀಲನ್ನು ಕೆತ್ತಿಒಗೆದರು

ಶ್ರೀ ಧನಶೆಟ್ಟಿ ಮೊದಲಾದವರಿಗೆ ಗಲ್ಲು ಸ್ಥಿರವಾಯಿತು.

ಮೇ ತಿಂಗಳದಲ್ಲಿ ಸೊಲ್ಲಾಪುದಲ್ಲಾರದ ದಂಗೆಯ ಸಂಬಂಧವಾಗಿ ವಿಚಾರಣೆಗೆ ಗುರಿ ಮಾಡಲ್ಪಟ್ಟು ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ. ಮಲ್ಲಪ್ಪ ಧನಶೆಟ್ಟಿ, ಸಾಡರ್ಜ, ಸಿಂದೆ ಹಾಗು ಈರಬಾನ ಹುಶೇನರವರ ಅಪೀಲಿನ ವಿಚಾರಣೆಯನ್ನು ಪ್ರೀವ್ಹಿ ಕೌನ್ಸಿಲದವರು ನಿರಾಕರಿಸಿದ್ದಾರೆ. ವಿಚಾರಣೆಯು ಕಾರೀಖು ಬೇಗನೆ ಇಡಲ್ಪಟ್ಟಿದ್ದರಿಂದ ತಮ್ಮ ಸಂರಕ್ಷಣೆಗಾಗಿ ಹಣವನ್ನು ಸಂಗ್ರಹಿಸಲು ತಮಗೆ ವೇಳೆಯು ಸಿಗಲಿಲ್ಲವೆಂದು ಅರ್ಜಿದಾರರು ಹೇಳಿಕೊಂಡರು. ಕೆಳಗಿನ ಕೋರ್ಟಿನವರು ಹೇಳಿದ ಶಿಕ್ಷೆಯಲ್ಲಿ ತಮಗೆ ಕೈಹಾಕುವದು ಅಗತ್ಯ ತೋರುವದಿಲ್ಲವಾಗಿ ಲಾರ್ಡ ಥ್ಯಾರಕರವರಿನ್ನೂ ತೀರ್ಪು ಹೇಳುವಾಗ ಹೇಳಿದರು.

ಜಡ್ಜ ಕೋರ್ಟಿನಲ್ಲಿ ಉಪ್ಪು ಮಾರಿದರು

ಶಾ ॥ ೨೫ ನೆಯ ದಿವಸ ಮುಂಜಾವಿನಲ್ಲಿ ಕರಾಚಿಯ ಓರ್ವ ಸತ್ಯಾಗ್ರಹಿಯು ನಿಷಿದ್ಧವಾದ ಉಪ್ಪನ್ನು ಮಾಡುವದಕ್ಕಾಗಿ ಅಲ್ಲಿಯ ಸ್ಮಾಲಕಾಜ ಕೋರ್ಟಿಗೆ ಹೋದನು. ಸತ್ಯಾಗ್ರಹಿಯು ಕೋರ್ಟಿನಲ್ಲಿ ಹೊಕ್ಕಿದ್ದನ್ನು ಕಂಡು ಸಾವಿರಾರು ಜನರು ಅಲ್ಲಿ ನೆರೆದು ಗೊಂದಲ ಮಾಡಹತ್ತಿದರು. ಜಡ್ಜರಿಗೆ ತಮ್ಮ ಕೆಲಸವನ್ನು ಸಾಗಿಸುವದು ಅಸಾಧ್ಯವಾಯಿತು. ಅವರು ತಮ್ಮ ಕೋಣೆಯೊಳಗೆ ಹೋಗಿ ಕುಳಿತುಕೊಂಡರು. ಬಳಿಕ ಸತ್ಯಾಗ್ರಹಿಯು ಕೋರ್ಟಿನಲ್ಲಿಯೇ ಹೊಕ್ಕು ಜಡ್ಜ ಸಾಹೇಬರ ಮೇಜಿನ ಮೇಲೆ ನಿಂತುಕೊಂಡು " ಸರಕಾರಿ ಕೋರ್ಟುಗಳು ಲಯ ಹೊಂದಿದ್ದು ಮಹಾತ್ಮಗ ಕೋರ್ಟುಗಳೇ ಪ್ರಚಾರದಲ್ಲಿ ಬಂದಿವೆ " ಯೆಂಬುದಾಗಿ ತಾನು ತಂದಿದ್ದ ನಿಷಿದ್ಧವಾದ ಉಪ್ಪನ್ನು ಮಾರಿ ಮರಳಿ ಬಂದನು. ಸಂಜೆಯಲ್ಲಿಯೂ ಕೋರ್ಟಿಗೆ ಹೋಗಿ ಇದೇ ಪ್ರಕಾರವಾಗಿ ಉಪ್ಪು ಮಾರಲು ಅಧಿಕಾರಿಗಳು ಅವನನ್ನು ಸೆರೆ ಹಿಡಿದರು. ಶಾ ! ೨೬ ನೆಯ ದಿವಸದಲ್ಲಿಯೂ ಮತ್ತೊಬ್ಬ ಸತ್ಯಾಗ್ರಹಿಯು ಅಲ್ಲಿಗೆ ಹೋಗಿ ಎರಡು ತಾಸುಗಳ ವರೆಗೆ ಉಪ್ಪು ಮಾರಿದನು. ಅವನನ್ನು ಇನ್ನೂ ಸೆರೆ ಹಿಡಿಯಲ್ಪಟ್ಟಿಲ್ಲ.

ಬನಾರಸ ವಿಶ್ವವಿದ್ಯಾಲಯದ ಗ್ರ್ಯಾಂಟು ಹೋಯಿತು

ಬನಾರಸ ವಿಶ್ವವಿದ್ಯಾಲಯಕ್ಕೆ ಸರಕಾರದಿಂದ ಪ್ರತಿವರ್ಷವೂ ಸಲ್ಲತಕ್ಕ ಗ್ರ್ಯಾಂಟು ಈ ಸಲ ಸರಕಾರದವರಿಂದ ನಿಲ್ಲಿಸಲ್ಪಟ್ಟಿದೆ.

ಕಾಂಗ್ರೆಸ್ ವರ್ಕಿಂಗ ಕಮೀಟಿಯ ಸಭಾಸದರು.

ಅಖಿಲ ಭಾರತ ರಾಷ್ಟ್ರಸಭೆಯ ವರ್ಕಿಂಗ ಕಮೀಟಿಯಲ್ಲಿ ಕೆಳಗಿನವರು ಸಭಾಸದರಾಗಿ ಇರುವರಾಗಿ ತಿಳಿದುಬರುತ್ತದೆ.

೧ ಸರದಾರ ವಲ್ಲಭಭಾಯಿ ಪಟೇಲ (ಅಧ್ಯಕ್ಷ) ೨ ಪಂಡಿತ ನೇಹರೂ ೩ ಶ್ರೀಮತಿ ಕಮಲಾ ನೆಹರೂ. ೪ ಪುರುಷೋತ್ತಮದಾಸ ಟಂಡನ್. ೫ ಮೌಲಾನಾ ಅಬ್ದುಲ್ ಕಾದರ ಕಸೂರಿ. ೬ ಎಸ್. ಎ. ಬ್ರೆಳವಿ. ೭ ಕೆ. ಎಂ, ಮುನಶಿ ೮ ನೋಹನ ಲಾಲ ಸೆಕ್ಸೆನಾ. ೯ ಶ್ರೀನಿವಾಸರಾವ ಕೌಜಲಗಿ. ೧೦ ಡಾ. ಎನ್. ಎಸ್. ಹರ್ಡೀಕರ. ೧೧ ವ್ಹಿ. ಎಲ್. ನಾಯ್ಡೂ ೧೨ ಎಸ್. ವ್ಹಿ ಬ್ಯಾಂಕರ, ೧೩ ಜಯರಾಮದಾಸ ದೌಲತರಾಮ- ೧೪ ಮಹಾದೇವಭಾಯಿ ದೇಸಾಯಿ. ಇವರಲ್ಲಿ ಶ್ರೀ ಜಯರಾಮದಾಸರಿಗೆ ಈಗ ಶಿಕ್ಷೆಯಾಗಿದ್ದು, ಶ್ರೀ ಬ್ರೆಳವಿ ಮತ್ತು ಮಹಾದೇವ ಭಾಯಿಯವರು ಬಂಧನಕ್ಕೊಳಗಾಗಿದ್ದಾರೆ.

ಏನಾವುರದಲ್ಲಿ ೫ ಜನರನ್ನು ಹಿಡಿದರು

ಜವಾಹರಲಾಲ ದಿನದ ದಿವಸ ನಡೆದ ಸಭೆಯಲ್ಲಿ ಧ್ವಜ ತೆಗೆದುಕೊಂಡಿದ್ದಕ್ಕಾಗಿ ಬೆಳಗಾವಿ ಜಿಲ್ಲೆಗೆ ಸೇರಿದ ಏನಾವುರದಲ್ಲಿ ೫ ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ವರ್ಕಿಂಗ ಕಮೀಟಿಯು ತಾವನ್ನು ಓದಿ ಹೇಳಿದ್ದಕ್ಕಾಗಿ ಹುಬ್ಬಳ್ಳಿಯ ಶ್ರೀ ವರಖೇಡಿ ಮೊದಲಾದ ೧೧ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೪ ತಿಂಗಳ ಕಠಿಣ ಶಿಕ್ಷೆಯು ದೊರೆತಿದೆ.

ಇಹವೃತ್ತ.

ಶಾ॥ ೧೦ ನೆಯ ಆಗಸ್ಟದ ದಿವಸ ರಾಷ್ಟ್ರ ಧ್ವಜ ಸತ್ಯಾಗ್ರಹ ಮಂಡಳದವರಿಂದ ನಗರ ಸಭೆಯ ಕಟ್ಟಡದ ಮೇಲೆ ನಿಲ್ಲಿಸಲ್ಪಟ್ಟ ರಾಷ್ಟ್ರ ಧ್ವಜವನ್ನು ತೊಸ್ಸಿನ ದಿವಸ ರಾತ್ರಿಯಲ್ಲಿ ಯಾರೋ ಕಿತ್ತಿ ಒಗೆದು ಬಾಗಲಕೋಟೆಗೇನೆ ಕಪ್ಪನ್ನು ಬಡೆದಿರುವರು. ಅದನ್ನು ಕಿತ್ತಿ ಒಗೆದವರು ಯಾರೇ ಇದ್ದರೂ, ಅದರ ಹೊಣೆಗಾರಿಕೆಯೆಲ್ಲವೂ ನಗರಾಧ್ಯಕ್ಷರು ಹಾಗು ನಗರಸಭೆಯ ಸಭಾಸದರಮೇಲೆಯೆ ಇರುವದು. ಯಾಕಂದರೆ ಮತಪಾತ್ರರೆಲ್ಲರೂ ಕೂಡಿಕೊಂಡು ಅದನ್ನು ರಕ್ಷಿಸಲು ಅವರ ಕಡೆಗೆ ಒಪ್ಪಿಸಿದ್ದರು. ನೋಡಬೇಕು! ನಗರಸಭೆಯ ಸಭಾಸದರು ಈ ವಿಷಯದಲ್ಲಿ ತಮ್ಮ ಸ್ವಾಭಿಮಾನವನ್ನು ಕಾಯ್ದುಕೊಳ್ಳುವರೋ ಇಲ್ಲವೆ ಅದಕ್ಕೆ ತಿಲಾಂಜಲಿಯನ್ನು ಕೊಟ್ಟು ಸುಮ್ಮನೆ ಕುಳಿತುಕೊಳ್ಳುವರೋ!

ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಇಲ್ಲಿಯ ಕಟ್ಟರ ಕಾಂಗ್ರೆಸ ಭಕ್ತರಾದ ಶ್ರೀ ಜಯರಾವ ನಂಗುಂದ ವಕೀಲರಿಗೆ ಮತೆರ್ತೊಂದು ಆರೋಪಕ್ಕಾಗಿ ೩ ತಿಂಗಳ ಸಾದಾ ಕಾರಾಗೃಹವಾಸ ಹಾಗು ೨೫೦ ರು. ದಂಡ, ದಂಡ ಕೊಡದಿದ್ದರೆ ಮತ್ತೆ ಒಂದು ತಿಂಗಳ ಕಾಧಾನೃಹವಾಸ ಹೀಗೆ ಶಿಕ್ಷೆಯಾಗಿದೆ.

ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಸುಗ್ಗನೇಂದ್ರ ಕೆರೂರ, ನೆಂಕಟೇಶ ವಿರ್ಜಿ, ಗೋಪೆ ಮೊದಲಾದ ೫೦ ಜನ ರಾಜಕೀಯ ಕೈದಿಗಳನ್ನು ವಿಜಾಪುರ ಜೇಲಿಗೆ ಒಯ್ದುರುತ್ತಾರೆಂದು ತಿಳಿಯುತ್ತದೆ.

ಗಂಟು ಬೇನೆಯು ರೋಗವು ದಿನದಿನಕ್ಕೆ ಹೆಚ್ಚಾಗುತ್ತ ನಡೆದಿದೆ. ಶಾ॥ ೨೮ ಕ್ಕೆ ಮುಗಿಯುವ ವಾರದಲ್ಲಿ ೨೦ ಜನರು ಬೇನೆದಿದ್ದು, ೬ ಜನರು ಮರಣಹೊಂದಿದ್ದಾರೆ. ನಗರಸಭೆಯು ಕರು ಊರೊಳಗಿನ ಕೊಳೆಯನ್ನು ಹೋಗಲಾಡಿಸಲು ಇನ್ನಾದರೂ ಸಾಕಷ್ಟು ದಕ್ಷರಾಗಿ ಬೇಕು.

ಸಾತಾರೆಯ ಸತ್ಯಾಗ್ರಹ ಮಂಡಳದ ಸರ್ವಾಧಿಕಾರಿಗಳಾದ ಶ್ರೀ ಗುಡನಾಥ ಜೋತಿಯವರಿಗೆ ಇ. ಪಿ ಕೋಡಿನ ೧೨೬ ನೆಯ ಕಲಮಿನನ್ವಯ ೪ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆತಿದೆ.

ಹುನಗುಂದದ ಕಾಂಗ್ರೆಸ್ ಕಾರ್ಯಕರ್ತರಿಗೆ

೧೯ ಜನರಿಗೆ ಶಿಕ್ಷೆಯಾಯಿತು.

ಹುನಗುಂದ ಹಾಗು ಕರ ತಗಾದೆಯಲ್ಲಿ ಕೈ ಅನೇಂಡವೆಂಟು ಕಾಯ್ದೆಯ ೧೭ ನೆಯ ಲವಿನ ಪ್ರಕಾರ ಸೆರೆಹಿಡಿಯಲ್ಪಟ್ಟ ಅಲ್ಲಿಯ ೀ ರಾಘವೇಂದ್ರರಾವ ದೇಸಾಯಿ ವಕೀಲ ಮ್ಮಣ್ಣಾಚಾರ್ಯ ಕಟ್ಟಿ, ಬಸೆಟ್ಟಿಪ್ಪ ಬಳೂ ಪ್ರಾಣೇಶಾಚಾರ್ಯ ಗುಡ್ಡದ ಮೊದಲಾದ ೯ ಜನ ಕಾಂಗ್ರೆಸ್ ಕಾರ್ಯಕರ್ತರ ಖಟ್ಲೆಯ ಚಾರಣೆಯು ತಾಳಿಕೋಟೆಯಲ್ಲಿ ಡಿ ವಿ. ಲೆಸ್ಟರವರವರಮುಂದೆ ನಡೆದು ಮೊನ್ನೆಯ ಸೋಮ ವಾರ ಕೇಳಿದಂತೆ ತೀರ್ಪು ಹೀ ಬ್ಲಿಷ್ಠವಿತ.

೧ ಶ್ರೀ. ರಾಘವೇಂದ್ರರಾವ ದೆ ಸಾಯಿ ಕೀಲರ. ೨ ನಂಜರಾಚಾರ್ಯ ಉರ್ಫ ಮ್ಮಣ್ಣಾಚಾರ್ಯ ಕಟ್ಟಿ ೩ ಬಸೆಟ್ಟಿಪ್ಪ ಳಲೊಟಗಿ. ೪ ಪ್ರಾಣೇಶಾಚಾರ್ಯ ಗುಡ್ಡದ ವಧ್ಯರಾವ ಪ್ಯಾಟಿ. ೬ ಜಣಮಂತಾ ಕಾರ್ಯ ಜೋಶಿ. ಪ್ರತಿಯೊಬ್ಬರಿಗೂ ೬ ತಿಂಗಳ ಠಿಣ ಶಿಕ್ಷೆ ಮತ್ತು ೨೦೦ ರೂಪಾಯಿ ದಂಡ ಸಿದ್ದಪ್ಪ ಕಡಪಟ್ಟಿ. ೮ ಸಂಗನಬಸಪ್ಪ ಬೆಳೊಟಗಿ. ೯ ಈಶ್ವರಪ್ಪ ಕವಾಲದಾರ. ೧೦ ಜಾಫರ ಸಾಹೇಬ ಲೈಂದ. ೧೧ ಕೃಷ್ಣಾ ಚಾರ್ಯ ಅನಂತ ಭಟ್ಟನವರ ೧೨ ಪ್ರಲ್ಹಾದಾ ಚಾರ್ಯ ಪಂಥರಿ. ೧೩ ರಾಘವೇಂದ್ರಾಚಾರ್ಯ ಕಟ್ಟಿ ೧೪ ಸಾಂಡೂರಂಗ ಚಿತ್ತರಗಿ. ೧೫ ಭೀಮಾ ಸೀ ಸಾಯಿ. ೧೬ ವಾಜೇಂದ್ರ ಜೋಶಿ. ೧೭ ರಾಘ ವೇಂದ್ರ ಜೋಶಿ. ೧೮ ಶ್ರೀನಿವಾಸ ಹಾಗೂರ. ೧೯ ದಿಶ್ಶಂಮನಿ. ಪ್ರತಿಯೊಬ್ಬರಿಗೂ ೩ ತಿಂಗಳ ಠಿಣ ಶಿಕ್ಷೆ ಹಾಗು ೫೦ ರು. ದಂಡ

ವಿಚಾರಣೆಯಲ್ಲಿ ಯಾವ ಯಾವ ತಪ್ಪ ಗಿಂದಲೂ ಭಾಗ ತೆಗೆದುಕೊಳ್ಳಲಿಲ್ಲ. ಎಲ್ಲ ಸಾ ದೇಶಸೇವೆ ಮಾಡುವದೇ ತಮ್ಮ ಉದ್ಯೋಗ ವಾದದೆಯೆಂದು ಸಬ್ ಡಿವಿಜನಲ್ ಮ್ಯಾಜಿ ಸ್ಟ್ರೇಟರಿಗೆ ತಿಳಿಸಿದರು. "ಸಾಕ್ಷಿದಾರ ವಿಷ ವಿಸನ್ನಾದಷ್ಟೂ ಹೇಳುವದಿದೆಯೋ" ಎಂದು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಪ್ರಶ್ನೆಮಾಡಿದಾಗ್ಗೆ ಶ್ರೀ ಪ್ರಲ್ಹಾದ ಜೋಶಿಯವರು ಸಾಕ್ಷಿ ಹೇಳಿ ಬಹುಮಾನಮಾಡಿದ್ದಕ್ಕೆ ಸಾಕ್ಷಿದಾರರಿಗೆ ಋಣಿಯಾಗಿದ್ದೇ"ವಾಗಿ ತಿಳಿ ದರು. ಶ್ರೀ ದೇಸಾಯಿ ರಾಘವೇಂದ್ರರಾಯರು "ಬಿ" ವರ್ಗವು ಕೊಡಲ್ಪಟ್ಟಿದ್ದು, ಉಳಿ ದವರಿಗೆಲ್ಲ "ಎ" ವರ್ಗವು ದೊರೆತಿತು. ಶ್ರೀ ದೇಸಾಯಿ ರಾಘವೇಂದ್ರರಾಯರು ಅಸಹಕಾರ ಚಳವಳಿಯು ಪ್ರಾರಂಭವಾದಂದಿನಿಂದಲೂ ಈ ವರೆಗೆ ಕಾಂಗ್ರೆಸ್ ಕಾರ್ಯವನ್ನು ಅವ್ಯಾಹತ ವಾಗಿ ಸಾಗಿಸಿ ಆ ತಾಲೂಕಿನಲ್ಲಿ ವಿಶೇಷ ಜಾಗೃತಿಯನ್ನುಂಟು ಮಾಡಿದ್ದರು.

ಮುಂಬಯಿಯಲ್ಲಿ
ಸಿಂದೀ ಅಂಗಡಿಗಳ ಪಿಕೆಟಿಂಗ

ಮುಂಬಯಿಯು ಜವಾಹರ್ ಉಲ್ ಉದ್ದೇಶವಾದ ಸ್ವಯಂಸೇವಕರು ತಾ. ೨೫ನೆಯ ದಿವಸದಿಂದ ಅಲ್ಲಿಯ ಸಿಂದಿ ಅಂಗಡಿಗಳಮುಂದೆ ಪಿಕೆಟಿಂಗಮಾಡುವದನ್ನು ಪ್ರಾರಂಭಿಸಿದ್ದು, ತಾ| ೩೦ನೆಯ ದಿವಸ ಅವರು ಒಟ್ಟಿಗೆ ೩೧ ಅಂಗಡಿಗಳಮುಂದೆ ಪಿಕೆಟಿಂಗ ಮಾಡಿದರು. ಮೊದಲಿನ ಎರಡು ಮೂರು ದಿನಗಳವರೆಗೆ ಅಧಿಕಾರಿಗಳ. ಯಾವನ್ನೂ ಸೆರೆಹಿಡಿಯಲಿಲ್ಲ. ಆದರೆ ಸ್ವಯಂ ಸೇವಕರು ಹೆಚ್ಚು ಹೆಚ್ಚು ಅಂಗ ಡಿಗಳಮುಂದೆ ಪಿಕೆಟಿಂಗ ಪ್ರಾರಂಭಿಸಿದಷ್ಟೂಡಲೇ ಅಧಿಕಾರಿಗಳಾದರೂ ದಬ್ಬಾಳಿಕೆಯನ್ನು ಪ್ರಾರಂ ಭಿಸಿ ೬ ಜನ ಸ್ವಯಂಸೇವಕರನ್ನು ಸೆರೆಹಿಡಿದು ಕೊಂಡು ಹೋದರು.

ಮದ್ದುಗುಂಡುಗಳ ಕಳವಿಗಾಗಿ
ಮುಂಬಯಿಯಲ್ಲಿ ಇಬ್ಬರನ್ನು ಹಿಡಿದರು

ಮುಂಬಯಿಯು "ಆರ್ಮಿಭವನ್" ಅಂದ ರನ್ನ"ವು ಅಂಗಡಿಯಲ್ಲಿಯ ವರ್ತಮಾನದು ಗಳ ಕಳವಿನ ಆರೋಪದಿಂದ ಮುಕ್ತಿಯೂಬಖಾನ ಮತ್ತು ಮಜೀದಖಾನ ಎಂಬ ಇಬ್ಬರು ಸೇವ ಕರು ಪೋಲೀಸರಿಂದ ಬಂಧಿಸಲ್ಪಟ್ಟ ದ್ದಾರೆ.

ಗಾಂಧೀ ಟೊಪ್ಪಿಗೆಗಾಗಿ
ವಿದ್ಯಾರ್ಥಿಗಳಿಗೆ ಏಟುಬಿದ್ದವು.

ಕೆಲ್ಹಿನ್ನೂ ಮೆಂಬರರಾದ ಮಿ. ಹಡಸನ್ನರು ತಾ| ೨೦ ನೆಯ ದಿವಸ ಡಕ್ಕಾನಿರಿಗೆ ಹೋಗಿ ವ ದಿವಸ ಅಲ್ಲಿಯ ಸರಕಾರಿ ಶಾಲೆಗೆ ಭೆಟ್ಟಿ ಕೊಟ್ಟರು. ಆಂದು ಕೆಲವು ವಿದ್ಯಾರ್ಥಿಗಳು ಶಾಲೆಗೆ ಗಾಂಧಿಟೊಪ್ಪಿಗೆಯನ್ನು ಹಾಕಿಕೊಂಡು ಹೋಗಿದ್ದರು. ಅಧಿಕಾರಿಗಳು ಶಾಲೆಗೆ ಆಗುವ ಐಶ್ವರ್ಯ ಪೂರ್ವದಲ್ಲಯೇ ಶಾಲಾಧ್ಯಾಪಕರು ಆ ವಿದ್ಯಾರ್ಥಿಗಳನ್ನು ಕರೆದು ಗಾಂಧಿಟೊಪ್ಪಿಗೆ ಯನ್ನು ಹಾಕಿಕೊಂಡು ಬಂದಿದ್ದಕ್ಕಾಗಿ ಅವರಿಗೆ ಬೆತ್ತದ ಏಟುಗಳನ್ನು ಕೊಟ್ಟರು.

ಉಡುಪಿಯಲ್ಲಿ ೩ ಜನರಿಗೆ ಶಿಕ್ಷೆ.

೧೪೪ ನೆಯ ಕಲವಿನ ವಿರುದ್ಧ ವರ್ತಿಸಿ ದ್ದಕ್ಕಾಗಿ ಉಡುಪಿಯ ಶ್ರೀ ಸಂಜೀವ ಹೆಗಡೆ, ಯು. ಮಂಜುನಾಥ ಮತ್ತು ಕೆ ವಿಠ್ಠಲ ಹೆಗಡೆ ಈ ಮೂವರು ಸ್ವಯಂಸೇವಕರಿಗೆ ಪ್ರತ್ಯೇಕ ವಾಗಿ ೩ ತಿಂಗಳ ಠಿಣ ಕಾರಾಗೃಹವಾಸದ ಶಿಕ್ಷೆಯನ್ನು ದೊರೆತಿದೆ.

ವಕೀಲರ ಮೇಲೆ ಗದೆ

ಅಡಪಯ ಕಾಯ್ದೆಭಂಗದಲ್ಲಿ ಭಾಗ ತೆಗೆದುಕೊಂಡದ್ದಕ್ಕಾಗಿ ಶಿಕ್ಷೆಗೆ ಗುರಿಯಾದ ಜೂಪಶಂಕರಾಳದ ಶ್ರೀ ಎನ್. ಬಿ. ಜೀಕಪಾಂಡೆ ಯವರ ವಕೀಲಿಯ ಸನದನ್ನು ಮೇಲಿನ ನ್ಯಾ ಧಾಧಿಕಾರಿಗಳು ೩ ತಿಂಗಳುಗಳವರೆಗೆ ರದ್ದು ಪಡಿಸಿದ್ದಾರೆ.

ಮಹಾರಾಷ್ಟ್ರದಲ್ಲಿ
೨೪೦ ಜನರಿಗೆ ಸೆರೆವಾಸ.

ಸತ್ಯಾಗ್ರಹ ಚಳವಳಿಯು ಸುರವಾದಂ ದಿನಿಂದ ಸಪ್ಟಂಬರ ೧೫ನೆಯ ತಾರೀಖಿನ ವರೆಗೆ ಮಹಾರಾಷ್ಟ್ರದಲ್ಲಿ ಸತ್ಯಾಗ್ರಹದ ವಹಿಸಿಕೊಂಡು ತಿಗಿಂ ಜನರು ಸೆರೆವಾಸ ಸೇರಿರುವರೆಂದೂ ಜವಾಹಿರಲಾಲಜಿಯವರ ನಿಮಿತ್ತವಾಗಿ ೧೯ ಜನ ರಿಗೆ ಶಿಕ್ಷೆಯಾಗಿದೆಯೆಂದೂ ತಿಳಿದು ಬರುತ್ತದೆ.

ಕಲಕತ್ತೆಯಲ್ಲಿ
೧೫೫ ಜನರಿಗೆ ೧೫ ತಿಂಗಳ ಕಠಿಣ ಶಿಕ್ಷೆ

ಕಲಕತ್ತೆಯ ೨೪ ಪರಗಣಗಳ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಹಾಗು ಉಪಾಧ್ಯಕ್ಷರಾದ ಶ್ರೀ ಬಿಪಿನ ಗಂಗೂಲಿ, ಶ್ರೀ ಸತ್ಯರಂಜನ ಬಕ್ಷಿ ಮೊದಲಾದ ೧೫೫ ಜನರಿಗೆ ಉಪ್ಪಿನ ಕಾಯ್ದೆ ಭಂಗಕ್ಕಾಗಿ ಸಿದ್ಧರಾದ ಸತ್ಯಾಗ್ರಹಿಗ ಳನ್ನು ತಮ್ಮಲ್ಲಿ ತಗಿಸಿಕೊಂಡದ್ದಕ್ಕಾಗಿಯೂ ಮತ್ತು ಪಿಕೆಟಿಂಗಕ್ಕೆ ಉತ್ತೇಜನ ಕೊಟ್ಟದ್ದಕ್ಕಾ ಗಿಯೂ ಪ್ರತ್ಯೇಕವಾಗಿ ೧೫ ತಿಂಗಳ ಠಿಣ ಶಿಕ್ಷೆಯು ದೊರೆತಿದೆ.

ಮಧ್ಯಪ್ರಾಂತದಲ್ಲಿ
ಪೋಲೀಸರ ಪೀಡೆಯು ಹೆಚ್ಚಾಯಿತು.

ಅಮೃತಸರದ ದೇಲ್ಲೆ ಸ್ಟೇಶನದಲ್ಲಿ ರಾಜ್ಯ ದ್ರೋಹಿಕರ ಹತ್ತು ಪತ್ರಿಕೆಗಳನ್ನು ಹಂಚಿದ್ದ ಕ್ಕಾಗಿ ಸೆರೆ ಹಿಡಿಯಲ್ಪಟ್ಟ ಶ್ರೀ ನಾರಾಯಣ ಪ್ರಸಾದ ಬ್ಯಾನರ್ಜಿಯವರ ಖಟ್ಲೆಯು ವಿಚಾರಣೆಯು ತಾ|೨೧ನೇ ಬುಧವಾರ ದಿವಸ ಅಲ್ಲಿಯ ಮ್ಯಾಜಿಸ್ಟ್ರೇಟರ ಮುಂದೆ ನಡೆದು ನಾಲಂದಕ್ಕೆ ಹಾಕಲ್ಪಟ್ಟಿತು. ವಿಚಾರಣೆಯು ವಂದಕ್ಕೆ ಹಾಕಲ್ಪಟ್ಟದ್ದನ್ನು ಕಂಡು ಶ್ರೀ ಬ್ಯಾನರ್ಜಿಯವರು ಕೋರ್ಟಿಗೆ ಪೋಲೀಸರು ತಮ್ಮ ಬೆನ್ನಿನಮೇಲೆ ೪೪ ಏಟುಗಳ ವಜ್ಜೆಯನ್ನು ಹೊಡಿಸಿಯೂ ಮೊಣಕಾಲುಗಳಲ್ಲಿ ಕೈಹಾಯಿಸಿ ಕೆಲಿಗಳನ್ನು ಹಿಡಿಸಿಯೂ ಕೈಗೆ ರಾತ್ರಿ ಯಲ್ಲೆಲ್ಲ ಬೇಡಿಗಳನ್ನು ಹಾಕಿಯೂ, ಕಣ್ಣ ಕೈಗ್ಗಳನ್ನು ತಾವು ಕೂಡುವ ಕೋಣೆಗಳಲ್ಲಿ ಇರಿಸಿ ಪೋಲೀಸರು ಅವುಗಳ ಮೇಲೆ ಕುಳಿತುಕೊಂಡು ತಮಗೆ ತಮಗೆ ಒಳಗೇ ಪೀಡೆಯನ್ನು ಬಟ್ಟುಮಾಡಿದರೆಂಬುದಾಗಿ ತಿಳಿಸಿದರು.

ಶ್ರೀ ತುಳಪುಳೆಯವರ
ತೂಕವು ೫೦ ಪೌಂಡು ಕಡಿಮೆಯಾಯಿತ.

ಯಿರವಡಾ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಪುಣೆಯ ನಗರ ಭೆಯ ಅಧ್ಯಕ್ಷರಾದ ಶ್ರೀ ಹರಿಭಾವು ತುಳಪುಳೆಯವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|೨೪ನೆಯ ದಿವಸ ಯರವಡಾ ಜೇಲಿನಿಂದ ಬಿಡುಗಡೆ ಹೊಂದಿ ಬಂದರು. ಅವರ ತೂಕವು ಸುಮಾರು ೫೦ ಪೌಂಡು ಕಡಿಮೆಯಾಗಿದೆ.

ಸೀಮರು
ಪಿಕೆಟಿಂಗಕ್ಕಾಗಿ ಟೊಂಕಕಟ್ಟಿದರು.

ತಾ|| ೨೩ನೆಯ ದಿವಸ ಅಮೃತಸರದಲ್ಲಿ ಸೀಖ ಜನಾಂಗದ ಸರ್ವಪಕ್ಷೀಯ ಪರಿಷತ್ತಿನ ಅಧಿವೇಶನವು ಸೇರಿ ಸಿಂದೀ ಅಂದಾಗಳ ಪಿಕೆಟಿಂಗ ಮತ್ತು ಪರದೇಶಿ ಸರಕುಗಳ ಬಹಿಷ್ಕಾರದ ಕಾರ್ಯಕ್ರಮಗಳನ್ನು ಕೈಕೊಂಡು ಗುರುದ್ವಾರಕ್ಕೆ ಸಂಬಂಧಿಸಿದ ಅನ್ಯಾಯಗಳನ್ನು ಸರಿಪಡಿಸಲು ಸರಕಾರಕ್ಕೆ ಒತ್ತಾಯಪಡಿಸುವ ಮತ್ತು ಹಿಂದುಸ್ತಾನ ಸರಕಾರದವರು ಒಪ್ಪಿಸಿದ ಖರೀತಾಯು ಸೀಖ ಜನರ ಹಳ್ಳಿಗಳ ಮೇಲೆ ಗಡಿಯನ್ನು ತರುವಂತಹದಿದ್ದುದರಿಂದ ಅದರ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸುವ ಗೊತ್ತುಗಳು ಸ್ವೀಕೃತವಾದವು.

ರಂಗೂನಿನಲ್ಲಿ,
ಮನೆಗಳ ಝಡತಿ

ರಂಗೂನಿನ ಸಿ ಆಯ. ಡಿ. ಜನರು ಅಲ್ಲಿಯ ಪೋಲೀಸ ಅಧಿಕಾರಿಗಳೊಂದಿಗೆ ಕೂಡಿಕೊಂಡು ತಾ|೨೪ನೆಯ ದಿವಸ ಅಲ್ಲಿಯ ಎಷ್ಟೋ ಮನೆಗಳನ್ನು ಝಡತೀಮಾಡಿ ಕೆಲವು ಕಾಗದ ಪತ್ರ ಹಾಗು ಪುಸ್ತಕಗಳನ್ನು ಜಪ್ತುಮಾಡಿಕೊಂಡು ಹೋದರು.

ಶ್ರೀ ಜಗತ್ ನಾರಾಯಣರಿಗೆ
ಮತ್ತೆ ೬ ತಿಂಗಳ ಶಿಕ್ಷೆ.

ಬಿಹಾರದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಪಂಡಿತ ಜಗತ್ ನಾರಾಯಣರಿಗೆ ಮತ್ತೆ ೬ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ ಅವರಿಗೆ ಸಾಮಧಿಭಂಗದ ವಾಲಕವಾಗಿ ಈ ಹೊಸದಾಗಿ ೬ ತಿಂಗಳ ಶಿಕ್ಷೆಯಾಗಿದ್ದು ಅವರು ಅದನ್ನು ಅನುಭವಿಸುತ್ತಿರುವರು.

ಜನರನ್ನು ಬೆದರಿಸಿದ್ದಕ್ಕಾಗಿ
ಸತ್ಯಾಗ್ರಹಿಗೆ ೬ ತಿಂಗಳ ಶಿಕ್ಷೆಯಾಯಿತು.

ಸರಕಾರಿ ಕಾಲೇಜಿನ ಪಿಕೆಟಿಂಗ ಮಾಡುವದಿದ್ದು ಆ ಸುತ್ತಲವಾಗಿ ಪೋಲೀಸರು ಲಾಠಿಗಳನ್ನು ಪ್ರಯೋಗಿಸುವರೆಂದು ತಮ್ಮ ತೂರಿಯನ್ನು ಊದಿ ತಾ|೩೦ ನೆಯ ದಿವಸ ಜನರನ್ನು ಮುಲ್ಕೇ ಬೆದರಿಸಿದ್ದಕ್ಕಾಗಿ ಅಲಾಹಾಬಾದಿನ ಸಂಗಮಲಾಲ ಎಂಬ ಸತ್ಯಾಗ್ರಹಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಸುರತದಲ್ಲಿ ೨೨ಜನರಿಗೆ ಶಿಕ್ಷೆ.

ಬಾರ್ಡೋಲಿ ಅಶ್ರಮಾದಿ ೨೨ ಜನರಿಗೆ ಕಾಯಿದೆ ಪರಿಷ್ಕರಣದ ಸಂಘರ್ಷಕ್ಕೆ ಸೇರಿಕೊಂಡಿದ್ದಕ್ಕಾಗಿ ೧ ತಿಂಗಳಿಂದ ೬ ತಿಂಗಳವರೆಗೆ ಶಿಕ್ಷೆಗಳಾಗಿದ್ದು, ಅಶ್ರಮದ ವ್ಯವಸ್ಥಾಪಕರಾದ ಶ್ರೀ ಮಿಠಾಬಾಯಿ ಪಟೇಲ ಮತ್ತು ಜಮಿಲಾಬೆ ಹತ್ತಾರವರಿಗೆ ೪ ತಿಂಗಳ ಆರೋಪಕ್ಕಾಗಿ ೪ತಿಂಗಳಿಂದ ೬ತಿಂಗಳ ವರೆಗೆ ಕಠಿಣ ಶಿಕ್ಷೆಯು ಕೊಡಲ್ಪಟ್ಟಿದೆ.

ಸುದ್ದಿಗಳು.

ಅಹಮ್ಮದಾಬಾದಿನ ಸರ್ವಾಧಿಕಾರಿಗಳಾದ ಶ್ರೀಮತಿ ಸರಲಾದೇವಿ ಅಂಬಾಲಾಲ ಮತ್ತು ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀಮತಿ ಖರಶೇದ ದೇನ, ಶ್ರೀಮತಿ ವೈದುಲಾಲ ವೊದಲಾದವರ ವಿಚಾರಣೆಯು ತಾ|೨೨ನೆಯ ದಿವಸ ಅಹಮ್ಮದಾಬಾದಿನಲ್ಲಿ ನಡೆಯಿತು ಶ್ರೀಮತಿ ಸರಲಾದೇವಿಯವರಿಗೆ ೧೫೦೦ ರೂ. ದಂಡ ಶ್ರೀಮತಿ ಖರಶೇದ ಬೇನ ಮತ್ತು ಶ್ರೀಮತಿ ವೈದುಲಾಲರಿಗೆ ೫೦ ರೂ ದಂಡ ಇಲ್ಲವೆ ೧೫ ದಿವಸಗಳ ಕಠಿಣ ಶಿಕ್ಷೆಯು ಕೊಡಲ್ಪಟ್ಟಿತು. ಜವಾಹಿರಲಾಲ ದಿನದ ಮೇರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದುದೇ ಅವರ ಅಪರಾಧವಾಗಿತ್ತೆ.

ಮುಂಬಯಿಯಲ್ಲಿ ತಾ|೨೧ನೆಯ ದಿವಸ ರಾತ್ರಿಯಲ್ಲಿ ಯಾರೊ ಕೆಲವರು ಅಲ್ಲಿಯ "ಗುಲಾಮ ಹುಸೇನ ಇಕ್ಬಿಫಾಲು ಅಂಡ ಕಂಪನಿ" ಎಂಬ ಮದ್ದುಗುಂಡುಗಳ ಅಂಗಡಿಗೆ ಕನ್ನ ಹಾಕಿದ್ದು ೯ ಪಿಸ್ತೂಲುಗಳನ್ನೂ, ೧೦ ಜಂಬಿಪಾಗಾರಗಳನ್ನೂ ಪತ್ತೆ ಬಹಳಷ್ಟು ಮದ್ದುಗುಂಡುಗಳನ್ನೂ ಕಳವು ಮಾಡಿಕೊಂಡು ಹೋದರು. ಪೋಲೀಸರು ಅಪರಾಧಿಗಳ ಶೋಧ ನಡಿಸಿರುವರು.

ಎರಡು ತಿಂಗಳುಗಳವರೆಗೆ ಕಂಟಾಯಿಯು ಹದ್ದಿಯಲ್ಲಿ ಭಾಷಣಮಾಡಕೂಡದೆಂಬುದಾಗಿ ಡಿ. ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯನ್ನು ಅಲ್ಲಗಳೆದು ಕರಾಚಿಯಲ್ಲಿ ಸಾರ್ವಜನಿಕವಾಗಿ ಭಾಷಣಮಾಡಿದ ಸಿಂಧಪ್ರಾಂತದ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ಜಮಶೆಡ್ ಮೆಹತಾರವರ ಖಟ್ಲೆಯು ವಿಚಾರಣೆಯು ತಾ|೨೧ ನೆಯ ದಿವಸ ಅಲ್ಲಿಯ ಮ್ಯಾಜಿಸ್ಟ್ರೇಟರ ಮುಂದೆ ನಡೆದು, ಅವರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ಕೊಡಲ್ಪಟ್ಟಿತು. ಇವರು ೧೪ನೆಯ ತಾ|೨೧ನೆಯ ದಿವಸ ಜೇಲಿನಿಂದ ಬಿಡುಗಡೆಯಾಗಿ ಬಂದಿದ್ದರು.

ಗುಜರಾತ ಪ್ರಾಂತದಲ್ಲಿ ಅಸಂದನೆಂಬ ಪೊಂಡು ಶಾಲಾಕಾಲಿನ ಸ್ಥಳವುಂಟು. ಅಲ್ಲಿಯ ವಿದ್ಯಾರ್ಥಿಗಳಲ್ಲಿ ಶ್ರೀ ತಲಾಟಿ ಹಾಗು ಪಂಡೆ ಎಂಬ ಇಬ್ಬರು ಕಾರ್ಯಕರ್ತರಿದ್ದರು. ಅವರು ಪ್ರಚಾರಕ್ಕೆಂದಲ್ಲಿಗೆ ಗಾಂಧಿ ಟೊಪ್ಪಿಗೆ ಮಾರಲಿಕ್ಕಾಗಿ ಹೋಗಿದ್ದರು. ಅವರ ಈ ವರ್ತನೆಯು ಅಲ್ಲಿಯ ಮಾಮಲೇದಾರರಿಗೆ ಸರಿಬರಲಿಲ್ಲ. ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡು ಮಾರಾಟಮಾಡಿದಕ್ಕಾಗಿ ಅವರು ಕಾರ್ಯಕರ್ತರಿಗೆ ಅಜ್ಞೆಗೈದರು. ಅಜ್ಞೆಯು ಪರಿಣಾಮವು ಒಳಿತಾಗಿಯೇ ಆಯಿತು! ಅವರು ತಮ್ಮ ಉದ್ಯೋಗಗಳನ್ನೇನೆ ರಾಜೀನಾಮೆ ಕೊಟ್ಟು ಬಿಟ್ಟರು! ಮಾತ್ರವಲ್ಲದೆ ಉದ್ಯೋಗಕ್ಕಾಗಿ ಸ್ವಾಭಿಮಾನವನ್ನು ಬಿಟ್ಟುಕೊಡುವದು ಅವರ ಮನಸಿಗೆ ಕರಿ ಬಾ ಕಾಣಲಿಲ್ಲ

ಹಿಟ್ಟಿನ ಗಿರಣಿ ಮಾರಾತತ್ತ್ವದ್ದಿದೆ.

೮ ಬಿಎಚ್ ಪವರ್ ಇಂಜಿನ್ ಲಘು B. H. P. ಆದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವವರಿದೆ ಕರುಸ್ಪಷ್ಟವಾಗಿ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ ಬಾಗಲಕೋಟ.

ಹಿಂದುಸ್ಥಾನದಲ್ಲಿಯ ಆರ್ಡಿನನ್ಸದ ರಾಜ್ಯ

ಸವಿನಯ ಕಾಯದೆಭಂಗದ ಚಳವಳಿಯು ಸುರುವಾದಂದಿನಿಂದ ವ್ಹಾಯಿಸರಾಯ ಸಾಹೇಬರು ಒಂದಂಹಿಂದೊಂದು ಕೆಳಗಿನ ೯ ಆರ್ಡಿನನ್ಸುಗಳನ್ನು ಹೊರಡಿಸಿದರು.

ಸಂಖ್ಯೆ.	ಹೆಸರು.	ಪ್ರಸಿದ್ಧಿಸಿದ ತಾರೀಖು.
೧	ಬಂಗಾಲ ಕ್ರಿಮಿನಲ್ ಲಾ ಅಮೆಂಡಮೆಂಟ.	೧೯ ಎಪ್ರಿಲ್ ೧೯೩೦
೨	ಇಂಡಿಯನ್ ಪ್ರೆಸ್ ಆರ್ಡಿನನ್ಸ	೨೬ ಎಪ್ರಿಲ್ ೧೯೩೦
೩	ಲಾಹೋರ ಕಾನ್ಸ್ಪಿರಸಿ ಕೇಸ ಆರ್ಡಿನನ್ಸ.	೧ ಮೇ ೧೯೩೦
೪	ಸೊಲ್ಲಾಪುರ ಮಾರ್ಶಲ್ ಲಾ. ಆರ್ಡಿನನ್ಸ.	೧೫ ಮೇ ೧೯೩೦
೫	ಪ್ರಿವೆನ್ಶನ್ ಆಫ್ ಇಂಟಿಮಿಡೇಶನ್	೩೦ ಮೇ ೧೯೩೦
೬	ಅನ್‌ಲಾಫುಲ್ ಇನ್‌ಸ್ಟಿಗೇಶನ್	೩೦ ಮೇ ೧೯೩೦
೭	ಅನ್ ಅಥೊರೈಸ್ಡ ನ್ಯೂಸಪೇಪರ ಆ್ಯಂಡ ನ್ಯೂಸ ಪೀಸ್ಸ ಆರ್ಡಿನನ್ಸ	೨ ಜೂನ ೧೯೩೦
೮	ಮಾರ್ಶಲ್ ಲಾ ಆರ್ಡಿನನ್ಸ (ಸಂಹದ್ದ ಪ್ರಾಂತಕ್ಕಾಗಿ)	೧೫ ಆಗಸ್ಟ ೧೯೩೦
೯	ಅನ್‌ಲಾಫುಲ್ ಅಸೋಸಿಯೇಶನ್ ಆರ್ಡಿನನ್ಸ	೧೨ ಅಕ್ಟೋಬರ ೧೯೩೦

ಈ ಆರ್ಡಿನನ್ಸುಗಳಲ್ಲಿ ಮೊದಲನೆಯದು ಬಂಗಾಲ ಸರಕಾರದವರಿಂದ ಕಾಯದೆಯಾಗಿ ಮಾಡಲ್ಪಟ್ಟಿದೆ. ಅದರ ಅವಧಿಯು ತೀರಿ ಹೋಗಿದ್ದರೂ ಸಹ ಕಾಯದೆ ಪುಸ್ತಕದಲ್ಲಿ ಅದಕ್ಕೆ ಶಾಶ್ವತ ಸ್ಥಾನವು ಸಿಕ್ಕಿದೆ. ಪ್ರೆಸ್ ಆರ್ಡಿನನ್ಸದ ಅವಧಿಯು ವಜಾಗಿದುಹೋಗಿದೆ. ಲಾಹೋರ ಒಳಸಂಚಿನ ಖಟ್ಲೆಯೇ ಮುಗಿದುಹೋಗಿದ್ದರಿಂದ ಆ ಆರ್ಡಿನನ್ಸಾವರೂ ನಷ್ಟವಾಗಿದೆ, ಸೊಲ್ಲಾಪುರ ದಂಡಿನ ಕಾಯದೆಯ ಕಾರ್ಯವು ಮುಗಿದಿದ್ದರಿಂದ ಆ ಆರ್ಡಿನನ್ಸಾದರೂ ಮುಕ್ತಾಯ ಹೊಂದಿದೆ. ೫ ಮತ್ತು ೬ ನೆಯ ಆರ್ಡಿನನ್ಸುಗಳೂ ಈ ತಿಂಗಳದ ಕೊನೆಯಲ್ಲಿ ವಿರಾಮ ಹೊಂದುವವು. ೭ ನೆಯ ಆರ್ಡಿನನ್ಸಾದರೂ ೨ ನೆಯ ಆರ್ಡಿನನ್ಸಿನೊಂದಿಗೆ ವಿಸರ್ಜನೆಹೊಂದಿದೆ. ೮ ನೆಯ ಆರ್ಡಿನನ್ಸ ಕೇವಲ ಸಂಹದ್ದ ಪ್ರಾಂತದಲ್ಲಿಯೇ ಬಳಕೆಯುಳ್ಳ ಇದೆ. ಅದಾದರೂ ಈ ವರ್ಷದ ಕೊನೆಯಲ್ಲಿ ಮುಗಿದು ಹೋಗುವದು. ಕೆಲ ಆರ್ಡಿನನ್ಸು ಕೇವಲ ದಬ್ಬಾಳಿಕೆದ್ದು ಕೆಲವು ದಬ್ಬು ಆಗುವ ಮಾರ್ಗದಲ್ಲಿವೆ. ಆದರೆ ಎಲ್ಲ ರಾಜಕೀಯ ಚಳವಳಿಯ ಮೇಲೆಯೂ ತನ್ನ ಕತ್ತಿ ಯನ್ನು ನಡಿಸುವ ೯ ನೆಯ ಆರ್ಡಿನನ್ಸು ಏಪ್ರಿಲ್ ತಿಂಗಳದವರೆಗೆ ಜೀವಂತವಿರುವದರಿಂದ ಸದ್ಯ ಅಷ್ಟರಲ್ಲಿಯೇ ಎಷ್ಟು ಸಂಸ್ಥೆಗಳನ್ನು ತನ್ನ ಹೊಟ್ಟೆಯಲ್ಲಿ ಹಾಕಿಕೊಳ್ಳುವದೋ ಎನ್ನೋಣ!

ಮದ್ರಾಸದಲ್ಲಿ
೯ ಜನರಿಗೆ ಶಿಕ್ಷೆ.

ಪರದೇಶಿ ಅರಿವೆಗಳನ್ನು ಬಹಿಷ್ಕರಿಸಿ ದೇಶು ಕೊಗುತ್ತ ಬೀದಿ ಬೀದಿಗಳಲ್ಲಿ ಸಂಚರಿಸಿದ್ದಕ್ಕಾಗಿ ಮದ್ರಾಸದಲ್ಲಿ ೯ ಜನ ಸ್ವಯಂಸೇವಕರು ಶಿಕ್ಷೆ ಮಾಡಲ್ಪಟ್ಟಿದ್ದಾರೆ.

ಮುದ್ದೇಬಿಹಾಳದಲ್ಲಿ
೫ ಜನ ಸ್ವಯಂಸೇವಕರಿಗೆ ಶಿಕ್ಷೆ.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಪ್ರಕಾರ ಮುದ್ದೇಬಿಹಾಳದಲ್ಲಿ ಸೆರೆ ಹಿಡಿಯಲ್ಪಟ್ಟ ಶ್ರೀ ಜನಪಸಪ್ಪ, ಲಿಂಗಾಪೂರ, ರಾಮಚಂದ್ರನ್ ಮೊದಲಾದ ೫ ಜನ ಸ್ವಯಂಸೇವಕರ ಖಟ್ಲೆಯು ವಿಜಾಪುರದಲ್ಲಿ ಡಿ. ಡಿ. ಜಡೆಸ್ಟರರ ಮುಂದೆ ಧವಳಗಿಯಲ್ಲಿ ನಡೆದು ತಿಯೊಬ್ಬರಿಗೂ ೪ ತಿಂಗಳ ಕಠಿಣ ಶಿಕ್ಷೆ ಮಾಡಿ ವಿಧಿಸುವದರಲ್ಲಿ ಬಂದಿತು.

ಕಲಾದಗಿಯಲ್ಲಿ
ಬಾಂಬುಗಳು ಸಿಕ್ಕವು.

ತಾ| ೨೫ ನೆಯ ದಿವಸ ತಳವಾರಿಯು ಪೋಲೀಸ ಅಧಿಕಾರಿಗಳು ಅಲ್ಲಿಯ ಶ್ರೀ ಬೀಳ ಚಂದರ ಮನೆಗೆ ಹೋಗಿ ಅವನ್ನು ಶೋಧ ಮಾಡಿದರು. ಆ ಸಮಯದಲ್ಲಿ ಅವರಿಗೆ ಬಾಂಬನ್ನು ತಯ್ಯಾರಿಸುವ ಕೆಲವು ಸಾಮಾನುಗಳೂ ಮತ್ತು ಒಂದು ಬಾಂಬಿನ ಅರ್ಧ ಕುಡಿಯೂ ಅಲ್ಲಿ ಸಿಕ್ಕಿತು.

ಕುಲಕರ್ಣಿಯುರಾಜೀನಾಮೆಕೊಟ್ಟನು

ದೋರನಾಳ ತಾಲೂಕಾದಲ್ಲಿ ಅಧಿಕಾರಿಗಳು ನಡಿಸಿದ ಜುಲುಮೆಯು ನಿಷೇಧಾರ್ಥವಾಗಿ ದೋರನಾಳ ಹತ್ತರದ ಅಲಾರಸಾಹ್ಯೆಯ ಶ್ರೀ ಭಾಸುರಭಾಯಿ ಪ್ರಭುದಾಸರು ತನ್ನ ಕುಲಕರ್ಣಿಕೆಗೆ ರಾಜೀನಾಮೆ ಕೊಟ್ಟಿದ್ದಾರೆ.

ಜತೀನದಾಸರ ಚಿತ್ರಪಟಕ್ಕೆ
ಆಡ್ಡಿ ಮಾಡಿದರು

ಜತೀನದಾಸರ ವೈಂವಣಿಗೆಯನ್ನು ಚಿತ್ರಪಟದಿಂದ ತೋರಿಸಲು ದಿಲ್ಲಿಯ ಚೀಫ ಕಮೀಶನರರು ಆಡ್ಡಿ ಮಾಡಿದ್ದಾರೆ.

ಪನವೇಲದಲ್ಲಿ
ಕಾಂಗ್ರೆಸ್ ಮುಖಂಡರಿಗೆ ಬಂಧನ

ಪನವೇಲದ ಕಾಂಗ್ರೆಸ್ ಮುಖಂಡರಾದ ಶ್ರೀ ದಾಂಡೇಕರರು ೫೦೦, ಖಾಡಿ ಹಾಗು ೧೫೯ ಈ ಕಲಮುಗಳ ಅನ್ವಯ ಕೈದುಮಾಡಲ್ಪಟ್ಟಿದ್ದಾರೆ

ಕೇರಳದ ಕಾಂಗ್ರೆಸ ಅಧಿಕಾರಿಗಳ
ಬಾಯಿಗೆ ಬೀಗ.

ಕೇರಳ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷ ಹಾಗು ಕಾರ್ಯದರ್ಶಿಗಳ ಮೇಲೆ ಮೇಜಾರದ ಡಿ. ಮ್ಯಾಜಿಸ್ಟ್ರೇಟರು ೧೫೪ ನೆಯ ಕಲಮಿನನ್ವಯ ನೋಟೀಸು ಹೊರಡಿಸಿ ನವ್ಹಂಬರ ೩೦ ನೆಯ ತಾರೀಖಿನಿಂದ ೧೪ ದಿನಗಳ ವರೆಗೆ ಯಾವ ಸಭೆ, ಮೆರವಣಿಗೆ, ಪಿಕೆಟಿಂಗ ಮೊದಲಾದವುಗಳಲ್ಲಿ ಭಾಗ ತೆಗೆದುಕೊಳ್ಳಬಾರದಾಗಿ ಅವರಿಗೆ ಅಪ್ಪಣೆ ಕೊಟ್ಟಿದ್ದಾರೆ

ಪೋಲೀಸರ ಅಪ್ಪಣೆ ಮುರಿದದ್ದಕ್ಕೆ
ಡಾಕ್ಟರರಿಗೆ ಶಿಕ್ಷೆಯಾಯಿತು.

ರಾಜಮಹೇಂದ್ರಿಯಲ್ಲಿ ಪಿ ಗುರುಮೂರ್ತಿಯೆಂಬುವವರೊಬ್ಬರು ಡಾಕ್ಟರರಿರುವರು. ಅವರು ಒಂದು ದಿವಸ ಅಲ್ಲಿಯ ಶ್ರೀ ಸತ್ಯನಂದರ ಮನೆಗೆ ಒಬ್ಬ ರೋಗಿಗೆ ಔಷಧ ಕೊಡಲು ಹೋಗಿದ್ದರು. ಆ ಸಮಯದಲ್ಲಿಯೇ ಪೋಲೀಸರು ಆ ಮನೆಹು ಮುತ್ತಿಗೆ ಹಾಕಿದ್ದರು. ಡಾಕ್ಟರರು ಮನೆಯಲ್ಲಿ ಕಾಲಿಟ್ಟಕೂಡಲೆ ಪೋಲೀಸರು ಒಳಗೆ ಹೋಗಕೂಡದಾಗಿ ಅವರಿಗೆ ಅಜ್ಞೆ ವಿಧಿಸಿದರು. ಡಾಕ್ಟರರು ಅಪ್ಪಣೆಯನ್ನು ಮುರಿದ್ದು ಹೊಸ್ತಿಲದಲ್ಲಿ ಕಾಲಿಟ್ಟರು. ಪೋಲೀಸರು ಅವರನ್ನು ಹೊರಗೆ ಹಾಕಿ ಅವರ ಮೇಲೆ ಫಿರ್ಯಾದಿ ಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆ ೩ ತಿಂಗಳ ಕಠಿಣ ಶಿಕ್ಷೆ. ಹಾಗು ೨೦೦ ರು. ದಂಡ, ಹೀಗೆ ಶಿಕ್ಷೆ ವಿಧಿಸಿದರು.

ಸಿಂಧದಲ್ಲಿ
೧೫ ಜನರನ್ನು ಹಿಡಿದರು.

ದಿಲ್ಲಿದ್ವಾರದಿಂದ ಊರ್ಲಿ ಬರಹತ್ತಿದ್ದ ಪರದೇಶಿ ಬಟ್ಟೆಗಳ ಗಂಟುಗಳಿಗೆ ಅಗ್ನಿಯನ್ನು ಹಚ್ಚಿಮಾಡಿದ್ದಕ್ಕಾಗಿ ಮಿರಪದಲ್ಲಿ ೧೫ ಜನ ಸ್ವಯಂಸೇವಕರು ಕೈದುಮಾಡಲ್ಪಟ್ಟಿದ್ದಾರೆ.

ರಂಗೂನದಲ್ಲಿ
ಪಿಸ್ತೂಲುಗಳು ಸಿಕ್ಕವು

ರಂಗೂನದ ಪೋಲೀಸ ಅಧಿಕಾರಿಗಳು ತಾ॥ ೨೪ ನೇ ದಿನ ಅಲ್ಲಿಯ ಎಷ್ಟೋ ಮನೆಗಳನ್ನು ಝಡತಿ ಮಾಡಿದಾಗ್ಗೆ ಝಡತಿ ಯು ಕಮಯಾದಲ್ಲಿ ಶ್ರೀ ಬಾರುವಾ ಮತ್ತು ಮು ಜುಮದಾರರ ಮನೆಗಳಲ್ಲಿ ಪಿಸ್ತೂಲುಗಳು ಸಿಕ್ಕಿ ದ್ದರಿಂದ ಅವರಿಬ್ಬರೂ ಕೈದು ಮಾಡಲ್ಪಟ್ಟಿ ದ್ದಾರೆ.

೫೦ ವರ್ಷದ ಮುದುಕಿಗೆ
೩ ತಿಂಗಳ ಶಿಕ್ಷೆ

ಮುಂಬಯಿಯಲ್ಲಿಯ ಪರದೇಶಿ ಬಟ್ಟೆ ಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿ ದ್ದಕ್ಕಾಗಿ ಸೋವಿ.(ಬಾಯಿ ಎಂಬ ೫೦ ವರ್ಷ ದ ಮುದುಕಿಗೆ ೩ ತಿಂಗಳ ಸಾದಾ ಶಿಕ್ಷೆ ಯನ್ನು ಕೊಡುವದರಲ್ಲಿ ಒಂದಿದೆ.

ಪೇಶಾವರದಲ್ಲಿ
ಸೂಳೆಯರ ಮನೆಗಳಿಗೆ ಪಿಕೆಟಿಂಗ

ಸೂಳೆಯರ ಮನೆಗೆ ಹೋಗುವವ ರನ್ನು ಅದರಿಂದ ಪರಾವೃತ್ತಗೊಳಿಸುವದಕ್ಕಾಗಿ ಪೇಶಾವರದ ಸತ್ಯಾಗ್ರಹಿಗಳು, ಸಿಂದಿ ಪಿಕೆ ಟಿಂಗದ ಜೊತೆಗೆ ಸೂಳೆಯರ ಮನೆಗಳಿಗೂ ಪಿಕೆಟಿಂಗ ಮಾಡುವದನ್ನು ಪ್ರಾರಂಭಿಸಿದ್ದಾರೆ.

ಉರ್ದೂ ಪತ್ರಿಕೆಯು
ಜಪ್ತವಾಯಿತು

ದಿಲ್ಲಿಯ ಮೌಲವಿ ಮುಹಮ್ಮದ ಬರೆದ "ದುರ್ಆಮಹಮ್ಮದ" ಎಂಬ ಉರ್ದೂ ಪತ್ರಿ ಕೆಯು ಚೀಫ ಕಮೀಶನರರ ಅಪ್ಪಣೆಯ ಪ್ರಕಾರ ಜಪ್ತ ಮಾಡಲ್ಪಟ್ಟಿದೆ.

ಸತ್ಯಾಗ್ರಹಿಗಳು
ಕೋರ್ಟಿನ ಮೇಲೆ ದಾಳಿಮಾಡಿದರು

ಕರಾಚಿಯ ೪೦ ಜನ ಸತ್ಯಾಗ್ರಹಿಗಳು ತಾ॥ ೨೫ ನೆಯ ದಿನದ ಮಾರ್ಚಾವಿನಲ್ಲಿ ಅಲ್ಲಿಯ ಸ್ಮಾಲಕಾಜ ಕೋರ್ಟಿಗೆ ಹೋಗಿ ಅಲ್ಲಿ ದ್ದ ವೇಜುಗಳ ವೇಲೆ ಮಸಿಯನ್ನು ಸುರು ವಿದ್ದಲ್ಲದೆ ಉಳಿದ ಸಾಮಾನುಗಳನ್ನೂ ಅಸ್ತ ವ್ಯಸ್ತವಾಗಿ ಒಗೆದು ಬಂದರು. ಆ ಸಮಯ ದಲ್ಲಿ ಕೋರ್ಟಿಲ್ಲಿ ಅಧಿಕಾರಿಗಳು ಯಾರೂ ಇರಲಿಲ್ಲ.

ಹೆಂಡತಿಯ ಮೂಗು ಕೊಯ್ದಿದ್ದಕ್ಕೆ
ಗಂಡನಿಗೆ ೭ ವರ್ಷ ಶಿಕ್ಷೆ

ತನ್ನ ಹೆಂಡತಿಯ ವೇಲೆ ಸಂಶಯ ತೆಗೆದುಕೊಂಡು ಅವಳ ಮೂಗನ್ನು ಕೊಯ್ದು ದ್ದಕ್ಕಾಗಿ ಮುಂಬಯಿಯ ಶಂಕರ ಭಾವೂ ಸಾಂದೀವಡೇಕರ ಎಂಬ ಗೃಹಸ್ಥನಿಗೆ ಹಾಯ ಕೋರ್ಟಿನಿಂದ ೭ ವರ್ಷ ಕಠಿಣ ಕಾರಾಗೃಹ ವಾಸದ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಪ್ರೊಸೀಕ್ಯೂಟರರ
ಮಗಳಿಗೆ ಶಿಕ್ಷೆ

ದಿಲ್ಲಿಯ ಪಬ್ಲಿಕ್ ಪ್ರೊಸೀಕ್ಯೂಟರರಾಗಿದ್ದ ಗೋಪಾಲಲಾಲರ ಮಗಳಾದ ಶ್ರೀಮತಿ ಚಾಂದೂ ಕರೋಜಪ್ರಸಾದರಿಗೆ ಜವಾಹಿರ ಲಾಲ ದಿನದ ಕಾರ್ಯಕ್ರಮದಲ್ಲಿ ಭಾಗ ತೆಗೆ ದುಕೊಂಡಿದ್ದಕ್ಕಾಗಿ ೬ ತಿಂಗಳ ಸಾದಾ ಶಿಕ್ಷೆ ಯಾಯಿತು.

ಮಧ್ಯಪ್ರಾಂತದ
ಸರ್ವಾಧಿಕಾರಿಗಳಿಗೆ ಶಿಕ್ಷೆ

ಮಧ್ಯಪ್ರಾಂತದ ೧೧ ನೆಯ ಸರ್ವಾಧಿ ಕಾರಿಗಳಾದ ಶ್ರೀ ಹರಕಾರೆಯವರ ಖಟ್ಲೆಯ ವಿಚಾರಣೆಯು ೧೦ ನೆಯ ಅಲಮಿನ ಪ್ರಕಾರ ಅಲ್ಲಿಯ ಎರಡನೆಯ ವರ್ಗದ ಮ್ಯಾ ಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ೧ ವರ್ಷ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆಯಿತು.

ಶ್ರೀ ಚಿಂಚೋರಕರರಿಗೆ ಶಿಕ್ಷೆ

ಅಹಮ್ಮದ ನಗರ ಜಿಲ್ಲೆಯ ಸತ್ಯಾ ಗ್ರಹ ಮಂಡಲದ ಸರ್ವಾಧಿಕಾರಿಗಳಾದ ಶ್ರೀ ಚಿಂಚೋರಕರರಿಗೆ ೧೫೫ ಹಾಗು ೧೫೮ ಈ ಅಲಮುಗಳನ್ವಯ ಜಾರೆ ಬೇರೆಯಾಗಿ ೩ ತಿಂ ಗಳ ಸಶ್ರಮ ಶಿಕ್ಷೆ ಹಾಗು ೨೫ ರು. ದಂಡ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದ್ದು ಶ್ರೀ ೧೧ ಮಂ ಅವರ ಸ್ಥಳದಲ್ಲಿ ಸರ್ವಾಧಿಕಾರಿಗಳಾಗಿ ನಿಮುಂ ಸಲ್ಪಟ್ಟಿದ್ದಾರೆ.

ಸರಕಾರಿ ಅಧಿಕಾರಿಗಳನ್ನು
ಕೊಲ್ಲುವ ಒಳಸಂಚು

ಸರಕಾರಿ ಅಧಿಕಾರಿಗಳನ್ನು ಕೊಲ್ಲುವ ಬಗ್ಗೆ ಒಳಸಂಚು ನಡಿಸಿದ್ದಕ್ಕಾಗಿ ಮುಜಫರ ನಗರದಲ್ಲಿ ಏಸು ಜನರು ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದಾರೆ.

ಬಿಹಾರದಲ್ಲಿ
೪೦ ಜನರಿಗೆ ಸೆರಮನೆ

ಜವಾಹಿರಲಾಲ ದಿನದ ನಿಮಿತ್ತವಾಗಿ ಬಿಹಾರ ಪ್ರಾಂತದಲ್ಲಿ ಒಟ್ಟಿಗೆ ೪೦ ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ

ಮುಂಬಯಿಯಲ್ಲಿ
೧೮ ತಿಂಗಳ ಕೂಸು ತುರಂಗ ಸೇರಿತು

ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆ ಯನ್ನು ಮೀರಿದು ಜವಾಹಿರಲಾಲ ದಿನದ ದಿವಸ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ಮುಂಬಯಿಯ ಉಪನಗರವಾದ ಬಾಂದ್ರಾದ ಶ್ರೀಮತಿ ಮುಕ್ತಾಬೇನ ಬೆಹೊಡಕರ, ಸುಧ ದ್ರಾದೇವಿ, ಜಯದೇವಿ ಡಾನೆಯವರಿಗೆ ೪ ತಿಂಗಳ ಸಾದಾ ಕಾರಾಗೃಹವಾಸವೂ, ಶ್ರೀ ಮತಿ ಸುದ್ರಿಕಾ ಅಂಜಾರಿಯಾ, ಸರಲಾ ದೇವಿ ದಾವೆ, ಹರ್ಷದಾ ದಿವಾನಜಿಯವ ರಿಗೆ ತಲಾ ೧೦೦ ರು. ದಂಡ ಇಲ್ಲವೆ ೭ ವಾರಗಳ ಕಾರಾಗೃಹವಾಸವೂ ಹೀಗೆ ಶಿಕ್ಷೆ ಕೊಡಲ್ಪ ಟ್ಟಿದೆ. ಹರ್ಷದಾ ದಿವಾನಜಿಯವರು ತಮ್ಮ ೧೮ ತಿಂಗಳ ಕೂಸಿನೊಂದಿಗೆ ತುರಂಗಕ್ಕೆ ಹೋದರು.

ಜಪಾನದಲ್ಲಿ ಭೂಕಂಪ
೧೫ ಜನರು ಮರಣ ಹೊಂದಿದರು

ಟೋಕಿಯೋ ರಾಜ್ಯಧಾನಿಂದ ೪೦ ಮೈಲು ಅಂತರದಲ್ಲಿರುವ ಮಿತೀಮಾದಲ್ಲಿ ಭಯಂಕರ ಭೂಕಂಪವಾಗಿ ೧೫ ಜನರು ಮರಣ ಹೊಂ ದಿದರು. ಎಷ್ಟೋ ಜನರಿಗೆ ಭಯಂಕರ ಗಾಯ ಗಳಾಗಿವೆ.

ಗೌರನದಿಯಲ್ಲಿ
ಬಾಂಬು ಹಾರಿತು

ಬಾರಿಸಾಲ ಜಿಲ್ಲೆಗೆ ಸೇರಿದ ಗೌರನದಿ ಯ ಪೋಲೀಸ ಚೌಕಿಯಲ್ಲಿ ಒಮ್ಮಿಂದೊಮ್ಮೆ ಬಾಂಬು ಹಾರಿದ್ದರಿಂದ ಇಬ್ಬರು ಸೈದು ಮಾ ಡಲ್ಪಟ್ಟಿದ್ದಾರೆ. ಅವರಲ್ಲಿ ಒಬ್ಬರು ಡಾಕ್ಟರರಿ ವರು.

ಫತೇಪುರ ಕಾಂಗ್ರೆಸ ಕಚೇರಿಯು
ಜಪ್ತವಾಯಿತು

ಫತೇಪುರ ಕಾಂಗ್ರೆಸ್ ಕಚೇರಿಗೆ ಜಿಲ್ಲೆ ಯ ಪೋಲೀಸ ಅಧಿಕಾರಿಗಳು ತಿಲಿ ಹಾಗಿ ಅದನ್ನು ತಮ್ಮ ವಶಪಡಿಸಿಕೊಂಡರು.

ಅಲಾಹಾಬಾದ ಜಿಲ್ಲೆಯಲ್ಲಿಯೂ

ಕರನಿರಾಕರಣೆಗೆ ಆರಂಭವಾಯಿತು.

ಅಲಾಹಾಬಾದ ಜಿಲ್ಲೆಯಲ್ಲಿ ತಾ॥ ೨೨ ನಿಂದ ಕರನಿರಾಕರಣೆಯು ಜಾರಿಯಲ್ಲಿಯು ಪ್ರಾರಂಭಿಸಲ್ಪಟ್ಟಿದೆ ಈ ವಿಷಯವಾಗಿ ಜಿಲ್ಲೆಯಲ್ಲಿ ಎಲ್ಲಾಕಡೆಗೂ ಕಸ್ತೆಪತ್ರಿಕೆಗಳು ಕಂಚಲ್ಪಟ್ಟಿ ದ್ದುವು. ಎಷ್ಟೋಕಡೆಗಳಲ್ಲಿ ಕಛೇರಿಗಳಾದರೂ ಬಳುಗಿ. ಸ್ವರಾಜ್ಯವು ಬಿಗುವ ವರೆಗೆ ಕರವನ್ನು ಕೊಡಕೂಡದೆಂಬುದಾಗಿ ಕರಪತ್ರಗಳು ತೀರ್ಮಾನಿಸಲ್ಪಟ್ಟಿವೆ ಪತ್ರಪತ್ರಿಕೆಗಳನ್ನು ಹಂಚಿದ್ದಕ್ಕಾಗಿ ೧೧ ಜನ ಸ್ವಯಂಸೇವಕರು ಸೆರೆಹಿಡಿಯಲ್ಪಟ್ಟಿದ್ದಾರೆ

ಮುಂಬಯಿಯಲ್ಲಿ

ಬಾರ್ಡೋಲಿ ಮೆರವಣಿಗೆಗೆ ಅಡ್ಡಿ.

ಮುಂಬಯಿಯು ಸತ್ಯಾಗ್ರಹ ಯುದ್ಧ ಮಂಡಳದವರು ತಾ॥ ೨೬ ನೆಯ ದಿವಸ ಒಂದು ಮೆರವಣಿಗೆಯನ್ನು ಹೊರಡಿಸಿ ಬಾರ್ಡೋಲಿಯ ಜನರ ವಿಷಯವಾಗಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುವವರಿದ್ದಾರೆಂಬ ದನ್ನು ತಿಳಿದುಕೊಂಡು ಪೋಲೀಸ ಕಮೀಶನರರು ತಾ॥ ೨೫ ನೆಯ ದಿವಸ ಒಂದು ನೋಟೀಸು ಹೊರಡಿಸಿ ಮೆರವಣಿಗೆಗೆ ಅಡ್ಡಿಯುಂಟು ಮಾಡಿದ್ದರು.

ಪ. ಮೋತೀಲಾಲರ ಪ್ರಕೃತಿ.

ಪಂಡಿತ ಮೋತೀಲಾಲರು ಹವೆಯನ್ನು ಬದಲಿಸಲು ಗೌಹಾಟಿಗೆ ಹೋಗುವದಾಗಿ ನಿರ್ಧರಿಸಿಕೊಂಡಿದ್ದಾರೆ. ತಾ॥ ೨೫ ನೆಯ ದಿವಸ ಅವರು ಸುಖರೂಪವಾಗಿ ಕಾಲಕಳೆದರು. ಅಂದು ಅವರಿಗೆ ಜ್ವರ ಬಂದಿದ್ದಿಲ್ಲ.

ಸತ್ಯಾಗ್ರಹಿಗಳು
ಉಪವಾಸ ಮಾಡಿದರು.

ಅಹಮ್ಮದಾಬಾದಿನ ಪರದೇಶಿ ಬಟ್ಟೆಯ ವ್ಯಾಪಾರಿಗಳಲ್ಲಿ ಕೆಲವರು ಪರದೇಶಿ ಬಟ್ಟೆಗಳನ್ನು ೬ ತಿಂಗಳ ವರೆಗೆ ಕಟ್ಟಿಡಲು ನಿರಾಕರಿಸಿದ್ದರಿಂದ ಅಲ್ಲಿಯ ಸತ್ಯಾಗ್ರಹಿಗಳು ತಾ॥ ೨೫ ರಿಂದ ಉಪವಾಸ ಮಾಡಹತ್ತಿದರು. ಉಪವಾಸದ ಪರಿಣಾಮವು ವ್ಯಾಪಾರಿಗಳ ಮೇಲೆ ಒಳ್ಳೆಯದಾಗಿ ಪರಿಣಮಿಸಿದ್ದರಿಂದ ಅವರು ಬಟ್ಟೆಗಳನ್ನು ಒಟ್ಟಿಟ್ಟಿಗೆ ಕಟ್ಟಿಟ್ಟರು.

ತಿನವಳ್ಳಿಯಲ್ಲಿ

ಕಾಂಗ್ರೆಸ್ ಮುಖಂಡರಿಗೆ ಕೈದು.

ಪೋಲೀಸ ಸರ್ಪರಿಂಟೆಂಡೆಂಟರು ಕೆಲವು ಜನ ಪೋಲೀಸರೊಂದಿಗೆ ತಿನವಳ್ಳಿ ಸ್ಟೇಶನದಲ್ಲಿರುವ ಶ್ರೀ ಮುಥುಸಾಮಿ ಪಿಲ್ಲಾಯಿಯವರ ಪುತ್ರನ ಅಂಗಡಿಯನ್ನು ಝಡತಿ ಮಾಡಿ ತಮಿಳು ನಾಡು ಕಾಂಗ್ರೆಸ್ ಕಮಿಟಿಯ ಹಸ್ತ ಪತ್ರಿಕೆಗಳನ್ನು ಜಪ್ತ ಮಾಡಿಕೊಂಡು ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳಾದ ಐದು ಜನರನ್ನು ಕೈದು ಮಾಡಿಕೊಂಡು ಹೋದರು.

ವೆಂಘೋರದಲ್ಲಿ

೪೭ ಜನರಿಗೆ ಬಂಧನ.

ವೆಂಘೋರದ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಮೀರಿದ ಬಲ್ಲಿಯ ಕಾಂಗ್ರೆಸ್ ಕಾರ್ಯಕರ್ತರು ಜವಾಹರ ದಿನದ ದಿವಸ ಮೆರವಣಿಗೆಯನ್ನು ಹೊರಡಿಸಲು ಪ್ರಯತ್ನಿಸಿದ್ದಕ್ಕಾಗಿ ಅಧಿಕಾರಿಗಳು ಕಾಂಗ್ರೆಸ್ ಕಮಿಟಿಗೆ ಮಂತ್ರಿಗಳನ್ನು ಹಾಕಿ ೪೭ ಜನ ಸ್ವಯಂಸೇವಕರನ್ನು ಸೆರೆಹಿಡಿದುಕೊಂಡು ಹೋದರು

ಬಳ್ಳಾರಿ ಸ್ಟೇಶನದಲ್ಲಿ

ಮದ್ದಿನ ಅನಾಹುತ.

ಬಳ್ಳಾರಿ ಸ್ಟೇಶನದಲ್ಲಿ ಶುಕ್ರವಾರ ಶೆಟ್ಟನೆಂಬೊಬ್ಬ ವ್ಯಾಪಾರಿಯು ಗದ್ದಿಗೆ ಪಟಾಕಿಯ ಪೆಟ್ಟಿಗೆಗಳನ್ನು ಇಡಿಸ್ಸು ಮಾಡಿದನು ಕೂಲಿಕಾರರು ಅವುಗಳನ್ನು ಡಬ್ಬಿಗಳಲ್ಲಿ ಕುಣಿವಾಗ, ಒಮ್ಮಿಂದೊಮ್ಮೆ ಉಂಟೆದ್ದು ಭಯಂಕರ ಅನಾಹುತವಾಯಿತು. ಸ್ಟೇಶನದ ಹತ್ತರ ಹಾರಿತು. ವಿದ್ಯುತ್ತಿನ ತಂತಿಗಳು ಕತ್ತರಿಸಿದವು. ಒಬ್ಬ ಕೂಲಿಯವನಿಗೆ ಭಯಂಕರ ಅಪಘಾತವಾಯಿತು.

ಶ್ರೀ ಜೋತಿಯನರ ಮೇಲೆ
ನೋಟೀಸು ಹೊರಡಿಸಿದರು.

ಉಪ್ಪಿನ ಕಾಯ್ದೆಭಂಗಕ್ಕಾಗಿ ೬ ತಿಂಗಳ ಶಿಕ್ಷೆಗೆ ಗುರಿಯಾಗಿ ತಿರ್ಚೀಚೆಗೆ ಬಿಡುಗಡೆ ಹೊಂದಿ ಬಂದ ಶ್ರೀ ಹರಿ ನೋದೇಶ್ವರ ಜೋತಿಯವರ ಮೇಲೆ ಕುಲಾಬಾ ಜಿಲ್ಲೆಯ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಮುಂಬಯಿ ಪೋಲೀಸ ಕಾಯ್ದೆಯ ೫೬ ನೆಯ ಕಲಮಿನ ಪ್ರಕಾರ ಒಂದು ನೋಟೀಸು ಹೊರಡಿಸಿ ಕೊಲಾಬಾ ಜಿಲ್ಲೆಯಲ್ಲಿ ಕಾಲಿಡಕೂಡದಾಗಿ ಅವರಿಗೆ ಆಜ್ಞೆ ವಿಧಿಸಿದ್ದಾರೆ. ನೋಟೀಸಿನಲ್ಲಿ ಅವಧಿಯು ನಿರ್ದಿಷ್ಟಪಡಿಸಲ್ಪಟ್ಟಿಲ್ಲ.

ಸಕ್ಕರದಲ್ಲಿ

ಬಾಂಬುಗಳು ಹಾರಿದವು.

ತಾ॥ ೨೨ ನೆಯ ದಿವಸ ಸಕ್ಕರ ಮ್ಯುನಿಸಿಪಾಲಿಟಿಯ ಟಿಳಕ ಹಾಯಸ್ಕೂಲಿನ ೭ ನೆಯ ವರ್ಗದಲ್ಲಿ ಒಮ್ಮಿಂದೊಮ್ಮೆ ಬಾಂಬು ಹಾರಿತು. ಬಾಂಬು ಹಾರಿದ ತಂಡಲೆ ಒರ್ವ ಪಂಜಾಬಿ ಅಲ್ಲನೆ ಸಂಯುಕ್ತ ಪ್ರಾಂತದ ತರುಣನು ಅವಸರದಿಂದ ಓಡಿಹೋದದ್ದನ್ನು ನೋಡಿದೆನೆಂಬುದಾಗಿ ೧೦ ವರ್ಷದ ಒರ್ವ ಹುಡುಗನು ಪೋಲೀಸರಿಗೆ ತಿಳಿಸಿದನು. ಪೋಲೀಸರು ಅಪರಾಧಿಯ ಬಗ್ಗೆ ಶೋಧ ನಡಿಸಿದ್ದಾರೆ. ಹೆಡ್‌ಪಾಸ್ಟರ ಮನೆಯು ಮುಂದೆ ಪೋಲೀಸರ ಕಾವಲು ಇಡಲ್ಪಟ್ಟಿದೆ.

ಕಾವುಸ್ಸ ಸಭೆಯಲ್ಲಿ

ಕಾಂಗ್ರೆಸ್ ಕೋರ್ಟ್‌ಗಳ ವಿಷಯ.

ಕಾವುಸ್ಸ ಸಭೆಯಲ್ಲಿ ವಿ ಮೇಜರ ಬ್ಯಾಂಕ್ವೆಸ್ಸರು ಹಿಂದುಸ್ಥಾನದಲ್ಲಿಯ ಕಾಂಗ್ರೆಸ್ ಕೋರ್ಟುಗಳ ವಿಷಯವಾಗಿ ಪ್ರಶ್ನೆ ಮಾಡಿದಾಗ ಭಾರತ ಮಂತ್ರಿಗಳಾದ ಮಿ. ಬೆಸ್ಟರು, ಗುಜರಾಥ ಹಾಗು ಬಿಹಾರಗಳಲ್ಲಿ ಸ್ವತಂತ್ರ ಪಂಚಾಯತ ಕೋರ್ಟುಗಳನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನವು ಮಾಡಲ್ಪಟ್ಟಿಸ್ಸದ್ದು ಅದಕ್ಕೆ ಸಾಕಷ್ಟು ಯಶಸ್ಸು ಸಿಕ್ಕಿಲ್ಲವಾಗಿ ಉತ್ತರಕೊಟ್ಟರು.

ಲಖನೌದಲ್ಲಿ

೪ ಜನ ಸ್ತ್ರೀಯರಿಗೆ ಶಿಕ್ಷೆ.

ಟೊಪ್ಪಿಗೆಯ ವ್ಯಾಪಾರಿಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಲಖನೌದ ಶ್ರೀಮತಿ ಪ್ರೇಮಚಂದ್ರ, ಶ್ರೀಮತಿ ರಮಾದೇವಿ ಮೊದಲಾದ ೪ ಜನ ಸ್ತ್ರೀಯರಿಗೆ ಪ್ರತ್ಯೇಕವಾಗಿ ೬ ವಾರಗಳ ಸಾದಾ ಶಿಕ್ಷೆಯು ಕೊಡಲ್ಪಟ್ಟಿದೆ.

ಸರಕಾರಕ್ಕೆ
ಗಿರಾಕಿಗಳೇ ಸಿಗಲಿಲ್ಲ

ತಾ|| ೧೯ನೆಯ ದಿವಸ ಬಾಡೋಲಿ ತಾಲೂಕದ ಅಳೋಟಿಯಲ್ಲಿ ೭೯ ಭತ್ತದ ಚೀಲಗಳು ಅಧಿಕಾರಿಗಳಿಂದ ಲಿಲಾವಿಗೆ ಹಚ್ಚಲ್ಪಟ್ಟವು ಲಿಲಾವಿನ ಸಮಯದಲ್ಲಿ ಸರ್ಕಲ್ ಇನಸ್ಪೆಕ್ಟರ ಹಾಗು ಇಬ್ಬರು ಪೋಲೀಸ ಪಟೇಲರು ಅಲ್ಲಿಯೆ ಇದ್ದರು. ಲಿಲಾವಿನಲ್ಲಿ ಅವುಗಳನ್ನ ಬೇಡಲು ಯಾರೂ ಮುಂದೆಬರಲಿಲ್ಲ. ಅಧಿಕಾರಿಯು ಸುಟ್ಟು ಕೆಡ್ಡನು. ೧೯೦೦ ರು ಸರಕಾರನ್ನು ತಿಗಣಿ-ಲಂಬಾಯಿಗಳಿಗೆ ಮಾರಲು ಸಿದ್ಧನಾದನು. ಆಸ್ಪ ತ್ಯಾದರೂ ಅವುಗಳನ್ನ ಯಾರೂಬೇಡಲಿಲ್ಲ. ಅಧಿಕಾರಿಯು ಲಿಲಾವ ಮಾಡುವದನ್ನು ಬಿಟ್ಟು ಕೊಟ್ಟು ನಡೆದನು.

ಶ್ರೀ ಮಖನಲಾಲರಿಗೆ
೬ ತಿಂಗಳ ಕಠಿಣ ಶಿಕ್ಷ

ತಾ|| ೧೩ನೆಯ ದಿವಸ ಅಧೀಕಾರಿಗಳ ಅಪ್ಪಣೆಯ ವಿರುದ್ಧವಾಗಿ ಮಂಡು ಮೇಜಿನ ಪರಿಷತ್ತಿನ ವಿಷೇಧಾರ್ಥವಾಗಿ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ಕಲಕತ್ತೆಯ ಸತ್ಯಾಗ್ರಹ ಮಂಡಲದ ಅಧ್ಯಕ್ಷರಾದ ಶ್ರೀ ಮಖನಲಾಲ ಜೀ ಇವರಿಗೆ ೬ ತಿಂಗಳ ಕಠಿಣ ಕಾರಾಗ್ರಹವಾಸದ ಶಿಕ್ಷೆಯು ಪ್ರಾಪ್ತವಾಗಿದೆ. ಇವರು "ಅನಂದ ಬಜಾರ ಪತ್ರಿಕೆಯ" ಸಂಪಾದಕರಿದ್ದರು.

ರಾಜಕೀಯ ಕೈದಿಗಳು
೨೪ ತಾಸು ಉಪವಾಸ ಮಾಡಿದರು

ತಾ|| ೨೧ನೆಯ ದಿವಸ ಜೇಲಿನಿಂದ ಬಿಡುಗಡೆ ಮಾಡಲ್ಪಟ್ಟ ಶ್ರೀಮತಿ ರುಖಸನ ಮೊದಲಾದ ೧೪ ಜನ ಸ್ತ್ರೀಯರಿಗೆ ಮನೆಗೆ ಹೋಗಲು ವಾಹನಗಳ ವ್ಯವಸ್ಥೆಯನ್ನು ಮಾಡಿಕೊಡದೆ ಅವರನ್ನು ಅವರನ್ನು ಕತ್ತಲೆಯಲ್ಲಿಯೇ ಬಿಟ್ಟುಗೊಟ್ಟ ಅಧಿಕಾರಿಗಳ ವರ್ತನದ ವಿಷೇಧಾರ್ಥವಾಗಿ ಲಾಹೋರ ಫೋರ್ಟ ಜೇಲಿನಲ್ಲಿರುವ ರಾಜಕೀಯ ಕೈದಿಗಳು ೨೪ ತಾಸುಗಳವರೆಗೆ ಉಪವಾಸವಾ ಡಿದರು.

ಶಾಲೆಯ ಗ್ರಾಮಟು ತೆಗೆಯಿತು

ಶಾಲೆಯ ಅಧಿಕಾರಿಗಳು ಹುಡುಗರು ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಂಡಿದ್ದಾರೆಂಬ ಕಾರಣವನ್ನ ತೋರಿಸಿ ವಿದ್ಯಾ ಖಾತೆಯ ಅಧಿಕಾರಿಗಳು ಬಾಲೋಘೊಟದ ಇಂಗ್ಲೀಷ ಶಾಲೆಗೆ ಸಿಗತಕ್ಕ ೩೯೦೦ ರು. ಗಳ ಗ್ರಾಮಟನ್ನು ನಿಷ್ಟಸಿ ಬಿಟ್ಟಿದ್ದಾರೆ.

ದಿಲ್ಲಿಯಲ್ಲಿ
ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ದಿಲ್ಲಿಯ ಪೋಲೀಸ ಅಧಿಕಾರಿಗಳು ತಾ|| ೨೪ನೆಯ ದಿವಸ ಅಲ್ಲಿಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಅದನ್ನ ಝಡತಿ ಮಾಡಿದರು. ಕಾಂಗ್ರೆಸ್ ಬುಲೆಟಿನದ ಹೊರತಾಗಿ ಉಳಿದ ಯಾವ ಪದಾರ್ಥಗೂ ಅಲ್ಲಿ ಸಿಗಲಿಲ್ಲ.

ಶ್ರೀಮತಿ ಚಾಂದಬೀಬಿಗೆ
೬ ತಿಂಗಳ ಸಾದಾ ಶಿಕ್ಷೆ

ದಿಲ್ಲಿಯ ಮಹಿಲಾ ಕಾಂಗ್ರೆಸ್ ಕಮೀಟಿಯ ಅಧಿಕಾರಿಗಳಾದ ಶ್ರೀಮತಿ ಚಾಂದ ಬೀಬಿಯವರಿಗೆ ೧೭೬ (ಅ) ಕಲಮಿನನ್ವಯ ೬ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಲಾದ ದಲ್ಲಿ ಬಂದಿದೆ.

ಜಮಖಂಡಿಯಲ್ಲಿ
ಡಾ. ಹುಲ್ಯಾಳಕರರ ಮೇಲೆ ಖಟ್ಲೆ.

ಜಮಖಂಡಿಯಲ್ಲಿಯ ಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತರಾಗಿರುವ ಡಾ. ಹುಲ್ಯಾಳಕರರಿಗೆ ಅಲ್ಲಿಯ ಅಧಿಕಾರಿಗಳು ಮೆಚ್ಚಲಿಕೆ ಬೇಡಿದ್ದರಿಂದ ಅವರ ಮೇಲೆ ಖಟ್ಲೆ ನಡೆದಿದೆ.

ಮಾಚ್ಯಯ ವಿಚಾರ

ಹಕ್ಕಿ ಪಿಕಾರುತಿದೆ. ಜಯಕರ್ನಾಟಕ ಮಂಡಲ. ಧಾರವಾಡ, ಬೆಲೆ ಎಂಟು ಆಣೆ. ಇದರಲ್ಲಿ ಮೇಲ್ಕಾಣಿಸಿದ ಮಂಡಲಕ್ಕೆ ಸಂಬಂಧಪಟ್ಟ ಹಲವು ಗೆಳೆಯರ ಕೆಲವು ಕವಿತೆಗಳಿವೆ. ಹಾಗು ಆ ಸಂಬಂಧದ ಮೂಲಕ ಈ ಕವಿತೆಗಳು ಒಂದೇ ಒಂದು ಜಾತಿಯ ಕವಿಗಳಿಂದ ಬರಿದಂತೆ ತೋರಿದರೂ ಅಧುನಿಕ ಕವಿತಾ ಸಂಗ್ರಹಗಳಲ್ಲಿ ಈವರೆಗೆ ಕಾಣದಿರುವ ಹೆಚ್ಚಿನ ವೈವಿಧ್ಯವು ಈ ಕಾವ್ಯಮಾಲೆಯ ಮುಖ್ಯ ಲಕ್ಷಣವಾಗಿದುತ್ತದೆ

ಸಾಮಾನ್ಯವಾಗಿ, ಕವಿಗಳಲ್ಲಿ ವಿಚಾರೈಕ್ಯವು ಕಡಿಮೆ, ಹೊಸ ಹೊಸ ಭಾವಗಳಿಂದರೆ ಹೊಸ ಹೊಸ ಕವಿಗಳೇ ಎನ್ನುವಷ್ಟು ವ್ಯಕ್ತಿವಿಶೇಷವು ಕವಿಗಳ ಸೊತ್ತಾಗಿರುತ್ತದೆ. ಆದರೆ ಒಂದೇ ಮನೆಯಲ್ಲಿ ವಾಸಿಸುವವರಿಗೆ ಒಂದು ಮನೆತನವನ್ನು ಕಲ್ಪಿಸಿ ಅವರ ನುಡಿನಡೆಗಳೆಲ್ಲ ಒಂದೇ ಎಂದು ಜನರು ಆಡುವ ಹಾಗೆ ಈಗಿನ ಕವಿತಾ ಪ್ರಪಂಚದಲ್ಲಿ ಈ ಬಗೆಯ ವಿಮರ್ಶೆಯು ಪ್ರಚಲಿತವಾಗಿದೆ. ಯಾವದಾದರೂ ಕವಿತೆಗಳನ್ನು ಓದಿದೊಡನೆ ಮೊದಲನೆಯ ಮಾತು "ಇವನ್ನು ಮೈಸೂರು ಕವಿಯವು, ಇಲ್ಲವೆ ಧಾರವಾಡ ಕವಿಯವು, ಅಥವಾ ಅರ್ಥವಿಳಿಯದೆ ಹೋಗಿದ್ದರೆ ಇವು ನಾಮಕರಣವು ಗೂಢವಾಗಿದ್ದರೆ ಇವನು ಬಹುಶಃ ಗೆಳೆಯರ ಗುಂಪಿನವನು" ಎನ್ನುವ ವಾಡಿಕೆಯುಂಟು. ಇದರಿಂದ ನಾವು ಕವಿತಾ ಮಾರ್ಗಗಳನ್ನು ಬೇರೆಬೇರೆಯಾಗಿ ವಿಶಾಲ ಲಕ್ಷಣಗಳ ನಿರ್ದೇಶದಿಂದ ತೋರಿಸುವದಾದರೆ ಒಳ್ಳೆಯದು ಆದರೆ ಕವಿಗಳನ್ನು ಆಯಾಸಂಥದಲ್ಲಿ ಅವರ ವ್ಯಕ್ತಿತ್ವವನ್ನು ವಿವರಿಸಾಡಿದರೆ ಅಂಥ ವಿಮರ್ಶೆಯು ಅಪಾಯಕಾರಿ ಅದುದರಿಂದ ಆ ವಿಮರ್ಶೆಯು ಖಂಡನಕ್ಕಾಗಿ ಈ ಕಾವ್ಯ ಮಾಲೆಯು ಸರಿಯಾದ ಸಾಮುಗ್ರಿಯಾಗಿದೆ ಯೆಂದು ನಮಗೆ ತೋರುತ್ತಿದೆ.

ಇದರಲ್ಲಿ ಹೊಸಗನ್ನಡ ಕವಿತೆಗಳು ಎಷ್ಟು ಲವಾಗಿದ್ದರೂ ಹಳೆಗನ್ನಡಶೈಲಿಯ ಕವಿತೆಗಳೂ ಇವೆ. ತಿಳಿಯೂದ ಬೇದಿಂಗಳಿನಂಥ ಕವಿತೆಗಳೂ ಚುರುಕಾದ ಕೆಂಗದಿರನಂಥ ಕವಿತೆಗಳೂ ಇವೆ ಇದಲ್ಲದೆ ಹಲವು ಗೆಳೆಯರೆಲ್ಲರನ್ನೂ ನಿಮ್ಮ ಇದ್ದು ಬಿದ್ದ ಕವಿತೆಗಳೊಡನೆ ಬನ್ನಿರೆಂದುಕರೆದು ಕೂಡಿಸಿದ್ದರಿಂದ ಎಲ್ಲಾರಗತಿಯ ಕವಿತೆಗೂ ಇಲ್ಲಿವೆ

ಆದರೆ ಎಲ್ಲಕ್ಕೂ ಮಿಗಿಲಾದ ಒಂದು ಗುಣವು ಈ ಕಾವ್ಯಸಂಗ್ರಹದ ಜನಜೀವನ ವಿಭಾಗದಲ್ಲಲ್ಲದೆ, ವಿಶೇಷವಾಗಿ ಅಂಬಿಕಾತನಯದತ್ತರೇ ಬರೆದಿರುವ "ಹಕ್ಕಿ ಹಾರುತಿದೆ ನೋಡಿದಿರಾ, ಮುಕ್ತಿನಚೇಲ, ಮೂವತ್ತು ವರುಷ ಕೋಟಿ, ಕನಸಿನೊಳಗಿನ ಕಣಿರು ಈ ಕವಿತೆಗಳಲ್ಲಿ ರಾಷ್ಟ್ರದಸಂಕಲನೇ ಮೂರ್ತಿಗೊಂಡು ನಿಂತಹಾಗಿದೆ. ಉಳಿದ ಕವಿತೆಗಳನ್ನು ಜೀವನ ಯುದ್ಧದ ವಿಶ್ರಾಂತಿಕಾಲದಲ್ಲಿ ಮೂಡಬೇಕಾದ ಮಲ್ಲಿಗೆ ಗುಲಾಬಿಗಳೆಂದು ನಾವು ತಿಳಿದರೆ ಈ ಕವಿತೆಗಳು ಮಾತ್ರ ಆಯುದ್ಧದ ಭಯಾನಕ ಕಚಿಕ್ರವನ್ನು ಕೊಟ್ಟು ಇನ್ನೂ ಅಲಸ್ಯದಿಂದ ಅಲೆಯುತ್ತಿರುವವರಿಗೆ ಬರ್ಚಿಯಿಂದ ತಿವಿದು ಎಬ್ಬಿಸುತ್ತವೆ.

ಕಾರಣ, ಈ ಕಾವ್ಯಮಾಲೆಯು ಕಾಲಗತಿಯ ದೃಷ್ಟಿಯಿಂದ ನೋಡಲು, ವಿಮರ್ಶಕನ ದೃಷ್ಟಿಯಿಂದ ನಂತರ ಹೀಗೆ ಜೀವಂತ ಪ್ರಯೋಜನವುಳ್ಳದ್ದೆನ್ನಲು ಅಡ್ಡಿಯಿಲ್ಲ ಮುದ್ರಣವೂ ಇಂಗ್ಲಿಷಪದ್ಧತಿಯ ಸವಿೂಪವನ್ನು ಮುಟ್ಟಿರುವದರಿಂದ ಕನ್ನಡಿಗರು ಅವಶ್ಯವಾಗಿ ಈ ಕವಿತಾ ಸಂಗ್ರಹವನ್ನು ಓದಬೇಕು

ಕಾರವಾರ ಜೇಲಿನಿಂದ ಬಿಡುಗಡೆಯಾದ ೩೭ ಜನ ರಾಜಕೀಯ ಕೈದಿಗಳನ್ನು ಮೊನ್ನೆ ದಿವಸ ವಿಶಾಖಾಪಟ್ಟಣ ಜೇಲಿಗೆ ಕರೆದುಕೊಂಡು ಹೋದರೆಂದು ತಿಳಿಯುತ್ತದೆ.

ಅಖಿಲಭಾರತ ರಾಷ್ಟ್ರಸಭೆಯ ಕಾರ್ಯದರ್ಶಿಗಳಾದ,

ಮಹಾದೇವ ದೇಸಾಯರನ್ನು ಹಿಡಿದರು.

ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯದರ್ಶಿಗಳಾದ ಶ್ರೀ ಮಹಾದೇವಭಾಯಿ ದೇಸಾಯರವರು ಕಾ॥ ೫ನೆಯ ದಿವಸ ಕ್ರಿ.ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಮತ್ತೆ ಸೆರೆಹಿಡಿಯಲ್ಪಟ್ಟಿದ್ದಾರೆ. ದೇಶಭಾಷೆಯಲ್ಲಿ ಒಂದು ಪತ್ರಿಕೆಯನ್ನು ಪ್ರಸಿದ್ಧಿಸಿದ್ದೇ ಅವರ ಅಪರಾಧವಾಗಿದೆ.

ಶ್ರೀಮತಿ ಸರಲಾದೇವಿ ಅಂಬಾಲಾಲರ ಸ್ಥಳದಲ್ಲಿ ಡಾ. ಕಾನುಗಾರವರು ಗುಜರಾಥ ಪ್ರಾಂತದ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಬಂಬೊಕ ಲಾಯುಪೆನ್ಸಿನ ಮೇಲೆ ಗದೆ.

ಕಾರವಾರ ಜಿಲ್ಲೆಯಲ್ಲಿ ಹಲ್ಲುಒನ್ನಿ ನಿರಾಕರಣೆಯ ಚಳವಳಿಯು ಜೋರಿನಿಂದ ನಡೆದದ್ದರಿಂದ ಸರಕಾರ್ಕೆ ಅದರಿಂದ ಬಹಳೀ ಹಾನಿ ತಟ್ಟಿದೆ ಆ ಚಳವಳಿಯನ್ನು ಕುಗ್ಗಿಸುವದಕ್ಕಾಗಿ ಅಧಿಕಾರಿಗಳು ದಬ್ಬಾಳಿಕೆಯಿಂದ ಪ್ರಾರಂಭಿಸಿರೋದಿದು. ಆದರೂ ಚಳವಳಿಯು ಕುಗ್ಗಿಲ್ಲ ಅದರಿಂದ ಈಗ ಅಧಿಕಾರಿಗಳು ಹುಲ್ಲುಒನ್ನಿಯನ್ನು ಕೊಡದಿದ್ದಲ್ಲಿ ಬಂದೂಕಿನ ಲಾಯಸನ್ಸನ್ನು ಕಸಿದುಕೊಳ್ಳುವದಾಗಿ ಬೆದರಿಕೆ ಹಾಕಿದ್ದರಿಂದ ಜನರು ಬೆದರಿಸಹತ್ತಿದ್ದಲ್ಲದೆ ಎಷ್ಟೋಜನರಿಗೆ ಕೈತಿಯಲ್ಲಿಯೂ ತಂದಿದ್ದಾರೆ. "ಲಾಯಸನ್ಸು ಹೋದರೂ ಚಿಂತೆಯಿಲ್ಲ. ಹುಲ್ಲು ಬನಿಯನ್ನು ಕೊಡಲಾರೆವೆ" ಎಂಬುದಾಗಿ ಜನರು ನಿರ್ಧರಿಸಿಕೊಂಡಿದ್ದಾರೆ.

ಎಮ್ಮೆಗಳು ಜಪ್ತಾದದ್ದಕ್ಕಾಗಿ ರೈತನು ಸೆಕ್ಷರೆ ಹಂಚಿಕೊಂಡನು.

ಬಾಡೋಲಿ ತಾಲೂಕಿನ ಸಿಕೇರ ಹಳ್ಳಿಯ ರೈತರು ಅಧಿಕಾರಿಗಳ ಜಲ್ಮೆಯಿಂದನ್ನು ತಪ್ಪಿಸಿಕೊಳ್ಳುವದಕ್ಕಾಗಿ ತಮ್ಮ ತಮ್ಮ ದನಕರಗಳೊಂದಿಗೆ ಬರೋಡಾ ಸಂಸ್ಥಾನದ ಹದ್ದಿಗೆ ಸಾಗಿ ಹೋಗಿ ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡ್ತಿರವರು. ಒಂದು ದಿವಸ ಒಬ್ಬ ರೈತನ ೩೦ ಎಮ್ಮೆಗಳು ಅಕಸ್ಮಾತ್ತಾಗಿ ಬ್ರಿಟಿಷ ಹದ್ದಿಯಲ್ಲಿ ಹೊಕ್ಕವು. ಸೆಜವಾಡನ ಪೋಲೀಸ ಪಟೇಲನು ಅವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಜಪ್ತಮಾಡಿಕೊಂಡು ಹೋದನು ತನ್ನ ಎಮ್ಮೆಗಳು ಅಧಿಕಾರಿಗಳಿಂದ ಜಪ್ತವಾದ ಸುದ್ದಿಯನ್ನು ಕೇಳಿ ಆ ರೈತನು ರೈತರಿಗೆಲ್ಲ ಸಕ್ಕರೆ ಹಂಚಿದನು.

ಧರ್ಮವಾಡದಲ್ಲಿ ಸಿಂದೀ ಅಂಗಡಿಗಳಿಗೆ ಕೀಲಿಬಿತ್ತು.

ಭಾವನಗರ ಸಂಸ್ಥಾನದಲ್ಲಿ ಅಮೇರಿಕೆಯಲ್ಲಿದ್ದಂತೆ ಕಾಯಿದೆಯಿಂದ ಮದ್ಯಪಾನಕ್ಕೆ ಪ್ರತಿಬಂಧವು ಮಾಡಲ್ಪಟ್ಟಿದೆ. ಧರ್ಮವಾಡದ ಯುವಕ ಸಂಘವರು ಮದ್ಯಪಾನವನ್ನು ಸಂಪೂರ್ಣವಾಗಿ ನಿಲ್ಲಿಸಲು ಅಲ್ಲಿಯ ಠಾಕೂರ ಸಾಹೇಬರಿಗೆ ಕೆಲವು ದಿನಗಳ ಹಿಂದೆ ವಿನಂತಿ ಮಾಡಿಕೊಂಡಿದ್ದರು. ಅವರ ವಿಜ್ಞಾಪನೆಯ ಮನ್ನಣೆಯನ್ನಿತ್ತು ಠಾಕೂರ ಸಾಹೇಬರು ಮದ್ಯಪಾನವನ್ನು ಮಾರುವದನ್ನು ಸಂಪೂರ್ಣವಾಗಿ ನಿಲ್ಲಿಸಿ ದಿನಾಂಕ ೬-೧೧-೨೭ರಿಂದ ಬಿ. ಗಳ ಲಾಯಸನ್ಸನ್ನು ತಿಲಾಂಜಲಿ ಇಟ್ಟರು. ಇದರ ಸಂಸ್ಥಾನಿಕರೂ ಇನ್ನು ಅನುಸರಿಸುವಾರದೇ?

ರಾಜಕೋಟ ಸಂಸ್ಥಾನದಲ್ಲಿ ಕಾಯದೆಭಂಗ.

ರಾಜಕೋಟ ಮುಂಬರದವರು ತಮ್ಮ ಹುದ್ದೆಯಲ್ಲಿ "ಬಂಧೊ" ಎಂಬ ದ್ವಿಸಾಪ್ತಾಹಿಕ ಪತ್ರಿಕೆಯ ಮಾಲಿಕತ್ವಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅಧಿಕಾರಿಗಳ ಅಸ್ಪಷ್ಟತೆಯನ್ನು ವಿರೋಧಿಸಿದ ಐದು ಜನ ವಿದ್ಯಾರ್ಥಿಗಳು ಆ ಪತ್ರಿಕೆಯನ್ನು ಸಂಸ್ಥಾನದಲ್ಲಿ ವಜಾ ಒಂದನಕ್ಕೊಳಗಾದರು. ಅವರ ಖುಲ್ಲಯ ವಿಚಾರಣೆಯು ನಡೆದು ನಾಲ್ಕು ಜನರಿಗೆ ಪ್ರತ್ಯೇಕವಾಗಿ ೧ ತಿಂಗಳ ಸಾದಾ ಶಿಕ್ಷೆಯು ಕೊಡಲ್ಪಟ್ಟಿತು. ಒಬ್ಬನು ಬಿಡಲ್ಪಟ್ಟನು.

ಪ. ಮೋತೀಲಾಲರ ಪ್ರಕೃತಿ.

ಪಂಡಿತ ಮೋತೀಲಾಲ ನೆಹರೂರವರಿಗೆ ಕಾ॥ ೨ನೆಯ ದಿವಸ ೧೦೨ ಡಿಗ್ರಿಗಳ ವರೆಗೆ ಜ್ವರ ಬಂದಿದ್ದರಿಂದ ಅಂದು ಅವರು ಬಹಳ ಅಸ್ವಸ್ಥರಾಗಿದ್ದರೆಂದು ತಿಳಿಯುತ್ತದೆ.

ಗದಗಿನಲ್ಲಿ ಕುಲಕರ್ಣಿ ವಕೀಲರಿಗೆ ಶಿಕ್ಷೆ.

ಕಾ॥ ೨ನೆಯ ದಿವಸ ಗದಗಿನ ಪೋಲೀಸ ಅಧಿಕಾರಿಗಳು ಅಲ್ಲಿಯ ಪ್ರಸಿದ್ಧ ವಕೀಲರಲ್ಲೋರ್ವರಾದ ಶ್ರೀ ಮೊಕಟರಾವ ಕುಲಕರ್ಣಿ ಬಿ. ಎ. ಎಲ್ ಎಲ್. ಬಿ. ಹಾಗು ಎಚ್ಚರಪ್ಪ ಕುಂದಗೋಳರವರನ್ನು ಕ್ರಿ.ಲಾ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಸೆರೆಹಿಡಿದು ವಿಚಾರಣೆಗಾಗಿ ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟರಾದ ವಿ. ಕಠಾಣಾವರ ಮುಂದೆ ನಿಲ್ಲಿಸಿದರು. ಜವಾಹರಲಾಲ ದಿನದ ದಿವಸ ಮೆರವಣಿಗೆಯಲ್ಲಿ ಭಾಗವಹಿಸಿದ್ದಕ್ಕಾಗಿ ಹಾಗು ಒಂದೂವರೆವರ್ಷ ಶಿಕ್ಷೆಗೆ ಗುರಿಯಾದ ಕಾಂಗ್ರೇಸ ಕಾರ್ಯಕರ್ತರನ್ನು ಅಭಿನಂದಿಸುವ ಸಭೆಯಲ್ಲಿ ಭಾಷಣ ಮಾಡಿದರೆಂಬ ಆರೋಪವು ಅವರುಗಳ ಮೇಲೆ ಹೊರಿಸಲ್ಪಟ್ಟಿತು. ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಸಾದಾ ಶಿಕ್ಷೆ ವಿಧಿಸಿ ಅವರನ್ನು ತಕ್ಷಣದ ಕೈದಿಗಳಂತೆ ನಡಿಸಿಕೊಳ್ಳಲು ಅಭಿಪ್ರಾಯ ಕೊಟ್ಟರು. ಕರ್ನಾಟಕದಲ್ಲಿ ಪ್ರಶಿಕ್ಷಿತರಾದ ವಕೀಲರಿಗೆ ಕ್ಷಮಾಯಾಚನೆ ಇಸ್ಕಾ ದೊರೆತಿದ್ದಿಲ್ಲ ಅಂದರೂ ಈಗ ದೊರೆಯಂತಾಯಿತು.

ಶ್ರೀ ಮಯೂರಶರ್ಮಾಚಾರ್ಯ ಶಾಸ್ತ್ರಿಗಳ ಮೇಲೆ ಮತ್ತೆ ಒಂದು ಖಟ್ಲೆ.

ವಿಜಾಪುರ ಜೇಲಿನಲ್ಲಿ ಈಗ ತಮ್ಮ ಶಿಕ್ಷೆಯ ಅವಧಿರುನ್ನು ಅನುಭವಿಸುತ್ತಿದ್ದ ವಿಜಾಪುರದ ಶ್ರೀಮದ್ಭಾಗವತಾಚಾರ್ಯ ಶಾಸ್ತ್ರಿಗಳವ್ರು ಅವರ ಮೇಲಿನ ಮತ್ತೊಂದು ಆರೋಪದ ವಿಚಾರಣೆಗಾಗಿ ನಿನ್ನೆ ದಿವಸ ಬದಾಮಿಗೆ ಕರೆದೊಯ್ಯಲ್ಪಟ್ಟರೆಂದೂ ತಿಳಿಯುತ್ತದೆ.

ಬನಾರಸದಲ್ಲಿ ದಬ್ಬಾಳಿಕೆ.

ಬನಾರಸದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ವಿಶ್ವನಾಥ ತರ್ಖಾ, ದುರ್ಗಾದತ್ತ ಖತ್ರಿ ಮತ್ತು ಬಾಬಾ ರಾಘವದಾಸರು ಕ್ರಿ.ಲಾ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಕೈದುಮಾಡಲ್ಪಟ್ಟಿದ್ದಾರೆ.

ಮಿ. ಬ್ರೈವಿಯವರಿಗೆ

ಆಹಾರವನ್ನು ಕೊಡಗೊಡಲಿಲ್ಲ

ಕ್ರಿ. ಆ. ಅಮೆಂಡಮೇಂಟ ಕಾಯ್ದೆಯ ಅನ್ವಯ ಸೆರೆ ಹಿಡಿಯಲ್ಪಟ್ಟ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ. ಬ್ರೈವಿಯವರ ತಲವು ಮಿತ್ರರು ಅವರಿಗೆ ಅಂದು ಸಂಜೆಯಲ್ಲಿ ಜೇಲಿಗೆ ಆಹಾರವನ್ನು ಕೊಡಲು ತೆಗೆದು ಕೊಂಡು ಹೋಗಿದ್ದರು. ೪ ಗಂಟೆಯಾದ ಮೇಲೆ ಆಹಾರವನ್ನು ಕೊಡಗೊಡುವದಿಲ್ಲ ವೆಂದು ಜೇಲ ಅಧಿಕಾರಿಗಳು ಅವರನ್ನು ತಿರುಗಿ ಕಳಿಸಿದರು.

ತಂದೆಯು ಸತ್ತರೂ

ಮಗನು ಹೊಣೆಕೊಟ್ಟ ಕೂಗೆ ಬರಲಿಲ್ಲ

ತಾ ॥ ೭ ನೆಯ ದಿವಸ ಶಿಕಾರಿಪುರದ ಮೋಜಸಿ ಅಧಿಕಾರಿಗಳು ಅಕ್ಷಯಗಿಗೆ ಜನ ಸ್ವಯಂಸೇವಕನ್ನ ಹಾಗಲ ನೆಯು ಸರ್ವಾಧಿಕಾರಿಗಳಾದ ಶ್ರೀ ಇಸ್ಪಂದಾರ್ ಲೀಲವಂಡೆ ಯವರನ್ನು ಕೈದು ಮಾಡಿದರು. ಶ್ರೀ ಇಸ್ಪಂದಾರ್ ಇಂದಯವರು ಮೂನ್ನಾ ದಿವಸ ರಾತ್ರಿ ಯಲ್ಲಿಯೇ ತೀರಿಕೊಂಡಿದ್ದರಿಂದ ಹೊಣೆಯ ನ್ನು ಕೊಟ್ಟಲ್ಲಿ ಸಿವ್ಯನ್ನ ಬಿಡುಗಡೆ ಮಾಡು ಹುದಲ್ಲಿ ಬರುವದರಿಗೆ ಮೋಲೀಸರು ಅವ ರಿಗೆ ತಿಳಿಸಿದರು. ಸರ್ವಾಧಿಕಾರಿಗಳು ಹೊಣೆ ಯನ್ನು ಕೊಟ್ಟ ಮೂರಿಗೆ ಒರಲು ನಿರಾಕರಿಸಿ ದರು. ಅವರು ತಾಯಿಯವರಾದರೂ ಕಾಂಗ್ರೆಸ್ ಸಳ್ಳೆ ಬಂದು ತಲವಂತಹ ಕೃತಿಯನ್ನು ಮಾಡಬಾರದಾಗಿಯೂ ಅವರಿಗೆ ಪೊಡಲೆ ಹೇಳಿ ಕಳುಹಿದ್ದರು

ಬ್ಯಾಡಗಿಯಲ್ಲಿಯು

ಕಾಂಗ್ರೆಸ ಕಚೇರಿಯು ಜಪ್ತುವಾಯಿತು

ಬ್ಯಾಡಗಿಯ ಪೋಲೀಸ ಅಧಿಕಾರಿಗಳು ಅಲ್ಲಿಯ ಕಾಂಗ್ರೆಸ್ ಕಚೇರಿಗೆ ಸಾಗಿ ಹೋಗಿ ಅಲ್ಲಿಯ ಪಾಷ್ಟಧ್ಪಜವನ್ನು ಕೆತ್ತಿಹಾಗೆದು ಅದನ್ನು ತಮ್ಮ ವಶವಡಿಸಿಕೊಂಡರು.

ಬೆಳಗಾವಿಯಲ್ಲಿ

ಸಾರ್ವಜನಿಕ ಶಾಂತತಾ ಭಂಗದ

ನೋಟೀಸು

ಬೆಳಗಾವಿಯ ಡಿ. ಮ್ಯಾಜಿಸ್ಟ್ರೇಟರು ಎರಡು ನೋಟೀಸುಗಳನ್ನು ಹೊರಡಿಸಿ, ಬಹಿ ರಂಗಸಭೆಗಳನ್ನು ಕೂಡಿಸುವುದರಿಂದ ಜನರ ಮುಕ್ತಸ್ವಾತಂತ್ರ್ಯಕ್ಕೆ ಭಂಗವುಂಟಾಗುವದು ಇಲ್ಲವೆ ಅವರಿಗೆ ಅಡ್ಡಿಯನ್ನುಂಟು ಮಾಡುವದು, ಬೀ ದಿಗಳಲ್ಲಿ ಗುಂಪಿ, ಝೆಂಡಾಗಿರಿ ಮೆರವಣಿಗೆಯ ನ್ನು ಬಾರಿಸುವದು ಮತ್ತು ಜನರ ಗುಂಪನ್ನು ಕೂಡಿಸುವದು ಮೊದಲಾ ದವುಗಳಿಂದ ಸಾರ್ವಜನಿಕ ಶಾಂತತೆಗೆ ಭಂಗ ಬರುವ ಸಂಭವವಿರುವದೆಂದು ಕಾರಣ ತೋ ರಿಸಿ ಅವುಗಳಿಗೆ ಅಡ್ಡಿಯನ್ನುಂಟು ಮಾಡಿದ್ದಾ ರೆ. ಆದುದರಿಂದ ಸ್ವಯಂಸೇವಕರು ತಮ್ಮ ತಮ್ಮ ಕೈಗಳಲ್ಲಿ ಬಂದ ಹಲಿಗೆಗಳನ್ನು ಹಿಡಿ ದುಕೊಂಡು ತಮಾಷಾರ್ಥ ಮಾಡುತ್ತ ಬೀದಿಗ ಳಲ್ಲಿ ಅಡ್ಡಾಡ ಹತ್ತಿದ್ದಾರೆ. ಅಧಿಕಾರಿಗಳು ಅವರನ್ನು ಸರ ಹಿಡಿಯುವದಕ್ಕೆ ಪ್ರಯತ್ನಿಸು ದ್ದಾರೆ.

ಕೋಲಂಬೋದಲ್ಲಿ

ಜಪಾನಿಯರ ದಿನಾಚರಣೆ

ತಾ ॥ ೬ ನೆಯ ದಿವಸ ಕೋಲಂ ಬೋದ ಫ್ರಾನ್ಸೀಸ್ಕರು ಪ್ರೊ. ಸುಮ್ಮಿದ ಪಕ್ಷದ ವರು ಲಧ್ಯಭಿಪ್ರಾಯದಲ್ಲಿ ಸಭೆಯನ್ನೇರ್ಪಡಿಸಿ ಕೊಂಡು ಜಪಾನಿಯರಲ್ಲಿ ದಿನವನ್ನು ಆಚರಿಸಿ ದರು. ಅಧ್ಯಕ್ಷರು ತಮ್ಮ ಪೀಠಿಕಾಲಾಪರ ಭಾಷಣವನ್ನು ಮಾಡಿ ತೀರಿಸಿದಮೇಲೆ ಸಭೆಯಲ್ಲಿ ಮಂಬಯಿಯ ಪೋಲೀಸರ ಅತ್ಯಾಚಾರದ ಕೃತಿಗಳನ್ನು ನಿಷೇಧಿಸಲ್ಪಟ್ಟವು

ಸಾವಿರ ರುಪಾಯಿ ಸಂಕಿಗ

ಒಂಭತ್ತೇ ರು. ಸಿಕ್ಕವು.

ಎರವಾಡದಲ್ಲಿಯೂ ಕೆಲವು ದೇಶಸೇವೆ ರ ಕಡೆಯಿಂದ ಸರಕಾರಕ್ಕೆ ಗುಂಡಿ ರುಪಾಯಿ ಗಳ ದಂಡವು ಬರಬೇಕಿದ್ದಿತ್ತು. ಅದಕ್ಕಾಗಿ ಅಧಿಕಾರಿಗಳು ಅಲ್ಲಿಯ ಎಂಟು ಮನೆಗಳನ್ನು ಝಡತಿ ಮಾಡಿ ಕೆಲವು ಸಾಮಾನುಗಳನ್ನು ಜಪ್ತ ಮಾಡಿಕೊಂಡು ಹೋದರು. ಆ ಸಂದರ್ಭ ಗಳನ್ನು ಕೊಂಡುಕೊಳ್ಳಲು ಎರವಾಡದಲ್ಲಿ ಅಧಿ ಕಾರಿಗಳಿಗೆ ಗಿರಾಕಿಗಳೇ ಸಿಗಲಿಲ್ಲ. ಅಧಿಕಾರಿ ಗಳು ಆ ಸಂದರ್ಭಗಳನ್ನು ದಂಧಕಾರ ಎಂಬ ಊರಿಗೆ ಕಳಿಸಿಕೊಟ್ಟರು. ಅಲ್ಲ ಅವುಗಳ ಲಲವು ನಡೆಯಿತು. ಅವುಗಳನ್ನು ಲಲಾವಿ ನಲ್ಲಿ ಬೇಡಲು ಕಲವು ಅಪೃಶ್ಯರು, ಮೂಲಲ್ಯಾ ನೂ ಅಲ್ಲಿಗೆ ಬಂದಿದ್ದರು, ಎಲ್ಲರೂ ಕೂಡಿ ಒಂಭತ್ತು ರುಪಾಯಿಗಳ ಸಾಮಾನುಗಳನ್ನು ಕೊಂಡುಕೊಂಡರು. ಜಪ್ತ ಮಾಡಲ್ಪಟ್ಟ ಸರ ಕನ್ನು ಕೊಂಡಿದ್ದಕ್ಕಾಗಿ ಒಬ್ಬ ಅಸ್ಪೃಶ್ಯನಿಗೆ ಅವನ ಜಾತಿಯವರು ಬಹಿಷ್ಕಾರ ಹಾಕಿದರು. ಲಿಲಾವಿನ ಸಮಯದಲ್ಲಿ ಸ್ವಯಂಸೇವಕರು ಪಿಕೆಟಿಂಗ ಮಾಡಿದರು. ಅಧಿಕಾರಿಗಳು ಅವ ರನ್ನು ಸೆರೆ ಹಿಡಿದುಕೊಂಡು ಹೋಗಿ ತಮ್ಮ ಕಾರ್ಯವು ತೀರಿದ ಮೇಲೆ ಅವರನ್ನು ಬಿಟ್ಟು ಬಿಟ್ಟರು.

ಸೇನಗುಪ್ತರಿಗೆ ಅನಾರೋಗ್ಯ

ದಿಲ್ಲಿಯ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವ ಧಿಯನ್ನು ಅನುಭವಿಸುತ್ತಿರುವ ಶ್ರೀ ಸೇನಗು ಪ್ತರು ನಾಲ್ಕೈದು ದಿನಗಳಿಂದ ಬೇನೆಯಿಂದ ಬಳಲುತ್ತಿರುವರೆಂದೂ, ಅವರ ಕಾರ್ಯದರ್ಶಿ ಗಳಿಗೆ ಜೇಲಿನಲ್ಲಿ ಅವರನ್ನು ಕಾಣಲು ಅಧಿ ಕಾರಿಗಳು ಅನುಜ್ಞೆ ಕೊಡಲಿಲ್ಲವೆಂದೂ ತಿಳಿ ಯುತ್ತದೆ.

ಸುಳ್ಳು ಹೇಳಿದ್ದಕ್ಕಾಗಿ

ಸೆರೆಮನೆ ಸೇರಿದನು

ಕಲಕತ್ತೆಯಲ್ಲಿಯ ಒಂದು ಮನೆಯ ಝಡತಿಯು ಕಾಲಕ್ಕೆ ಮಾಡ್ದ ಗುಂಡುಗಳ ಸಂ ಬಂಧವಾಗಿಯೂ ಮತ್ತು ಲಾಹೋರ ಒಳಸಂ ಚಿನ ಖಟ್ಲೆಯ ಆರೋಪಿಗಳ ಪಲಾಯನದ ವಿಷಯವಾಗಿಯೂ ಪೋಲೀಸರಿಗೆ ಸುಳ್ಳು ಹೇಳಿ ಅವರನ್ನು ವಂಚಿಸಿದ್ದಕ್ಕಾಗಿ ಕಲಕತ್ತೆ ಯಲ್ಲಿ ಪೋವಾಲಚಂದ ಖೂಲಚಂದವರು ಕೈದು ಮಾಡಲ್ಪಟ್ಟ ೨೦೦೦ ರು. ಹೊಣೆಯ ಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಸೌಗೂರದಲ್ಲಿ

೧೪೦ ಜನರಿಗೆ ಕೈದು

ಸೌಗೂರ ಸತ್ಯಾಗ್ರಹ ಮಂಡಳದ ಜಿ ನೆಯ ಸರ್ವಾಧಿಕಾರಿಗಳಾದ ಶ್ರೀ ವಿಶ್ವಾಸ ರಾವ ಭಾವೆ ಮಂಜರು, ನೀಲಶಂಕರರಾವ ಹರ್ಡೀ ಕರ, ರಾಮಕೃಷ್ಣ ರಾಡೋಕರವರೊಂದಿಗೆ ತಾ ॥ ೨೧ ನೆಯ ದಿವಸ ಕೈದು ಮಾಡಲ್ಪಟ್ಟಿ ದ್ದಾರೆ.

ದಿಲ್ಲಿಯ ಗೋಳೀಬಾರಿನ ಅತ್ಯಾಚಾರ

ಒಬ್ಬನಿಗೆ ಕೈದು

ಮೀರತದ ಗಾಂಧಿ ಆಶ್ರಮದಲ್ಲಿರುವ ಶ್ರೀ ಬಂಧುಂಗ ಎಂಬ ತರುಣನೋರ್ವನು ದಿಲ್ಲಿಯಲ್ಲಿ ಸಂಭವಿಸಿದ ಗೋಳೀಬಾರಿನ ಅತ್ಯಾಚಾರದ ಮೂಲಕವಾಗಿ ಸೆರೆ ಹಿಡಿಯಲ್ಪಟ್ಟಿದ್ದಾನೆ.

ಹುಕ್ಕೇರಿಯಲ್ಲಿ

ಶ್ರೀ ಪುರಾಣಿಕರಿಗೆ ಶಿಕ್ಷೆ.

ಬೆಳಗಾವಿಯ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳಾದ ಶ್ರೀ ಪುರಾಣಿಕರ ಖಟ್ಲೆ ಯ ವಿಚಾರಣೆಯು ಹುಕ್ಕೇರಿಯಲ್ಲಿ ನಡೆದು ಅವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸ ಲ್ಪಟ್ಟಿತು.

ವಕೀಲರಿಂದೊಂದು ಪ್ರೇಮದ ಎಚ್ಚರಿಕೆ

(ಲೇ:-ಇಳಕಲ್ಲಂತ ಜಾಗೀರದಾರ ಜಾತಿಯ
ಎಂ, ಎ. ಪದವೀಧರರು. ಬೆಳಗಾವಿ)

ಏವಂ ಪ್ರಬರ್ತಕಂ ಚಕ್ರಂ ನಾನು
ವರ್ತಯತೀಹ ಯಃ।
ಘಾಯುರಿಂದ್ರಿಯಾರಾಮೋ ಮೋಘಂ
ಪಾರ್ಥ ಸ ಜೀವತಿ॥

ಗೀತಾ

ಈವರೆಗಿನ ೧೧ ಯಾವದೇ ದೇಶದೊಳಗಿನ ಸಾರ್ವಜನಿಕ ಚಳವಳಿಯನ್ನು ನೋಡಿದರೂ, ಆ ಚಳವಳಿಯಲ್ಲಿ ವಕೀಲರು ತಮ್ಮ ಬುದ್ಧಿಬಲದಿಂ ಹಲವಾಕ್ಚಾತುರ್ಯದಿಂದಲೂ ಪ್ರಮುಖವಾ ಹಭಾಗವನ್ನು ವಹಿಸಿಕೊಂಡು ತಮ್ಮತಮ್ಮ ರಾಷ್ಟ್ರಗಳ ಇತಿಹಾಸವನ್ನು ಉಜ್ವಲಗೊಳಿಸಲು ಸಹಾಯ ಮಾಡಿರುವರೆಂಬ ಸಂಗತಿಯು ಎಲ್ಲರಿಗೂ ಗೊತ್ತಿದೆ. ಬೇಜವಾಬದಾರ ಮತ್ತು ಅಧಿಕಾರ ಲೋಲುಪ ನೌಕರ ಶಾಹಿಯನ್ನು ಎದುರಿಸಿ ಈ ವರ್ಗದವರು ಇಡೂವರೆಗೆ ಜನರ ಹಕ್ಕುಗಳನ್ನು ಉತ್ತಮ ಪ್ರಕಾರದಿಂದ ಸಂರಕ್ಷಿಸಿದ್ದಾರೆ. ರಾಜಕಾರಣದ ಅಂಗೋ ಪಾಂಗಳು ಮತ್ತು ಮುತ್ಸದ್ದಿಗೀಯ ಪೇಚು ಈ ವರ್ಗದ ವರಷ್ಟು ಉಳಿದವರಿಗೆ ತಿಳಿಯುವದು ಶಕ್ಯವಿಲ್ಲ. ನಮ್ಮ ದೇಶದಲ್ಲಿಯ ೫೦—೬೦ ವರ್ಷಗಳಹಿಂದಿನ ರಾಜಕೀಯ ಇತಿಹಾಸದ ಕಡೆಗೆ ನಾವು ದೃಷ್ಟಿಯನ್ನು ಹೊರಳಿಸಿದಲ್ಲಿ ಈ ವರ್ಗದವರೇ ಎಲ್ಲರಿಗಿಂತಲೂ ಹೆಚ್ಚು ಹೆಚ್ಚು ಉತ್ಸಾಹದಿಂ ಲೂ ಧೈರ್ಯದಿಂದಲೂ ಕಾರ್ಯವನ್ನು ಮಾಡಿರುವರೆಂಬುವದು ನಮಗೆ ಕಂಡು ಬರದೆಇರಲಾರದು ಹತ್ತು ವರ್ಷಗಳಹಿಂದಿನ ಅಸಹಕಾರ ಚಳವಳಿಯಲ್ಲಿಯೂ ವಕೀಲ ವರ್ಗದವರೇ ಪ್ರಮುಖ ಭಾಗವನ್ನು ವಹಿಸಿಕೊಂಡಿದ್ದರು. ಲೋಕಮಾನ್ಯರ ಪಟ್ಟಶಿಷ್ಯರಲ್ಲಿ ವಕೀಲರೇ ಹೆಚ್ಚಾಗಿದ್ದರು ಹಾಗು ಮಹಾತ್ಮಾಗಾಂಧಿಯವರ ಪಟ್ಟಶಿಷ್ಯರಲ್ಲಿಯೂ ವಕೀಲರೇ ಹೆಚ್ಚಾಗಿರುವರು. ಈ ಸಂಗತಿಯಾಕಡೆಗೆ ನಾವು ನೋಡಿದಲ್ಲಿ, ರಾಷ್ಟ್ರದೃಷ್ಟಿಯಿಂದ ಈ ವರ್ಗವು ಬಹಳೇ ಮಹತ್ವದ್ದಿದೆಯೆಂದು ನಾವು ಒಪ್ಪಿಕೊಳ್ಳಲೇಬೇಕು.

೨ ಈಗ ನಡೆದಿರುವ ಸತ್ಯಾಗ್ರಹ ಸಮರದಲ್ಲಿ, ಯಾವ ಪ್ರಮಾಣದಿಂದ ಧುಮುಕಿಕೊಳ್ಳಬೇಕಾಗಿತ್ತೊ ಆ ಪ್ರಮಾಣದಿಂದ ಧುಮುಕಿಕೊಳ್ಳಲು ವಕೀಲರು ಮುಂದೆ ಬರದೆಇದ್ದದ್ದು ಶೋಚನೀಯವಾದ ಸಂಗತಿಯಾಗಿದೆ ನಮ್ಮ ಮುಂಬಯಿ ಇಲಾಖೆಯಲ್ಲಿಯಂತೂ ೫೦—೬೦ ಕ್ಕಿಂತ ಹೆಚ್ಚು ಜನ ವಕೀಲರು ಈ ರಣರಂಗದಲ್ಲಿ ಕಾಲಿಟ್ಟಿಲ್ಲ. ಸುಂಗತಿ, ಹೋಗುವ ವಿಷಯವನ್ನು ಬಿಟ್ಟರೂಸಹ, ಈಗಿನ ರಾಷ್ಟ್ರಕಾರ್ಯಕ್ಕೆ ಬೇರೆ ಬಗೆಗಳಿಂದ ಸಹಾಯಮಾಡುವ ಬುದ್ಧಿಯೂ ಈ ವರ್ಗದವರಲ್ಲಿ ಎಷ್ಟು ಹುಟ್ಟಬೇಕೋ ಅಷ್ಟು ಹುಟ್ಟದಿರುವದು ನಾಚಿಕೆಯ ಮಾತಾಗಿದೆ. ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಶಾಂತಿಯು ನೆಲೆಗೊಂಡಿಹೆಯೆಂದು ಭಾವಿಸಿಕೊಂಡು ನನ್ನ ವೈಯಕ್ತಿಕ ಸಾಯಬಂಧುಗಳು ತಮ್ಮ ಸ್ವಾರ್ಥಲೋಲುಪ ವೃತ್ತಿಯನ್ನು ಇನ್ನೂ ಹಾಗೆಯೆ ಸಾಗಿಸಿರುವರೋ ಏನೋ! ಈ ವರೆಗಿನ ಚಳವಳಿಗಳಲ್ಲಿ ಅಗ್ರ ಪೂಜೆಯಮಾನವನ್ನು ದಿಕ್ಕರಿಸಿಕೊಂಡ ರಥಿ ಮಹಾರಥಿಗಳು ಈಗ ಕ್ಲೈಬ್ಯನೃತ್ತಿಯನ್ನು ಆಶ್ರಯಿಸಿ ಒಬೊಂದೇ ಹೆಜ್ಜೆಯನ್ನು ಹಿಂದಕ್ಕೆ ಕಿತ್ತಿಸುಕೊಳ್ಳಹತ್ತಿದ್ದಾರೆ. ಊರಲ್ಲಿ ಸಭೆ ನಡಿದಾಗ ಸಭೆಯಲ್ಲಿ ಮಾತಾಡುವದಂತೂ ಇರಲಿ ಆ ಸಭೆಗೂ ಸಹ ಬರುವದಿಲ್ಲ. ಖಾದಿ ಹಾಗು ಸ್ವದೇಶಿಯ ಪ್ರಚಾರವು ಯಾವ ಪ್ರಮಾಣಲ್ಲಿ ಆಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಈ ವರ್ಗದವರಲ್ಲಿ ಅದದ್ದು ಕಂಡು ಬರುವದಿಲ್ಲಇಷ್ಟೇಅಲ್ಲದೆ .

ನಾಲಕ್ಕು ಕಡೆಗೆ ರಣಕುಂಡಲವು ಪ್ರಜ್ವಲಿಸವಾಗಿ ಹೆಂಗಸರೂ ಹುಡುಗರೂ ಸಹ ಲಾಠೀರಾಜ್ಯದಲ್ಲಿ ಪ್ರೇಮಪೂರಸ್ಪದವಾಗಿ ತಮ್ಮ ತಮ್ಮ ಅಹುತಿಗಳನ್ನು ಕೊಡುತಿರುವಾಗ, ಟೀನೇಸ, ಬಿಲಿಮಾರ್ಜ ವೊದಲಾದವುಗಳನ್ನು ಅಡುವದಕ್ಕೂ, ಇಲ್ಲನೆ ನಿದ್ದೆ ಹೊಡೆಯುವದಕ್ಕೂ ನಮಲ್ಲಿ ಎಷ್ಟೋಜನರಿಗೆ ಸ್ವಲ್ಪಾದರೂ ಸಂಕೋಚವೆನಿಸುವದಿಲ್ಲ.

೩ ಈ ಚಳವಳಿಯಲ್ಲಿ ಭಾಗ ತೆಗೆದುಕೊಂಡಲ್ಲಿ ತಮ್ಮ ಸನದು ರದ್ದಾಗಿ ಹೋಗುವದಾಗಿ ಕೆಲವರಿಗೆ ಭೀತಿಯುಂಟಾಗಿದೆ. ಧೂರ್ತರಾದ ಅಳರಕಾರರಾದರೂ ಈ ಭೀತಿಯ ಲಾಭವನ್ನು ತೆಗೆದುಕೊಂಡು ಎಷ್ಟೋಜನ ಪ್ರಸಿದ್ಧ ವಕೀಲರನ್ನು ಈ ಚಳವಳಿಯಿಂದ ಪರಾಙ್ಮುಖಗೊಳಿಸಿದ್ದಾರೆಂಬುದನ್ನು ತಿಳಿಸಲು ವಿಷಾದವಾಗುತ್ತದೆ. ಎಪ್ರಿಲ್ ತಿಂಗಳಲ್ಲಿ ಈ ಚಳವಳಿಯು ಸುರುವಾದ ಕೂಡಲೆ ಬೆಳಗಾವ ಜಿಲ್ಲೆಯೊಳಗಿನ ಸುಮಾರು ೫೦ ಜನ ವಕೀಲರೂ ಸಮ್ಮೊಡನೆ ಕೂಡಿಕೊಂಡು ಕಾಯದೆಭಂಗ ಮಾಡಲು ಸಿದ್ಧರಾಗಿದ್ದರು ಇದನ್ನು ತಿಳಿದುಕೊಂಡು ಅಧಿಕಾರಿವರ್ಗದವರು ಚಳವಳಿ ಮೂಲಕವಾಗಿ ಶಿಕ್ಷೆಪಡಿಸುವ ಯಾದ ನಮ್ಮ— [ಮೂರುಜನ ವಕೀಲರ] ಸನದನ್ನೂ ರದ್ದುಪಡಿಸುವ ಕಾರ್ಯವನ್ನು ಪ್ರಾರಂಭಿಸಿದರು ಇದನ್ನು ಕಂಡುಕೊಂಡು ವಕೀಲ ವರ್ಗದವರು ಹೇಗೂಕೂಡದಷ್ಟು ಬೆದರಿ ಹೋದರು ಚಳವಳಿಯಲ್ಲಿ ಬೀಳಲಿಚ್ಛಿಸಿದವರೂ ದೂರ ಸರಿದು ನಿಂತುಕೊಂಡರು. ಇದರಿಂದ ವಕೀಲ ವರ್ಗದ ಶಟಚ್ಛ ವೃತ್ತಿಯು ಮೊದಲಿನಕಿಂತಲೂ ದ್ವಿಗುಣತವಾಗಿ, ಚಳವಳಿಯಲ್ಲಿ ವಕೀಲರ ಹೆಸರು ಸಹ ಕೇಳಬರದಂತಾಯಿತು ಈ ವಿಷಯದಲ್ಲಿ ಕದ್ದುದಲ್ಲಿ ಕೈಹಾಕುವನಿಲ್ಲವಾಗಿ ಹಾಯಕೋರ್ಟಿನವರು ಕರಾಯಿಸಿಕೊಂಡಿದ್ದರೂ ಸಹ ನಮ್ಮ ವ್ಯವಸಾಯ ಬಂಧುಗಳಲ್ಲಿ ಶಟಚ್ಛ ವೃತ್ತಿಯು ಇನ್ನೂ ಹೋಗಿಲ್ಲ ಮತ್ತು ಆ ಅವರು ವಿಶೇಷವಾಗಿ ಮುಂದಕ್ಕೆ ಬರಹತ್ತಿಲ್ಲ.

೪ ಕೇವಲ ಕಾಯದೆಯ ದೃಷ್ಟಿಯಿಂದ್ದ ವಿಚಾರಿಸಿದರೂ, ಡಾ॰ ಗೌರರು ಹೇಳಿದಂತೆ ಅನತ್ಯಾಚಾರಿ ಕಾಯದೆಭಂಗದಲ್ಲಿ ಭಾಗತೆಗೆದುಕೊಂಡಲ್ಲಿ ವಕೀಲರಿಯ ಸನದನ್ನು ರದ್ದು ಮಾಡಲು ಬರುವನಿಲ್ಲ ಮತ್ತು ಯಾವ ಹಾಯಕೋರ್ಟಾದರೂ ಹೀಗೆ ರದ್ದು ಮಾಡಿದ್ದು ನನ್ನ ಕೇಳಿಕೆಯಲ್ಲಿಲ್ಲ. ತಮ್ಮ ವ್ಯವಸಾಯವನ್ನು ಸಾಗಿಸುವ ಯೋಗ್ಯತೆಯು ಕಾಣಿಸದಿದ್ದಲ್ಲಿ ಮಾತ್ರ ಸನದು ರದ್ದು ಮಾಡಲ್ಪಡುವದು ಹೊರತಾಗಿ ಉಳಿದ ಆಗಂತುಕ ಕಾರಣಗಳಿಂದ ಅದು ರದ್ದು ಮಾಡಲ್ಪಡಲಾರದು. ವಕೀಲರೆಲ್ಲರೂ ಈ ಕಾರಣವನ್ನೇ ಮುಂದೆ ಮಾಡುವದು ಅಶಕ್ಯಾಶ್ಯವಾಗಿದೆ. ೫೦—೬೦ ವರ್ಷಗಳವರೆಗೆ ಒಂದೇ ಸವನೆ ವ್ಯವಸಾಯವನ್ನು ಸಾಗಿಸಿ ಲಕ್ಷಗಟ್ಟಿಯೆಲ್ಲದಿದ್ದರೂ ಸಾವಿರಗಟ್ಟಿ ರೂಪಾಯಿಗಳನ್ನು ಸಂಪಾದಿಸಿದ್ದುಕೊಂಡ ಹಾಗು ತಮ್ಮ ಕುಟುಂಬದ ಜೀವಿತಾರ್ಥವು ಉತ್ತಮವಾಗಿಯೂ ಸುಲಭವಾಗಿಯೂ ಸಾಗುವಂತೆ ಸಾಕಾಷ್ಟು ಸ್ಥಾವರ ಜಂಗಮ ಆಸ್ತಿಯನ್ನೂ ಗಳಿಸಿಟ್ಟುಕೊಂಡ ವಕೀಲರು ಪ್ರತಿಯೊಂದು ಸ್ಥಳದಲ್ಲಿಯೂ ಅಧಿಕವಾಗಿ ಸಿಗುವರು. ಇಂತಹವರೂ ಸನದಿನ ಕಾರಣವನ್ನು ಮುಂದೆವಾಡುವದು ಕೇವಲ ನೆಮ್ಮೆವಾಗಿದೆಯೆಂದು ಯಾರಾದರೂ ಅಂದಲ್ಲಿ ಅದು ತಪ್ಪಾಗಲಿಕ್ಕಿಲ್ಲವಷ್ಟೆ. ಹೊರವಾಗಿಯೆ ತಮ

ಹಾವ ಕಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವರೆಗೆ ಒಂದೇಸವನೆ ಹಂಚಿದೆ!

ಜನರಲ್

ಅಶ್ಯೂರನ್ಸ ಸೊಸಾಯಿಟಿ. ಲಿ. ಅಜವಿೂರ.

ಈ ಸೊಸಾಯಿಟಿಯ ಆಸ್ತಿಯು ೨೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ.

ಲಾಭ.

ವಿಮೆದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೨ ನೇ ವರ್ಷದವರೆಗೆ ಹಿಂದಿನ ವಿಮೆ ಕಂಪನಿಯು ಕೊಟ್ಟ ಅತ್ಯಂತ ಹೆಚ್ಚು ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು."

೧೯೨೪ ನೇ ಮಾರ್ಚ ೩೧.	೧೯೨೫ ನೇ ಡಿಸೆಂಬರ ೩೧.	೧೯೨೬ ನೇ ಡಿಸೆಂಬರ ೩೧.
ಇಡೀ ಆಯುಷ್ಯದ (ಕಡತವಾಗಿ ಪೊರೆಯುತಕ್ಕದ್ದು) ವರ್ಷವೊಂದಕ್ಕೆ ೧೨ ½ ರೂ.	ಇಡೀ ಆಯುಷ್ಯದ (ಕಡತವಲ್ಲದೆ ಪೊರೆಯುತಕ್ಕದ್ದು) ವರ್ಷವೊಂದಕ್ಕೆ ೨೧ ½ ರೂ.	ಇಡೀ ಆಯುಷ್ಯದ (ಕಡತವಲ್ಲದೆ ಪೊರೆಯುತಕ್ಕದ್ದು) ವರ್ಷವೊಂದಕ್ಕೆ ೨೫॥ ೦/೦ ರೂ.
ವರ್ಷ.	ವಾರ್ಷಿಕ ಉತ್ಪನ್ನ.	ಹೊಸ ವ್ಯವಹಾರ.
೧೯೨೬	೬,೪೮,೪೭೦	೧೯,೨೫,೫೦೦
೧೯೨೭	೭,೧೬,೩೫೪	೩೮,೦೧,೫೦೦
೧೯೨೮	೯,೩೫,೫೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರದ ಬಾಗು ಅತ್ಯಂತ ಮೋಹಕವಾದ ಗಳಿಕೆ ಇವುಗಳ ಪೂರ್ಣ ಲಾಭವನ್ನು ಹೊಂದಿರಿ.

ಬಗಲಕೋಟೆಯ ಏಜಂಟರು:— ವ್ಹಿ. ಜಿ. ಪರ್ವತಿಕರ ಮತ್ತು ಮಕ್ಕಳು.

ಚೀಫ ಏಜಂಟ:— ಎಸ್. ಆರ್. ಸರದೇಸಾಯಿ, ಮುಂಬೈ ನಂ ೬.

THE UNITED KARNATAK INSURANCE COMPANY LTD. DHARWAR.

ಸುಸಂಧಿ ಶ್ವರಿಮಾಡಿರಿ ಕಳಿದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟಡ್ ಧಾರವಾಡ.

(೧೯೧೪ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೬ ನೆ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ಬೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಎಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುಕಾಲಿಕಪೇಸಾಯಿ ಬಿ ಎ ಆಣ್ವೀಗೇರಿ

೪ ನಿ. ರಾಮಚಂದ್ರ ರಂಗೋ ಸಾವಕಾರ ನತನದಾರ ಹಳೇಹುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡದಹುಬ್ಬಳ್ಳಿ ವಕೀಲ ಬೈಲಹೊಂಗಲ

೭ ವಿ॥ ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾಮರಾವ ವೆ ಭಂಡಿವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅಮೊನಸಾಹೇಬ ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಂಟ ಇನ್‌ಶ್ಯೂರನ್ಸ ಕಂಪನಿಯೆಂದರೆ ಇದೇ ಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ ಏಜಂಟರಾಗಿಯಾಗಲಿ ವಿಮೆ ಇಳಿಸಿಯಾಗಲಿ ಸಹಾಯವನ್ನಾಡಿ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ ಹೆಚ್ಚಿದ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯು ಶೇರುಗಳು ವಸೂಲಾಗುತ್ತಿವೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿರುವದು. ಶೇರುಗಳನ್ನು ವಸೂಲಾವದಕ್ಕೂ ಮತ್ತು ವಿಮೆಯ ಕೆಲಸವನ್ನು ತಂದುಕೊಡವದಕ್ಕೂ ಎಲ್ಲಾ ದೊಡ್ಡ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಏಜನ್ಸಿ ಕರಾರುಗಳು ಸುಲಭ ಸವಲತ್ತುಗಳು ಎಪ್ಪುಲ, ಪುಳು, ಕವಿಂಷನ ದರಗಳು ಲಾಭಕರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar
ಸೆಕ್ರೆಟರಿ
ಯು. ಕ. ಇ. ಕಂ. ಲಿ. ಧಾರವಾಡ.

ಬಾಲಗೃಹ ಚೂರ್ಣ
ಬಾ. ಕ, ೧—೪—೦

ಡಾ. ಬೈಲೂರ.

ಛಂಡಿ ಉರಿಯು ಗುಳಿಗೆಗಳು
ಬಾ ಕ. ೦—೪—೦

ಇವರ ಔಷಧಗಳು

ಕಾಫ್ ಸಾಯಿರಪ್ ೫— ನೆಗಡಿ, ಗೊಬ್ಬಗ, ಮೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊತರ್ತಾಗಿ ಸಣ್ಣ ಮಕ್ಕಳಿಗೆ ಅಥವಾ ದೊಡ್ಡ ಮನುಷ್ಯರ ಸಿಮೋನಿಯಾ ಜೀನಿಯಮೇಲೆ ಸಮ್ಮ ಕಾಫ್‌ಸಾಯಿರಪ್‌ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿದಿರುತ್ತೆವೆ. ಈ ಕಾಫ್‌ಸಾಯಿರಪ್‌ನನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಗಳನ್ನ ಬರೆದಂತೆ ಕೊಡಲು ಅತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕ್ಕೆ ಸಣ್ಣ ಬಾ. ೦-೬-೦ ದೊಡ್ಡ ಬಾ. ೦-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.
೫ ರೂ. ಕಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೨ ಪಿಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಬಹುದು.

ಪತ್ತೆ:— ಡಾ॥ ಹರಿ ಮಹಾದೇವ ಬೈಲೂರ. ಧ, ಬೆಳಗಾವ.

ಶವರಲೇಟ ಎಜನ್ಸಿ.

ನಾವು ಶವರಲೇಟ ಮೋಟರ ಕಂಪನಿಯ ಬೆಳಗಾಂವ ಮೋಟರ ವರ್ಸ್ ಟ್ರಾನ್ಸ್ ಪೋರ್ಟ ಕಂಪನಿಯ ಸಬ್ಬ ಎಜಂಟರಿರುತ್ತೆವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ಸಮ್ಮ ಕಡೆಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯು ಹುಬ್ಬುಮುತ್ತಲಿನ ಜಾಗದಿ ವಿ ಸರ್ವಿಸಿನ ಮೋಟರ ಮಾಲಕರ ಗೈರಸೋವಿ ದೂರವಾಗಬೇಕೆಂದು ಒಂದು ಜನರಲ್ ಮೋಟರಸರ್ವಿಸ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲ ಕೋಟೆಯಿಂದಾ ವಿಜಾಪುರ ಇಲಕಲ್ಲ ಸರಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರ ಗೈರಸೋವಿದೂರಾಬೇಕೆಂದು. ಶಾ. ಖಿ-೩-೩೦ ನೇ ದಿವ್ಸ (ಜೈತ್ರ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ)

ಇಲಕಲ್ಲದಿಂದಾ ೯॥ಘಂಟೆಗೆ ಹೊರಟು ಹುನಗುಂದ, ಅಮಿನಗಡ, ಕಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಜನಶಂಕರಿದೇವಸ್ಥಾನ, ಶಿರೂಳಚಗುಡ್ಡ, ಕೆರಿಬಿ, ಜಂಲಿಹಾಳ, ಹೀರೆಹಾಳ, ಕೊಚಬಾಳ, ಲಕ್ಷ್ಮೇಶ್ವರ, ಅಬ್ಬಿಗೇರಿ, ನರೆಗಲ್ಲ, ಕೊಟುಮಚಗಿ, ನಾರಾಣಾಪುರ, ಮಾರ್ಗವಾಗಿ ಗದಿಗ್ಗೆ ದಿನಾಲು ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು. ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ ಹೊಂಟು ಸಂಜೆ ೫ ಘಂಟೆಗೆ ಇಲಕಲ್ಲಗೆ ಬಂದು ಮುಟ್ಟುತ್ತದೆ. ತಂತಾನಿದ ವೇಳೆಗಿಂತಾ ೧೫ ನಿನಿಟ ಮುಂಚಿತವಾಗಿ ಪ್ಯಾಸಿಂಜರರು ಸ್ಟ್ಯಾಂಜಿನ ವೇಲೆ ಹಾಜರ ಇರಬೆಕ್ಕದ್ದು ಡ್ರಾಯವರನಕಡೆಯಿಂದಾ ಮೋಟರಿನಲ್ಲಿ ಸ್ಥಳವಿದ್ದಟ್ಟಿಗೆ ಬುಕ್ಕಿಮಾಡಿಕೊಂಡು ಟಿಕೀಟು ತೆಗೆದು ಕೊಳ್ಳಕಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರಿಪೆರಿ ಪರ್ಮಾನೆಂಟ್ ಇರುತ್ತದೆ ಮತ್ತು ಹೊಸವಾಗಿ ಎಲ್ಲ ಥಮುನೇದು ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವಿಸ—

ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ಶವ್ರಲೆಟ ಸಬ್ಬ ಎಜಂಟ್ಸ ಆಂಡ ಬಾಡಿಬಿಲ್ಡರ್ಸ ಬಾಗಲಕೋಟೆ

THE POONA SCHOOL OF COMMERCE

Reopens on 16 th- June. Students coached for London Chamber of Commerce and other commercial examinations in banking. Accountancy Shorthand Type-writing etc. Apply for prospectus to:—

Secretary, Budhawar Chowk; Poona-city.

ಈ ಪತ್ರಿಕೆಯು ವಿಠೋಬ ಶಿವರಾಮ ಜೋಶಿಯವರು ಜಮಖಂಡಿ ಇವರಿಂದ ಬಾಗಲಕೋಟೆ ಪದ್ಮಾಂಕ್ಷಿ ಮುದ್ರಾ ಯಂತ್ರದಲ್ಲಿ ಮುದ್ರಿಸಲ್ಪಟ್ಟು ಆಫೀಸಿನಿಂದ ಅಕ್ಷಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ಬೆಲೆ. ೦–೦–೩.

ಯದಾತ್ ಪರವಶಂ ದುಃಖಂ । ಯದಾತ್ಮವಶಂ ಸುಖಮ್ ॥–ಮನು.



ಸಂಪಾದಕರು:– ವೆಂಕಟೇಶ ಶೇತುರಾವ್‌ನಾಚಾರ್ಯ ಕೆರೂರ.

ಪ್ರತಿ ರವಿವಾರ ಪ್ರಕಟಿಸಲ್ಪಡುವದು.

ಪುಟ್ ೬ | ಬಾಗಲಕೋಟೆ ವಿಜಯಂದ ಪತ್ರಿಕೆ ಕರ್ಮವೀರ ಪತ್ರಿಕೆಗೆ ತಾ ೭-೧೨-೧೯೩೦ Kannadiga Date 7—12—1930. | ೩೫೫

ಅಲಹಾಬಾದ ಜಿಲ್ಲೆಯಲ್ಲಿ

ಕಾಂಗ್ರೆಸ್ ಸಂಸ್ಥೆಗಳಿಗೆ ಮುತ್ತಿಗೆ.

ಅಲಹಾಬಾದ ಜಿಲ್ಲೆಯೊಳಗಿನ ಕಾಂಗ್ರೆಸ್ ಕಮೀಟಿ, ಸಕ್ಯಾಗ್ರಹ ಮಂಡಳ, ಯುವಕ ಸಂಘ ಮೊದಲಾದವುಗಳು ಕಾಯಿದೆಗೆ ವಿರುದ್ಧವಾಗಿ ಸಾರಲ್ಪಟ್ಟಿದ್ದನ್ನು ಅನುಸರಿಸಿ, ಪೋಲೀಸ ಅಧಿಕಾರಿಗಳು ಜಿಲ್ಲೆಯೊಳಗಿನ ೮ ಸಂಸ್ಥೆಗಳನ್ನು ಝಡತಿ ಮಾಡಿ ಕಾಗದಪತ್ರಗಳನ್ನು ತೆಗೆದುಕೊಂಡು ಹೋಗಿದ್ದಾರೆ.

ದಿಲ್ಲಿಯಲ್ಲಿ

ಬಾಂಬುಗಳು ಹಾರಿದವು

ದಿಲ್ಲಿಯ ಟೌನ್‌ಹಾಲ್ ಕಾಲೇಜದ ದ್ವಾರದಲ್ಲಿ ಒಂದು ಬಾಂಬು ಇಡಲ್ಪಟ್ಟಿತ್ತು. ಕಾಲೇಜಕ್ಕೆ ಹೋಗುವಮುಂದೆ ಇಬ್ಬರು ವಿದ್ಯಾರ್ಥಿಗಳು ಆ ಬಾಂಬನ್ನು ಕೈಯಲ್ಲಿ ತೆಗೆದುಕೊಂಡರು. ಅವು ಸಿಡಿದಲೆ ಹಾರಿ ಅವರಿಗೆ ಗಾಯವನ್ನುಂಟುಮಾಡಿದವು.

ಚಾಂದಣಿ ಚೌಕದಲ್ಲಿಯೂ ಹಾದಿಯಲ್ಲಿ ಸಾಯುತ್ತಿದ್ದ ಎರಡು ಜನರ ಮೇಲೆ ಬಾಂಬು ಹಾಗೆ ಬಿಸಲ್ಪಟ್ಟಿತು. ಯಾರಿಗೂ ಗಾಯವಾಗಿಲ್ಲ.

ಶ್ರೀ ಗಾಡಗೀಳರಿಂಗೆ

ಮತ್ತೆ ತುರಂಗದ ಖಾತಣ

ಈಗಿನ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಎನ್. ಸಿ. ಗಾಡಗೀಳರ ಮೇಲೆ ಕ್ರಿ. ಆ. ಅಮೆಂಡಮೆಂಟ್ ಕಾಯದೆಯ ೧೬ನೆಯ ಕಲಮಿನ್ವಯ ಸಮನ್ಸ ಹೊರಟಿದ್ದು, ಅವರ ವಿಚಾರಣೆಯು ಇಂದು ಕರಾಡದಲ್ಲಿ ಡಿಸಿಡೆಂಟ್ ಮ್ಯಾಜಿಸ್ಟ್ರೇಟರ ಮುಂದೆ ನಡೆಯಬೇಕಾಗಿದ್ದಿತ್ತು. ಶ್ರೀ ಗಾಡಗೀಳರು ತುಳಂಗದಿಂದ ಪೊನ್ನೆ ಮೊನ್ನೆ ಬಿಡುಗಡೆಹೊಂದಿ ಬಂದಿದ್ದರು.

ಯುರೋಪಿಯನ್ನರು

ಚಳವಳಿಗೆ ಬೆದರಿದರು.

ಸಿಂಧ ಪ್ರಾಂತದ ಯುರೋಪಿಯನ್ನರು ತಮ್ಮೊಂದು ಸಭೆಯನ್ನೆ ಏರ್ಪಡಿಸಿಕೊಂಡು ಸಿಂಧದಲ್ಲಿಯ ಕಾಂಗ್ರೆಸ್ ಸಂಸ್ಥೆಗಳನ್ನು ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳೆಂದು ಸಾರಿ ಅವುಗಳನ್ನು ೯ನೆಯ ಆರ್ಡಿನನ್ಸದ ಪ್ರಕಾರ ತಮ್ಮ ವಶಪಡಿಸಿಕೊಳ್ಳಲು ಸರಕಾರದವರಿಗೆ ಬುದ್ಧೀ ಹೇಳಿದ್ದಾರೆ. ಒಳ್ಳೇ ಉಪದೇಶ!

ಪೋಲೀಸ ಸಾಹೇಬರ ಮೇಲೆ

ಪಿಸ್ತೂಲು ಹಾರಿಸಿದರು.

ಕಾನಪುರದ ಅಸಿಸ್ಟಂಟ ಪೋಲೀಸ ಸೂಪರಿಂಟೆಂಡೆಂಟ ಸಾಹೇಬರು ಕೆಲವು ಜನ ಪೋಲೀಸರೊಂದಿಗೆ ತಾ॥ ೧ನೆಯ ದಿವಸ ಅಲ್ಲಿಯ ಡಿ. ಎ. ವಿ. ಕಾಲೇಜಕ್ಕೆ ಝಡತಿಗಾಗಿ ಹೋಗಿದ್ದರು. ಕಾಲೇಜದ ಕಂಪೌಂಡಿನಲ್ಲಿ ಕಾಲಿಡುವಾಗ ಸಾಲಿಗ್ರಾಮ ಶುಕ್ಲನೆಂಬ ಓರ್ವ ವಿದ್ಯಾರ್ಥಿಯು ಅವರ್ಮೆ ಅಡ್ಡಾಡುತ್ತಿರುವದು ಅವರಿಗೆ ಕಂಡುಬಂದಿದ್ದರಿಂದ ಅವನು ಅವನನ್ನು ಸೆರೆ ಹಿಡಿಯಹೋದರು. ಅಧಿಕಾರಿಗಳು ತನ್ನ ಕಡೆಗೆ ಬರುತ್ತಿರುವದನ್ನು ಕಂಡುಕೊಂಡು ಶ್ರೀ ಸಾಲಿಗ್ರಾಮರು ಕಿಸೆಯೊಳಗಿಂದ ಪಿಸ್ತೂಲನ್ನು ಹೊರಗೆ ತೆಗೆದು ಅದನ್ನು ಅವರ ಮೇಲೆ ಹಾರಿಸಿದರು. ಪೋಲೀಸ ಸಾಹೇಬರಿಗೂ, ಇಬ್ಬರು ಪೋಲೀಸರಿಗೂ ಗಾಯಗಳು ಸಂಭವಿಸಿದವು. ಸಾಲಿಗ್ರಾಮರು ಅಲ್ಲಿಂದ ಪಾರಾಗಿ ಹೋಗಲು ಯತ್ನಿಸಿದರು ಅದು ಸಾಧ್ಯವಾಗಲಿಲ್ಲ. ಪೋಲೀಸ ಸಾಹೇಬರು ಅವನನ್ನು ಗುಂಡಿನಿಂದ ಹೊಡೆದುಕೊಂದುಬಿಟ್ಟರು.

ವಿದ್ಯಾರ್ಥಿಗಳು

ಅನ್ನತ್ಯಾಗ ಮಾಡಿದರು.

ಶಲಕತ್ತೆಯ ಸರಕಾರಿ ಕಲಾಭುವನದ ಅಧಿಕಾರಿಗಳು ವಸತಿಗೃಹದೊಳಗಿಂದ ಐದು ಜನ ವಿದ್ಯಾರ್ಥಿಗಳನ್ನು ಹೊರಗೆಹಾಕಿದ್ದರಿಂದ ವಸತಿಗೃಹದ ಎಲ್ಲ ವಿದ್ಯಾರ್ಥಿಗಳೂ ೨ನೆಯ ತಾರೀಖಿನಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದಾರೆ.

ಕಾಯಿದಾ ಜಿಲ್ಲೆಗೆ ಸೇರಿದ ಖೇಡಾ ತಾಲೂಕಿನಲ್ಲಿ ೭ ಜನರಿಗೆ ಕ್ರಿ. ಆ. ಅಮೆಂಡಮೆಂಟ್ ಕಾಯುದೆಯ ಕ್ರಿಯಾ ಕೈದಾಗಿದೆ.

ಹಳ್ಳಿಗಳಲ್ಲಿ
ಅಧಿಕಾರಿಗಳ ಉದ್ದಾಮ ತನ
(ಬರೆಯು [illegible]ದ್ದು)

ಬಾಗಲಕೋಟೆಯಿಂದ ನಾವು ಜಮಖಂ ಜನರು ಅಲಾದಗಿಗೆ [illegible]ಂಬೆ. [illegible]ಂಬೆಗೆ ಹೊಂಟಿದ್ದ ೯ ಗಂಟೆಗೆ ಕಲಾಸಗಾಯನ್ನು ಸೇರಿದೆವು ಅಲ್ಲಿ ರಾತ್ರಿ ವಾಸ ಮಾಡಿದೆವು. ಅಲ್ಲಿ ಸಭೆ ಮಾಡಲು ಅನುಕೂಲವಾಗಿಲ್ಲ. ಪೂರ ನೆಯ ದಿನ ಸಾಧ್ಯಾಸ್ಪ [illegible]ಂಟಿಗೆ ಅರಂಬಿಗೆ ಮೋಟಗಿ. ಆ [illegible] ಭೆ ಮಾಡಲು [illegible] ಟೀಲರು ಅದ್ದಿ ಸಾಡಿ ಬಾಗಿಲಿಗೆ ಬಂದಾಗ [illegible]ಂಗಿಸಾಡಿದರು. ನಂತರ ಪಲಗಲ್ಲಿಗೆ ಜಾಥಾದಿಗೆ ಹೋದೆವು. ಆಗಲೆ ಪಟೇಲರು ನಮ್ಮನ್ನು ಬಿಡಿಸಿ ನಾವು ರಾತ್ರಿ ೧೦ ಗಂಟೆಗೆ ವಾಲೀಕಾರ್ [illegible]ಜನ ಬಾಗಿಲಿಗೆ ಮೋಲೀಸ ಫೌಜದಾರರಲ್ಲಿಗೆ ಒಳಸಿಬಿಟ್ಟರು. ಅಲ್ಲಿ ರಾತ್ರಿ ಮಲಗಿದೆವು ಮಂಜಾನೆ ಜಮಖಂ ನಮ್ಮ ಹೆಸರುಗಳನ್ನು ಬರೆಸಿಕೊಂಡು ನಮ್ಮನ್ನು ಬಿಟ್ಟು ಬಿಟ್ಟರು. ಒಳಿಕ ನಾವು ಲಿಂಗ ಪುರ ಪೊಸ್ತು ಬಂಕಾರಕಿಗೆ ಹೋದೆವು. ಎರಡೂ ಊರಿಗಲ್ಲಿಯೂ ಕಾಲಿಡಲು ನಮಗೆ ಅನ್ನಿ ಯಂಬಾಯಿತು. ಅಶ್ರಲಪ್ಪಕೊಡವೆ ನಾವು ಕಾತಂಕಿಯೂಳಗೆ ಹೆ [illegible]ಟ್ಟು ಅಲ್ಲಿ ಲಂ ದಿ ಮಲ್ಲಿ ಹುರನುರಿಯನ್ನು ಕೇಳಿದೆವ್ವಾ ಪಟೇಲರು ಮತ್ತು ವಾಲೀಕಾರರ ನಮಗೆ ಚೆ ರವ ರಿ ಹ.ನ್ನು ಕೊಡಕಕ್ಕಿದ್ದಲ್ಲವಾಗಿ ಅಂಗಡಿಕಾರ ನಿಗೆ ತಿಳಿಸಿದರು. ಅವ್ವರಿಂದ ನಾವು ಹಾಗೆಯೆ ಹೋಗಿ ಮಾ [illegible]ತಿ ದೇವಸ್ಥಾನದಲ್ಲಿ ತಳವೂರಿ ನೆವು. ಅವ್ವರಲ್ಲಿಯೇ ಪಟೇಲ ಮತ್ತು ವಾಲೀ ಕಾರು ನಮ್ಮಲ್ಲಿಗೆ ಬಂದು ನಮ್ಮನ್ನ ಕಳ್ತು ಹಿಡಿದು ನೂಕಿಸಿಬಿಟ್ಟರು. ಅಲ್ಲಿಂದ ನಾವು ತಿರುಗಿ ಬಾಗಲಕೋಟೆಗೆ ಬಂದೆವು

ಅಂತಲಗಿ ಮೊದಲಾದ ಹಳ್ಳಿಗಳಲ್ಲಿ ಮೋಲಿಸ ಅಧಿಕಾರಿಗಳು ಹೆಚ್ಚಿಂಗೆಲ್ಲ ನಮ್ಮನ್ನು ಕಷ್ಟಪ್ಪಿ ಸ್ವೀಸಿಕೊಳ್ಳಲಾಡದೆಂದೂ ಮತ್ತು ನಾವು ಕಾಲಿಗೋಸುಗ ಅಡ್ಡಾ ಡುತ್ತಿದ್ದೆವೆಂ ಬುದಾಗಿಯೂ ಹೇಳುತ್ತಿರುವಂತೆ ತಿಳಿದು ಬರು ತ್ತದೆ ದರಿಂದ ಅಧಿಕಾರಿಗಳು ಇತ್ತ ಕಡೆಗೆ ಲಕ್ಷ್ಯ ಕೊಡುವರೇ? "ಫ್ಲ"

ಅಮ್ಮಾಡಾಪೂದದಲ್ಲಿ
೧೪ ಜನರಿಗೆ ಬಂಧನ

ಪರದೇಶಿ ಬಟ್ಟೆಗಳ ಅಂಗಡಿಯ ಮುಂದೆ ನಿಂತುಕೊಂಡು ಪಿಕೆಟಿಂಗ್ ಮಾಡಿ ಒಬ್ಬ ವ್ಯಾಪಾರಸ್ಥನಿಗೆ ಅವಮಾನವನ್ನುಂಟು ಮಾಡಿದ ಆರೋಪದಿಂದ ಆಹಮ್ಮದಾಬಾದಲ್ಲಿ ೧೪ ಜನ ಸ್ವಯಂಸೇವಕರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಲಖನೌದಲ್ಲಿ
ಅಡ್ವೊಕೇಟ್ಸ್‌ಗಳ ಅಂತ್ಯೇಷ್ಠಿನ

ಸ್ವಾಯತ್ತಸಂಸ್ಥಾನದ [illegible] ಂಗ್ರೆಸ್ ಕಛೇರಿಯಲ್ಲಿ ಮೂರು ದಿನದ [illegible] ಕೊಲಗಮಾಶ್ಚ ಜನಸ್ತೋಮ ಅಡ್ವೊಕೇಟ್ಸ್‌ಗಳು ತಾ ॥ ೬ ನೆಯ ದಿನದ ಸತ್ಯಾಗ್ರಹಕ್ಕಾಗಿ ಲಖನೌದ ಬಾಗ್ರೆಸ್ ಕಾರ್ಯಕರ್ತರು ಅಧಿಕಾರಿಗಳು ಅಂದು ಅವರ ಆಸ್ತಿ [illegible]ಂಬಂಧಗಳ ಎಡು ನಿದಿಗೆ ಸಿದ್ಧಪಡಿಸಿ ಚಪ್ಪಳಿಸಿಯನ್ನು ಊರ್ಜಿತಿಲ್ಲಿ ಮೆರೆಯು ಸಿದರು. ಮೆರವಣಿಗೆಯು ಪ್ರಾರಂಭವಾಗಿ ಜನರ [illegible]ರ್ಜನೆಯನ್ನು ಪತ್ತಿತು." ಎಂಬುದಾಗಿ ಗಟ್ಟಿಯಾಗಿ ಕೂಗುತ್ತ ಸಡೆದಿದ್ದರು. ಮೆರವ ಣಿಗೆಯು ಸಭಾ ಸ್ಥಾನಕ್ಕೆ ಕಲುಪಿನ ಒಳಿಕ ಅಷ್ಟ ಸಭೆ ಜಯಗಿ ಕೊನೆಯಲ್ಲಿ ೪ ಎಡೂ ನಿರ್ಣಯಗಳಿಗೆ ಬೆಂಬಲವು ಹಜ್ಜಲ್ಪಟ್ಟಿತು. ಸಭೆಯಲ್ಲಿ ಸೇರಿದ್ದ ಪ್ರೇಕ್ಷಕರು ೧೫ ನಿಮಿಷಗಳ ಒರೆಗೆ ಜಾರ ಸುತ್ತಲೆಲ್ಲ ಅಡ್ಡಾಡಿ, ಹಾರ್ ಜಾಯ್" ಎಂದು ಗೋಳಿಟ್ಟು ಅತ್ತರು.

ಸತ್ಯಾಗ್ರಹಿಗೆ
ಸಾಜರ್ಂಟನು ಬೂಟನಿಂದಹೊಡೆದನು

" ಮುಂಬಯಿಯಲ್ಲಿಯು ಶ್ರೀ ಲಗಾಟಿ ಎಂಬೊಬ್ಬ ವ್ಯಾಪಾರಸ್ಥರು ತಾ ॥ ೧ ನೆಯ ದಿವಸ ಪರದೇಶಿ ಬಟ್ಟೆಯನ್ನು ಗುಪ್ತರೀತಿಯಿಂದ ಮಾರುತ್ತಿರುವದು ಅಲ್ಲಿಯ ಬಹಿಷ್ಕಾರ ಮಂಡಳದವರಿಗೆ ತಿಳಿಯಿತು. ಅವರು ಕೂಡಲೆ ಕೆಲವು ಸ್ವಯಂಸೇವಕರನ್ನು ಅಲ್ಲಿಗೆ ಕಳಸಿ ಕೊಟ್ಟರು. ಅವರು ಅಲ್ಲಿಗೆ ಹೋಗಿ ಗಿರಾಕಿಗೆ ಬಟ್ಟೆಯನ್ನು ಕೊಂಡುಕೊಳ್ಳಕಕ್ಕಿದ್ದಲ್ಲವಾಗಿ ಬಿನ್ನವಿಸಿಕೊಂ ಡರು. ಆದರೆ ಗಿರಾಕಿಯು ಅವರ ಮಾತಿಗೆ ಲಕ್ಷ್ಯಕೊಡದೆ ಅವರನ್ನು ಒಳಿತಾಗಿ ಹೊಡೆ ಪನು. ಅವ್ವರಲ್ಲಿಯೇ ಪೋಲೀಸರು ಅಲ್ಲಿಗೆ ಬಂದು ಜಬ್ಬು ಸ್ವಯಂಸೇವಕನನ್ನು ಸೆರೆಹಿಡಿದು ಕೊಂಡು ಹೋಗಿ ಪೋಲೀಸ ಚೌಕಿಯಲ್ಲಿ ಇಟ್ಟರು. ಅಲ್ಲಿ ಒಬ್ಬ ಸಾರ್ಜಂಟನು ಬೂಟು ಹಾಗು ಕೈಗಳಿಂದ ಅವನ ಎದ ಹಾಗು ಹೊಟ್ಟೆಯ ಮೇಲೆ ಒಳಿತಾಗಿ ಪೆಟ್ಟು ಕೊಟ್ಟು ಅವನನ್ನು ಬಿಟ್ಟುಬಿಟ್ಟನು. ಸ್ವಯಂಸೇವಕನು ಈಗ ದವಾಖಾನೆಯಲ್ಲಿ ಉಪಚಾರ ಹೊಂದು ತ್ತಿರುವನು. ಈ ಸುದ್ದಿಯು ಊರಲ್ಲೆಲ್ಲ ಕೂಡಲೆ ಹಬ್ಬಿದ್ದರಿಂದ ಸಾವಿರಾರು ಜನರು ಶ್ರೀ ಲಗಾಟಿಯವರ ಅಂಗಡಿಯ ಮುಂದೆ ನೆರೆಯು ಗೊಂದಲ ಮಾಡಹತ್ತಿದರು. ವ್ಯಾಪಾರಸ್ಥನು ಪೋಲೀಸ ರನ್ನು ಕರೆಕಳುಹಿಸಿದೆಂದು ಜನರಿಗೆ ಬೆದರಿಕೆ ತಂಕಿದನು. ಒನು ಸಿಟ್ಟಿಗೆದ್ದ ಅಂಗಡಿಯಲ್ಲಿ ದ್ದೊ ಕ ಅವನನ್ನು ಹೊಡೆದಿನ್ನಲ್ಲದೆ ಬಟ್ಟೆ ಗಳನ್ನು ಸಿಕ್ಕಿ ಕ ಹಾಗೆ ಅವ್ಯವಸ್ಥವಾ ಬಿಡದು ಬೀಸಾಟು ಮಾಡಿದರು.

ಬೈಯರಾಬಾನಮಲ್ಲಿ
ಬೆನ ಸಾಹೇಬರೂ ಇದೇ ಪದವನ್ನು ಹಾಡಿದರು ದರಿಂದ ಬ್ರಿಟಿಷ್ ಮುತ್ಸದ್ದಿಗಳ ಅಂತಃಕರಣವೂ ರಗಿರುವದೆಂತಲೂ ಹಿಂದುಸ್ತಾನದ ಹಿತವನ್ನು ಮಾಡಲೆಂದು ಅವರ ಮನಸ್ಸಿನಲ್ಲಿ ಒಂದು ಬಗೆಯ ಒಲವು ಉಂಟಾಗಿರುವದೆಂತಲೂ ಹೇಳಿದರು. ಆದರೆ ಈ ಮಾತು ಎಷ್ಟರ ಮಟ್ಟಿಗೆ ನಿಜವಾಗಿರುವದೆಂಬದನ್ನು ಹುಡುಕಲು ದೂರ ಹೋಗುವ ಕಾರಣವಿಲ್ಲ. ಯಾಕೆಂದರೆ ಅದೇ ಲಂಡನ ಪಟ್ಟಣದಲ್ಲಿ ಕೂಡಿದ ಭರತ ಸಾಮ್ರಾಜ್ಯ ಸಂಘದ ಸಭೆಯಲ್ಲಿ ಚರ್ಚಹಿಲ್ಲ ಸಾಹೇಬರು, ಹಿಂದುಸ್ತಾನದಲ್ಲಿ ಅಡಳಿತೆಯು ಕೆಟ್ಟು ಗಡಿಬಿಡಿಯಾಗಿರುವ ದೆಂತಲೂ, ಅಲ್ಲಿ ಅಲ್ಲಿ ದಬ್ಬಾಳಿಕೆಯನ್ನು ಇನ್ನೂ ಹೆಚ್ಚು ಆರಂಭಿಸ ಬೇಕಾಗಿತ್ತೆಂತಲೂ, ಮತ್ತು ಮುಂದಾಳುಗಳನ್ನು ಹಿಡಿದು ಗಡಿಪಾರು ಮಾಡಬೇಕಾಗಿತ್ತೆಂತಲೂ, ಮತ್ತು ಮಹಾತ್ಮರನ್ನು ಅವರು ದಂಡೀಗೆ ಹೋದ ದಿವಸವೇ ಹಿಡಿದು ಹಾಕಬೇಕಾಗಿತ್ತೆಂತಲೂ ಬಹಳ ಉದ್ಧಾಮತನದಿಂದಲೂ ಒಣ ಹೆಮ್ಮೆಯಿಂದಲೂ ಒದರಿಕೊಂಡರು. ಈ ಸಂಗತಿಯನ್ನು ನೋಡಿದರೆ ಮಿ. ಬೆನ ಹಾಗು ಮಿ. ಥಾಮಸ ಸಾಹೇಬರು ಬ್ರಿಟಿಷ ಮುತ್ಸದ್ದಿಗಳ ಮನಸ್ಸು ಳೆರಗಿರುವದೆಂಬ ಹೇಳುವ ಮಾತು ನಿಜವೋ ಅಥವಾ ಚರ್ಚಹಿಲ್ಲ ಸಾಹೇಬರಂಥ ಇನ್ನೂ ಅನೇಕ ಸಾಹೇಬರು ಹಿಂದುಸ್ತಾನಕ್ಕೆ ಸ್ವರಾಜ್ಯ ಕೊಡುವ ಮಾತು ಎತ್ತಲು ತಲೆಗೆ ಬಿಕ್ಕೀರಿದಂತೆ ಳುಡಿಯುವ ಮಾತು ನಿಜವೋ ಎಂಬುದು ತಾನೇ ತಿಳಿದು ಬರುತ್ತದೆ. ಹಿಂದುಸ್ತಾನದಿಂದ ಮರಳಿ ಪಕ್ಷದ ಮುಂದಾಳುಗಳನ್ನು ಮುಂದೆ ಮಾಡಿಕೊಂಡು ಈ ಬಂಡೀಗಾಲಿ ಪರಿಷತ್ತಿನ ತಮಾಷೆಯನ್ನು ಮಾಡಿದರೆ ಹಿಂದುಸ್ತಾನದ ಪ್ರಜೆಗಳು ಸಂತೃಪ್ತರಾಗರು. ಈ ಮಾತು ಅಲ್ಲಿಯ ಕೂಲಿಕಾರ ಪಕ್ಷದ ಮುಂದಾಳುಗಳಿಗೆ ಮನದುಣ್ಣಿಗಿರುವದು ಅದೇ ಪಕ್ಷದ ಮುಂದಾಳುಗಳು ಮತ್ತು ಮುಖ್ಯ ಪ್ರಧಾನರೂ ಆದ ಮಿ. ಮ್ಯಾಳ ಸಾಹೇಬರು ಏನಾದರೂ ಮಾಡಿ ಬಂಡೀಗಾಲಿಯ ಪರಿಷತ್ತಿನ ಪ್ರತಿನಿಧಿಗಳಾಗಿ ಹೋದ ಮರಳಿ ಪಕ್ಷದ ಮುಂದಾಳುಗಳಿಗೆ ಮುಂಳುಬೂದಿ ಹಚ್ಚಿ ಅವರನ್ನು ಸಂತೋಷ ಪಡಿಸುವ ಯತ್ನವನ್ನು ಪಡಿಸಿರುವರು ಆದರೆ ಈ ಪರಿಷತ್ತಿನ ಸ್ಥಿತಿಯು ಕೆಳೆಕೆ ಳುಂಬಳಕಾಯಿಯಂತೆ ದಿನ ದಿನಕ್ಕೆ ಹೆಚ್ಚು ಹೆಚ್ಚು ಳೂಳೆಯುತ್ತ ನಡೆದಿದೆ. ಹಿಂದುಸ್ತಾನದಲ್ಲಿಯು ರಾಷ್ಟ್ರ ಪಕ್ಷದ ಜನರು ಈ ಪರಿಷತ್ತಿನ ಪರವೆಯನ್ನೇ ಇಚ್ಛಿಸಲ್ಲ. ಸ್ವರಾಜ್ಯ ಸಂಪಾದನೆಗಾಗಿ "ಉದ್ಧರೇದಾತ್ಮನಾತ್ಮಾನಂ" ಎಂದು ಗೀತೆಯಲ್ಲಿ ಹೇಳಿದಂತೆ ತಮ್ಮ ಮಾರ್ಗವನ್ನು ತಾವು ಹಿಡಿದಿರುವರು. ಇದರಿಂದಲೇ ತಮ್ಮ ಉದ್ಧಾರವೆಂಬ ವಾಕ್ಯವನ್ನು ಅವರು ಮಹಾತ್ಮರಿಂದ ಕಲಿತರು ಎಂಬುದು ಹಿಂದುಸ್ತಾನವು ಮುಂದಿನ್ನು ಹೆಜ್ಜೆಯನ್ನಿಡಲಿಲ್ಲವೆಂಬ ಮಾತು ಜಗತ್ತಿಗೆ ಚೆನ್ನಾಗಿ ತಿಳಿದಿದೆ. ಚರ್ಚಹಿಲ್ಲ ಸಾಹೇಬರಂಥ ಇನ್ನೂ ಕೆಲವು ಸಾಹೇಬರು ಎಷ್ಟು ಕಡಪಡಿಸಿದರೂ ಈ ಚಳವಳಿಯು ನಿಲ್ಲಲಾರದೆಂಬ ಮಾತು ಗುಜರಾತಿನ ಬಹಳ ಒಳ್ಳೆಯವರಾದ ಬಂಡಿಗಳು ಮನೆಮಾರುಗಳ ಹಾಗೂ ಜೀವಕ್ಕೆ ಹಂಗು ದೊರೆದು ಮಹಾತ್ಮರನ್ನೂ ಸರದಾರರನ್ನೂ ಬಿಡುವ ವರೆಗೆ, ತೆಂಗಿಯ ಒಂದು ಸೈ ಸಹ ಕೊಡುವದಿಲ್ಲೆಂದು ಹೊರಟಿರುವದೇಬದನ್ನು ನೋಡಿದರೆ ಸ್ಪಷ್ಟವಾಗಿ ತಿಳುಬರುವದು ಇತಿಹಾಸದಲ್ಲಿ ಇಂಥ ಪ್ರಸಂಗಗಳು ಬಹಳ ವಿರಳ. ಹಿಂದೆಲ್ಲ ಕನ್ನಡ ರಾಜಧಾನಿಯಾದ ವಿಜಯನಗರವನ್ನು ಶತ್ರುಗಳು ಳೆಸಿದುಳಿಸಿಂತ ಕಾಲದಲ್ಲಿ ರಾಜಕುಲ ವೀರ ತಿಮ್ಮಾಮಣಿಯಾದ ಪ್ರಜಾಪಸಿಂಗನು ತಿರುಗಿ ಕನ್ನಡ ಪತಿಷ್ಠಾಪನೆಯನ್ನು ಕೈಗತ ಮಾಡಿಕೊಳ್ಳುವ ವರೆಗೆ ತಾನು ಬಂಗಾರದ ತಾಟಿನಲ್ಲಿ ಉಣ್ಣಲಿಕ್ಕಿಲ್ಲವೆಂದೂ ಹಾಸಿಗೆಯ ಮೇರೆ ಮಲಗಲಿಕ್ಕಿಲ್ಲವೆಂತಲೂ ಪ್ರತಿಜ್ಞೆ ಮಾಡಿದ್ದನು. ಗುಜರಾತದ ರೈತರು ಈ ಘೋರ ಪ್ರತಿಜ್ಞೆಗಾದರೂ ಭರತ ಖಂಡದ ಇತಿಹಾಸದಲ್ಲಿ ಅಷ್ಟೆ ಮಹತ್ವವಿಲ್ಲವೋ! ಅಥವಾ ಅದಕ್ಕಿಂತ ಹೆಚ್ಚಿನ ಮಹತ್ವವನ್ನಾದರೂ ಯಾಕೆ ಕೊಡಬಾರದು?

ಬಲವಂತ.

ನೋಬೆಲ್ ಪಾರಿತೋಷಕ

ಈ ವರ್ಷ ಶ್ರೀ ಸಿ. ವಿ ರಾಮನ್‌ರವರಿಗೆ ಶಾಸ್ತ್ರೀಯ ಶೋಧದ ಸಂಬಂಧವಾಗಿ ನೋಬೆಲ್ ಪಾರಿತೋಷಿಕ ದೊರೆತಿದ್ದರಿಂದ ಎಲ್ಲೆಲ್ಲಿಯೂ ಅವರ ಜಯ ಜಯಕಾರವು ಕೇಳಬರುತ್ತದೆ. ೧೯೧೩ ರಲ್ಲಿ ಈ ಪಾರಿತೋಷಿಕವು ಶ್ರೀ ರವೀಂದ್ರನಾಥ ಟಾಗೋರರನರಿಗೆ ದೊರಕಿತಾಗ ಅವರಾದೂ ಹೀಗೆಯೇ ಗೌರವಿಸಲ್ಪಟ್ಟಿದ್ದರು. ಸ್ವೀಡನದಲ್ಲಿ ಆಲಫ್ರೆಡ ಬರ್ನಾಹಾರ್ಡ ನೋಬೆಲನೆಂಬ ಓರ್ವ ಶಾಸ್ತ್ರಜ್ಞನಿದ್ದರು. ಇವರು ೧೮೩೩ ರಲ್ಲಿ ಜನಿಸಿ ಹೊಂದಿ ೧೮೯೬ ರಲ್ಲಿ ಮರಣ ಹೊಂದಿದರು. ಈ ಅವಧಿಯಲ್ಲಿ ಅವರು ಅಪಾರವಾದ ಸಂಪತ್ತಿಯನ್ನು ಸಂಪಾದಿಸಿದರು, ಮರಣ ಸಮಯಕ್ಕೆ ಅವರಲ್ಲಿ ೧೬|| ಲಕ್ಷ ರೂಪಾಯಿಗಿಂತ ಹೆಚ್ಚು ಸಂಪತ್ತಿಯಿತ್ತು. ಇದರಲ್ಲಿಯ ಕೆಲವೊಂದು ಹಣವನ್ನು ಅವರು ಬೋರ್ಡ ಆಫ್ ಟ್ರೆಸ್ಟರ ಕೈಯಲ್ಲಿ ಕೊಟ್ಟು, ಒಂದಂಶ ಸಾಮಿತ ಪೌಂಡುಗಳ ಬಹುಮಾನ ಕೊಡಬೇಕೆಂಬುದಾಗಿ ನಿರ್ಧರಿಸಿದರು ಪದಾರ್ಥವಿಜ್ಞಾನ ಶಾಸ್ತ್ರ, ವೈದ್ಯಕ ಶಾಸ್ತ್ರ, ಕೈಯುವಾದಿ ತೀಪಣ ಮತ್ತು ಜಗತ್ಪಿಯಲ್ಲಿಯ ಶಾಂತಿ ಇವುಗಳ ಸಂಬಂಧವಾಗಿ ಹೆಚ್ಚಿನ ಕೆಲಸ ಮಾಡುವವರಲ್ಲಿ ಈ ವಿಧಿಯು ಹಂಚಲ್ಪಡುತ್ತದೆ. ೧೯೦೧ ರಿಂದ ಇದು ಪ್ರಾರಂಭಿಸಲ್ಪಟ್ಟಿದ್ದು ಭಿನ್ನ ಭಿನ್ನ ದೇಶಗಳಲ್ಲಿಯ ವಿದ್ವಾಂಸರು ಈಗಾಗಲೇ ಇದರ ಫಲವನ್ನು ಹೊಂದಿದ್ದಾರೆ. ಪದಾರ್ಥವಿಜ್ಞಾನ ಶಾಸ್ತ್ರದ ಸಂಬಂಧವಾಗಿ ಳಗಿನ ವಿದ್ವಾಂಸರಿಗೆ ಈ ಪಾರಿತೋಷಿಕವು ಈ ಈ ವರ್ಷಗಳಲ್ಲಿ ಕೊಡಲ್ಪಟ್ಟಿದೆ.

ಪಾರ್ಸ ರೇಕೆ (೧೯೦೦) ಥಾಮಸನ್ (೧೯೦೬) ವ್ಯಾಗ್(೧೯೧೫) ಬ್ರಾಗ್ಸ್(೧೯೧೫) ಬಾಗ್(೧೯೧೫)

ಬರ್ನಾ (೧೯೧೭) ವಿಯಲಸನ್ (೧೯೩೭) ಮಿಲ್ಲನ್ (೧೯೦೨) ಮಿಲಿಕನ್ (೧೯೨೩) ಕಾಮ್ಟನ್ (೧೯೩೭) ಸಿ ವಿ. ರಾಮನ್ (೧೯೫೧)

ಶಾಂತಿಯ ವಿಷಯಕ್ಕೆ ಸಂಬಂಧಿಸಿದ ಬಹುಮಾನವು ೪ ವರ್ಷ ಅಮೇರಿಕೆಯ ಕೆಲವಾಗಿಗೆ ಸಿಕ್ಕಿದೆ. ಹಿಂದಿನ ವರ್ಷಗಳಲ್ಲಿ ಈ ಬಹುಮಾನವನ್ನು ಪಡೆದವರಲ್ಲಿ ಕ್ಲೈಮರ (೧೯೦೩) ಚೆಂಬರಲೇನ (೧೯೩೫) ರುಝುವೆಲ್ಟ (೧೯೦೬) ರೂಟ (೧೯೧೨) ವಿಲ್ಸನ್ (೧೯೧೯) ಡೆನ್ಸ್ (೧೯೩೫)

ವಾಙ್ಮಯಕ್ಕೆ ಸಂಬಂಧಿಸಿದ ಬಹುಮಾನವನ್ನು ದೊರಕಿಸಿದವರು

ರವೀಂದ್ರನಾಥ ಟಾಗೋರ್ (೧೯೧೩) ಕಿಪಲಿಂಗ (೧೯೦೭) ಈಟ್ಸ್ (೧೯೨೩) ಬರ್ನಾರ್ಡ (೧೯೨೫)

ಕೇಸರಿ.

ಇಹವ್ಯತ್ತ

ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರ ಹಸ್ತದಿಂದ ಇತ್ತೀಚೆ ತಾ|೨೩ನೆ ದಿನಾಂಕ ಸ್ವದೇಶಿ ವಸ್ತು ಪ್ರಚಾರಕ ಸಂಘವು ಸ್ಥಾಪಿಸಲ್ಪಟ್ಟಿತು. ಸಂಘದ ಸಭೆಯಲ್ಲಿ ಅವರು ಕೈಕೊಂಡ ಕಾರ್ಯಕಲಾಪ ಮೊದಲಾದವುಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವದಲ್ಲಿ ಬರುವದು.

ತಾ|೨೩ನೆ ದಿವಸ ಸಂಜೆಗತ್ತಿಗೆ ಲಾಲಾಜಿ ಚೌಕಿನಲ್ಲಿ ಮುಂಬಯಿಯ ಶ್ರೀಮತಿ ಸೀತಾಬಾಯಿ ಪಡಬಿದ್ರಿಯವರು "ಮುಂಬಯಿಯಲ್ಲಿಯ ಚರ್ಖಾ" ಯ ವಿಷಯವಾಗಿ ಭಾಷಣ ಮಾಡಿದರು.

ಮೆ. ಕಮೀಶನರರಿಗೆ ಲೋಕಲ್ ಬೋರ್ಡ ಕಚೇರಿಯಲ್ಲಿ ಸಂತೋಷಕೂಟ ನಡೆದ ದಿವಸ ಸಬ್ ಇನಸ್ಪೇಕ್ಟರು ಶ್ರೀ ಶ್ರೀನಿವಾಸರಾವ ಪಟ್ಟಿ ಕೀಲರನ್ನು ಕರೆಸಿ ಹಿಡಿದು ನೂಕಿ ಅವಮಾನ ಮಾಡಿದ್ದರ ಸಂಬಂಧವಾಗಿ, ಇಲ್ಲಿಯ ವಕೀಲ ಸಂಘದವರು ನಿಷೇಧಪರ ತಂಡವು ಮಾಡಿಕೊಂಡಿದ್ದಲ್ಲವೆ, ಆ ಸಂಬಂಧವಾಗಿ ಡಿ, ಸ್ಯಾಜಿಸ್ಟ್ರೇಟರು ಪೋಲೀಸ ಸಬರಿಂಟಿಂಡೆಂಟರು ಹಾಗು ಡಿಸ್ಟ್ರಿಕ್ಟ ಜಡ್ಜರು ಇವರ ಕಡೆಗೆ ದೂರು ಬರೆದುಕೊಂಡಿದ್ದಾರೆ.

ಇಲ್ಲಿಯ ಶಿವಪ್ಪ ಬಸಪ್ಪ ಕಳ್ಳಿಗುದ್ದ ಎಂಬ ಹೆಸರಿನ ೧೪ ವರ್ಷದ ಹುಡುಗನಿಗೊಬ್ಬನು ಮಹಾತ್ಮಾ ಗಾಂಧಿಯವರು ಬಂಧ ಮುಕ್ತರಾಗಿ ಬರುವವರೆಗೆ ಅನ್ನವನ್ನು ತೆಗೆದುಕೊಳ್ಳುವದನ್ನು ಬಿಟ್ಟಿದ್ದಾನೆ ಅವನು ಹೀಗೆ ಅನ್ನವನ್ನು ಬಿಟ್ಟು ೫ ದಿವಸಗಳಾದವು.

ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|೨೦ನೆಯ ದಿವಸ ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿದ ಇಲ್ಲಿಯ ಶ್ರೀ ಜೋರಾಪುರ ಗುರುರಾಯರು ತಾ|೨೨ನೆಯ ದಿವಸ ಸಂಜೆಗೆ ವಿಜಾಪುರದಿಂದ ಇಲ್ಲಿಗೆ ಒಂದನೆ ನಾಗರಿಕರು ಸ್ಟೇಶನದಲ್ಲಿ ಅವರಿಗೆ ಯೋಗ್ಯ ರೀತಿಯಿಂದ ಆದರಸತ್ಕಾರಗಳನ್ನು ಮಾಡಿ ಮೆರವಣಿಗೆಯಿಂದ ಅವರನ್ನು ಊರಲ್ಲಿ ಕರೆದುಕೊಂಡು ಬಂದರು ನಂತರ ಲಾಲಾಜಿ ಚೌಕಿನಲ್ಲಿ ಸಭೆ ಸೇರಿ ಅವರಿಗೆ ಬಹುಮಾನ ಪೂರ್ವಕ ಆಯಿತು. ಶ್ರೀ ಗುರುರಾಯರು ಜೇಲಿನಲ್ಲಿನ ಅನುಭವವನ್ನು ಸ್ವಲ್ಪವಾಗಿ ಹೇಳಿ ರಾಷ್ಟ್ರ ಕಾರ್ಯಕ್ಕೆ ನೆರವಾಗಲು ಎಲ್ಲರಿಗೂ ವಿನ್ನವಿಸಿಕೊಂಡರು. ಸಂಜೆಯಲ್ಲಿ ಶ್ರೀ ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರಿಗೆ ಸಭೆಯು ಮಂಕಾಯ ಕೊಂಡಿತು.

ತಾ|೨೦ನೆ ದಿವಸ ಇಲ್ಲಿ ಸೆರೆಯಿಡಿಯಲ್ಪಟ್ಟ ಶ್ರೀ ನಾರಾಯಣ ಜೋಶಿ. ವಿ. ಜೆ. ಕುಲಕರ್ಣಿ, ನೀಲಕಂಠಪ್ಪ ಬೆಟ್ಟದಪುರ, ಶಿವಪ್ಪ ಹಿರೇಮಠ, ವೆಂಕಟಸುಬ್ರಾವ ಮತ್ತು ಗುಂಡಪ್ಪ ಜೇರಿಗೆ ೫ ಜನ ಸ್ವಯಂಸೇವಕರ ಖುಷ್ಕಿನ ವಿಚಾರಣೆಯು ತಾ|೨೨ನೆಯ ದಿವಸ ಸಂಜೆಯಲ್ಲಿ ಇಲ್ಲಿಯ ಮೊದಲನೆ ವರ್ಗದ ಮ್ಯಾಜಿಸ್ಟ್ರೇಟರ ಮುಂದೆ ಪ್ರಾರಂಭವಾಯಿತು. ಸಬ್ ಇನಸ್ಪೆಕ್ಟರು ಅವರ ವೇಲೆ ಕ್ರಿ. ಪ್ರ. ಅಪಿ. ೧೪೪ನೆಯ ಕಲಮಿನ ಜಪ್ತಿಯ ಆರೋಪ ಹೊರಿಸಿ, ಅವರು ಶಾಂತಿಭಂಗಕ್ಕೆ ಎರಡ್ಡಾವಾದ ಸಂಸ್ಥೆಗಳ ಕಾರ್ಯಕ್ರಮಗಳನ್ನು ಜರುಗಿಸಿ ಮತ್ತು ರಾಜದ್ರೋಹಾತ್ಮಕವಾದ ಕಾಸ್ಪೋಟೆಗಳನ್ನು ಹಾಡಿ ಸರಕಾರದ ವಿಷಯಕ್ಕೆ ಅಸ್ಪೋಟಿಯನ್ನು ಹುಟ್ಟಿಸಿದ್ದರಿಂದ ಅವರಿಗೆ ೩ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದನು.

ತಾ|೨೬ನೆ ದಿವಸ ಸಂತೆಯಲ್ಲಿ ಸ್ವದೇಶಿ ವಸ್ತು ಪ್ರಸಾರಕ ಸಂಘದ ಪರವಾಗಿ ಲಾಲಾಜಿ ಚೌಕಿನಲ್ಲಿ ಸಭೆಸೇರಿ, ವ್ಹಾಯಿಸರಾಯರು ಹೊಸದಾಗಿ ಹೊರಡಿಸಿದ ಆರ್ಡಿನೆನ್ಸುಗಳಿಗೆ ಸಾರ್ವಜನಿಕರಾಗಿ ನಿಷೇಧವನ್ನು ವ್ಯಕ್ತಪಡಿಸಲಾಯಿತು. ಶ್ರೀಮತಿ ಸೀತಾಬಾಯಿ ಬಾವಡೆಯವರು ಈ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು.

ಮೂಲನೀಯರಿಗೆ ಬಿಡುಗಡೆ.

ಯಾವ ನಿರ್ಬಂಧಕ್ಕೂ ಒಳಪಡಿಸದೇ ಹಿಂದುಸ್ಥಾನ ಸರಕಾರದವರು ಪಂಡಿತ ಮದನ ಮೋಹನ ಮೂಲವೀಯರವರನ್ನು ಬಿಡುಗಡೆ ಮಾಡಿರುವರಾಗಿ ತಿಳಿಯುತ್ತದೆ.

ಮುಂಬಯಿಯಲ್ಲಿ ೨೪ ಜನರನ್ನು ಸೆರೆಹಿಡಿದಿಟ್ಟರು

ಮುಂಬಯಿಯ ಪೋಲೀಸ ಅಧಿಕಾರಿಗಳು ತಾ|೨೫ನೆಯ ದಿವಸ ಅಲ್ಲಿಯ ಕಾಂಗ್ರೆಸ್ ಅಧಿಕಾರಿಗಳಾದ ಶ್ರೀ ವಲಭದಾಸ ಕೆರಸನದಾಸ, ಪುರುಷೋತ್ತಮದಾಸ ತ್ರಿಕಮದಾಸ, ದಿಕ್ಷಿತ, ಯು ಸೂಫ ಮೇಹಂಅಲ್ಲಿ, ಕೆ ಕೆ ಮೆನನ್ ಇವರ ಮನೆಗಳಿಗೂ ಹಾಗು ಕಛೇರಿಗೂ ಮುತ್ತಿಗೆಯನ್ನು ಹಾಕಿ ಕೆಲವು ಕಾಗದ ಪತ್ರಗಳನ್ನು ಜಪ್ತಮಾಡಿಕೊಂಡು, ಶ್ರೀ ಮೂಲರಾಜ ಕೆರಸನದಾಸ, ಯು ಸೂಫ ಮೇಹ ಅಲ್ಲಿ, ಮೆನನ್, ನಾರಾಯಣಸ್ವಾಮಿ, ಪೆಸ್ತಿ ಜೊಹಾರಿ, ಮುನಸಿ, ವಿಠಲದಾಸ ಮೊದಲಾದ ೨೫ ಜನ ಕಾಂಗ್ರೆಸ್ ಕಾರ್ಯಕರ್ತರನ್ನು ಕೈ ಲಾ. ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಸೆರೆಹಿಡಿದು ಕೊಂಡು ಹೋದರು.

ಬಹಿಷ್ಕಾರದ ಪರಿಣಾಮ!

ಬ್ರಿಟಿಶ ಹಿಂದುಸ್ಥಾನದ ನವ್ವೆಂಬರ ತಿಂಗಳ ವ್ಯಾಪಾರವನ್ನು ಹಿಂದಿನ ತಿಂಗಳಗಳಲ್ಲಿಯ ವ್ಯಾಪಾರಕ್ಕೆ ಹೋಲಿಸಿ ನೋಡಿದಲ್ಲಿ, ಆಮದು ಮತ್ತು ನಿರ್ಗತ ವ್ಯಾಪಾರದಲ್ಲಿ ಕ್ರಮವಾಗಿ ೮೭ ಹಾಗು ೮೮ ಲಕ್ಷ ರುಪಾಯಿಗಳ ಹಾನಿಯಾಗಿದೆಯೆಂಬುದು ತಿಳಿದುಬರುವದು.

ಹೋದ ವರ್ಷದ ನವ್ವೆಂಬರ ತಿಂಗಳದಲ್ಲಿ ಪರದೇಶದಿಂದ ಇಲ್ಲಿಗೆ ಬಂದ ಸರಕುಗಳಿಗಿಂತಲು ೧೮೫೯ ಲಕ್ಷ ರುಪಾಯಿಗಳ ಸರಕುಗಳು ಈ ವರ್ಷ ನವ್ವೆಂಬರದಲ್ಲಿ ಇಲಿಗೆ ಇಡಿಮೆ ಬಂದಿವೆ ಮತ್ತು ಇಲ್ಲಿಂದ ಹೋಗುವ ಸರಕು ೧೦೦೦ ಲಕ್ಷ ರುಪಾಯಿಗಳಿಂದ ಇಡಿಮೆಯಾಗಿದೆ.

೧೯೩೦ನೆ ಇಸ್ವಿಯ ಏಪ್ರಿಲ್ ದಿಂದ ನವ್ವೆಂಬರದ ವರೆಗಿನ ವ್ಯಾಪಾರವನ್ನು ಹೋದವರ್ಷದ ಆ ಅವಧಿಯ ವ್ಯಾಪಾರದೊಡನೆ ಹೋಲಿಸಿ ನೋಡಿದಲ್ಲಿ, ಆಮದು ಮತ್ತು ನಿರ್ಗತ ವ್ಯಾಪಾರವು ಕ್ರಮವಾಗಿ ಹಾಗು ೨೦೦೦ ಲಕ್ಷ ರುಪಾಯಿಗಳಿಂದ ಇಡಿಮೆ ಯಾಗಿದ್ದು ತಿಳಿದು ಬರುವದು.

ಕರ್ನಾಟಕದಲ್ಲಿಯ
ರೇಶಮೀ ಮತ್ತು ನೂಲಿನ ವ್ಯಾಪಾರಿಗಳಿಗೆ
ವಿಜ್ಞಾಪನೆ.

ಸದ್ಯದಲ್ಲಿ ನಮ್ಮೊಳಗೆ ನಡೆದ ಸ್ವಾತಂತ್ರ್ಯ ಯುದ್ಧದಲ್ಲಿ ಪರದೇಶಿ ವಸ್ತುಗಳ ಬಹಿಷ್ಕಾರವು ಒಂದು ಮುಖ್ಯ ಅಂಗವಾಗಿತ್ತೆ. ಈ ಯುದ್ಧದಲ್ಲಿ ನಮಗೆ ದೊರೆಯುವ ಸೋಲುಗೆಲುವುಗಳೂ ಕೂಡ ಬೇಕೆಂಬಂಗಿ ಈ ಬಹಿಷ್ಕಾರದ್ದೇ ಅವಲಂಬನೆ. ಮುಂಬಯಿ ಕಲಕತ್ತಾ, ಲಾಹೋರ, ಅಮೃತಸರ, ಕರಾಚಿ, ದಿಲ್ಲಿ ಗುಲ್ಬರ್ಗಾ ವ್ಯಾಪಾರಿಗಳು ಅಸಾಮಾನ್ಯ ಸ್ವಾರ್ಥತ್ಯಾಗ ಮಾಡಿ ಪರದೇಶದ ವಸ್ತು ಒಡಿವಿಗಳನ್ನು ಬಹಿಷ್ಕರಿಸಿದರು. ಈ ಸಮಯದಲ್ಲಿ ಕರ್ನಾಟಕದ ವ್ಯಾಪಾರಿಗಳೂ ತಮ್ಮ ಕರ್ತವ್ಯವನ್ನು ತಾವು ಮಾಡಬೇಕು.

ಕರ್ನಾಟಕದಲ್ಲಿ ಶೀರಿ, ಖಣಗಳು ವಿಶೇಷವಾಗಿ ಹುಟ್ಟುತ್ತವೆ. ಇಲ್ಲಿ ಹುಟ್ಟುವ ಈ ಸರಕು ನಮ್ಮ ಪ್ರಾಂತಕ್ಕೆ ಸಾಕಷ್ಟಾಗಿ ವ್ಯಾಪಾರಾರ್ಥ, ಮಧ್ಯಪ್ರಾಂತ ವರ್ಹಾಡಗಳ ಕಡೆಗೂ ದೊಡ್ಡ ಪ್ರಮಾಣದಿಂದ ಹೋಗುತ್ತವೆ. ಅದೇ ಅತ್ತಕಡೆಗೆ ಬಹುಷ್ಕಾರ ಬಳವಳಿಯು ಜೋರಿನಿಂದ ನಡೆದಿದ್ದರಿಂದ ಅಲ್ಲಿಯ ಜನರು ಸ್ವದೇಶೀ ರೇಶ್ಮೆ, ಸ್ವದೇಶೀ ನೂಲನ್ನು ಹಾಕಿದ್ದ ಅರಿವಿಗಳನ್ನೇ ಕೊಳ್ಳುತ್ತಾರೆ ಸ್ವದೇಶೀ ಇದ್ದ ಬಗ್ಗೆ ಮನವರಿಕೆ ಮಾಡಿಕೊಳ್ಳಲು ಕಾಂಗ್ರೆಸ್ ಕಮೀಟಿಯ ಮಾನ್ಯಪತ್ರ (ಗ್ಯಾರಂಟೀ) ವನ್ನು ಕೇಳುತ್ತಾರೆ. ಈಗ ಇಲಕಲ್, ಗುಳೇದಗುಡ್ಡ ಮೊದಲಾದ ಊರಿನ ವ್ಯಾಪಾರವು ಕಡಿಮೆಯಾದುದಕ್ಕೆ ಅವರು ಪರದೇಶೀ ನೂಲು ಉಪಯೋಗಿಸಿದ್ದೇ ಕಾರಣವದೆ.

ಇತ್ತೀತ್ತಲಾಗಿ ಶೀರಿ, ಖಣಗಳ ಅನೇಕ ವ್ಯಾಪಾರಿಗಳು ತಮ್ಮ ತಮ್ಮ ಸಂಘಗಳನ್ನೇರ್ಪಡಿಸಿಕೊಂಡು ಸ್ವದೇಶೀ ನೂಲು ರೇಶಿಮೆಗಳನ್ನೇ ಉಪಯೋಗಿಸುತ್ತೇವೆಂದು ನಿಶ್ಚಯ ಮಾಡುತ್ತಲಿರುವರು. ಆದರೆ ಈವರೆಗೆ ನೂಲು ರೇಶಿಮೀ ವ್ಯಾಪಾರಿಗಳಲ್ಲಿ ಮಾರವಾಡಿಗಳೇ ವಿಶೇಷವಾಗಿರುವದೂ ಇದಕ್ಕೊಂದು ಕಾರಣವಿದೆ. ಇವರು ತಾವಾಗಿಯೇ ಯಾವ ಸಹಕಾರಕ್ಕೂ ಬರುವದಿಲ್ಲ. ಕರ್ನಾಟಕ ವ್ಯಾಪಾರಿಗಳಿಗೆ ತಮ್ಮ ಪ್ರಾಂತದ ವ್ಯಾಪಾರವನ್ನು ತಮ್ಮ ಕೈಯಲ್ಲಿ ತಕ್ಕೊಳ್ಳಲು ಇದೊಂದು ಉತ್ತಮ ಯೋಗವಿದೆ. ನೀವು ಸ್ವದೇಶೀ ನೂಲನ್ನು ರೇಶಿಮೆಯನ್ನೂ ತರಿಸತೊಡ್ಡರೆ ನಿಮ್ಮ ಕಡಿಗೇ ಗಿರಾಕಿಗಳು ಹೆಚ್ಚಾಗಿ ಬರುವರು. ಇದರಿಂದ ನಿಮಗೆ ಲಾಭವಾಗುವದಲ್ಲದೆ ದೇಶೀ ಗಿರಣಿಗಳಿಗೂ ಸಹಾಯವಾಗುವದು.

ಈ ಪರದೇಶೀ ನೂಲಿಗಿಂತಲೂ ಉತ್ತಮ ವೆಂದು ನೂಲು ಬೇರೆಡೆ ಸಂಚರಿಸುವದು, ಕಡಿಮೆ ಬೆಲೆಗೆ ದೊರೆಯುವದೆ ಹುಬ್ಬಳ್ಳಿ, ಗದಗ ಕಾಲ್ಹಾಪೂರ ಸೊಲ್ಹಾಪೂರ (ಈ ಊರುಗಳಲ್ಲಿ ಜಪಾನ, ಕರಿಯಲ್ ಬಾರಸಿ ಪಿಟಾರ ವಗೈರಜಿ ಮಿಲ್ಲು, ವಗೈರಜಿ ಭಾರತಸಿದ ಮಿಲ್ಲು ಸೇಟಿಯದ ಮಿಲ್ಲು ಹೊರಲಾದ ಗಿರಣಿಗಳಲ್ಲಿ ತಯಾರಿಸುವ ನೂಲು ಅಲ್ಲಿಯ ನೇಕಾರರು ಉಪಯೋಗಿಸುತ್ತಾರೆ. ಹಾಗಾಗಿ ಈ ನೂಲು ಪರದೇಶೀ ನೂಲಿನಷ್ಟೇ ಚನ್ನಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ.

ರೇಶಿಮೆಯು ಮೈಸೂರು, ಬ್ಯಾಂಗಳೂರಲ್ಲಿ ಬೇಕಾದಷ್ಟು ವಿಪುಲವಾಗಿ ದೊರೆಯುತ್ತದೆ. ಬೆಲೆಯಲ್ಲಿಯೂ ಇದಕ್ಕೂ ಪಂದೇರಪದ್ದಕ್ಕೂ ವಿಶೇಷ ಅಂತರವಿಲ್ಲ. ಒಮ್ಮೊಮ್ಮೆ ಈ ರೇಶಿಮೆಯ ಬೆಲೆಯು ಕಡಿಮೆಯಾಗುತ್ತದೆ. ಆದುದರಿಂದ ಇನ್ನು ಮುಂದೆ ಚೀನ ಜಪಾನ ಎಂದ ರೇಶಿಮೆಯನ್ನು ತರಿಸುವದನ್ನು ನಿಲ್ಲಿಸಿ ಸ್ವದೇಶದ್ದನ್ನೇ ತರಿಸಬೇಕು. ಅಂದರೆ ಇದನ್ನೇ ನೇಕಾರರು ಕೊಳ್ಳುತ್ತಾರೆ.

ಮರ್ಸರಾಯಿಜ್ಡ ಅಥವಾ ಚಮಕಾ (ಹೊಳಪಿನ ನೂಲೂ ಈಗ ನಮ್ಮಲ್ಲಿಯೇ ಹುಟ್ಟುತ್ತಲಿದೆ, ಸೊಲಾಪುರ ಗಿರಣಿ, ಕ್ಯಾಲಿಕೊ ಮಿಲ್ಲು ಅಹಮದಾಬಾದ ಕಲ್ಯಾಣ ಮತ್ತು ಕಂಪನಿ ಮುಂಬಯಿ, ಈ ಸ್ಥಳಗಳಲ್ಲಿ ಮರ್ಸರಾಯಿಜ್ಡ ಕಾಟನ್ನ ದೊರೆಯುತ್ತದೆ. ನಿಮಗೆ ಬೇಕಾದ ನಂಬರದನ್ನು ತರಿಸಿಕೊಳ್ಳಬಹುದು. ಈ ಸರಕು ಸದ್ಯಕ್ಕೆ ಸಾಕಷ್ಟು ದೊರೆಯುವದಿಲ್ಲ. ಆದ್ದರಿಂದ ಸಾಕಷ್ಟು ನಿಗುವವರೆಗೆ ಅದರ ಉಪಯೋಗವನ್ನು ಕಡಿಮೆ ಮಾಡಬೇಕು.

ನಾವು ನೇಕಾರರಿಗೆ ದೇಶೀ ನೂಲು ರೇಶಿಮೆಗಳನ್ನೇ ಉಪಯೋಗಿಸಲು ಹೇಳುತ್ತಲಿರುವೆವು. ಆದಕ್ಕೆ ಅವರು ಒಪ್ಪಿ ಪ್ರತಿಜ್ಞೆಯನ್ನು ಮಾಡುತ್ತಲಿರುವರು. ಅದರಂತೆ ನೀವಾದರೂ ಸ್ವದೇಶೀ ನೂಲು ರೇಶಿಮಗಳನ್ನೇ ತರಿಸುವೆವೆಂದು ಪ್ರತಿಜ್ಞೆ ಮಾಡಬೇಕಾಗಿ ವಿನ್ನಹ.

ಪರದೇಶದಿಂದ ಬರುವ ಮಾಲು.

೧ ಉಷ್ಟು ೧೨೬ ಲಕ್ಷ ರೂಪಾಯಿ
೨ ಸೋಡಾ ಮತ್ತು ಅದರ ಬಿಲ್ಕಾತ ೧೧೫
೩ ಒಗೆಯುಲ್ಕೆ ಬೇರಾಗುವ ಸಲಕಾರ ೧೪
೪ ಮೈಗೆ ಹಚ್ಚುವ ಸಬ್ಬಕಾರ ೪೭ ,,
೫೭೬ ಲಕ್ಷ.

ಇಷ್ಟೆಲ್ಲ ರೂಪಾಯಿಗಳು ನಮಗೆ ಸಮಜನ್ಯಾಗಿ ಉಳಿಸಿಕೊಳ್ಳಲಕ್ಕೆ ಒರುವವು. ಬೇಕಂದಷ್ಟು ಉಪ್ಪು ಮಾಡುವ ಸಾಧನಗಳವೆ. ಸವುಬ್ರದ ನೀರಿನಿಂದಲೆ ಸೋಡಾ ತಯಾರಾಗುವದು. ಸೋಡಾ ಆಗ್ಗ ನಿಕ್ಕರ್ಪೆ ಸಲಕಾರ ಮಾಡಲಿಕ್ಕೆ ಸುಲಭವಾಗುವದು ಇಷ್ಟೆಲ್ಲ ಮಾಡವದು ಸರಕಾರದ ಕೈಯಲ್ಲಿದೆ ಆದರೆ ಇಷ್ಟು ಮಾಡಲಿಕ್ಕೆ ಸರಕಾರವನ್ನು ಪ್ರಜಾ-ಗಿ ಕೊಟ್ಟರೆ ಪರಕೀಯರ ಅಂದರೆ ಸರಕಾರದ ಅಧ್ಯೇಷರ ಧಂದಗಳು ಹಾಳಾಗುವವು. ಉಪ್ಪಿನ ಮೇಲಿನ ಜಕಾತಿ ತೆಗೆದು ಬಿಟ್ಟರೆ ಉಪ್ಪಿನ ಕಾರಖಾನೆಗಳು ಜೆಲ್ಲಾಗುವದಲ್ಲದೆ ಬೇಕಾದಷ್ಟು ಸೋಡಾ ಆಗ್ಗವಾಗಿ ತಯಾರಾಗುತ್ತದೆ. ಆದರೆ ಅದಕ್ಕೆ ಸಾಕಷ್ಟು ಉತ್ಪೀಜನವಿಲ್ಲ ಹೀಗೆ ಪರಿಸ್ಥಿತಿ ಇರುವದರಿಂದ ಮಹಾತ್ಮಾಜಿಯವರು ಉಪ್ಪಿನ ಕಾಯದೆ ಮುರಿಯುವದಕ್ಕಾಗಿ ಹೊರಟರು. ಸರಕಾರವು ಸ್ವಕೀಯ ಇದ್ದರೆ ಇಂಥ ಸೊಟ್ಟ ಕೆಲಸಕ್ಕಾಗಿ ಇಷ್ಟು ಸ್ವಾರ್ಥತ್ಯಾಗ ಮಾಡುವ ಅವಶ್ಯಕತೆ ಎನೂ ಬೀಳುತ್ತಿದ್ದಿಲ್ಲ.

ಸ್ವದೇಶಿ ನೂಲು ಎಲ್ಲಿ ಸಿಕ್ಕುತ್ತದೆ

೧ ಕೆರಿಂಭಾಯ ಮಿಲ್ಲ ಮುಂಬಯಿ.
೨ ಖಟಾವ ಮಕಂಜಿ ಮಿಲ್ಸ, ಮುಂಬಯಿ
೩ ವಿ ಸೊಲಾಪೂರ ಸ್ಪಿನಿಂಗ ಎಂಡ ವೀವ್ವಿಂಗ ಮಿಲ್ಸ, ಸೊಲಾಪೂರ.
೪ ಬ್ರ.ತಿಮಂಡ ಟೆಕ್ಸ್‌ಟೈಲ್ ಮಿಲ್ಸ ಮುಂಬಯಿ.
೫ ಅಹಮದಾಬಾದದಲ್ಲಿರುವ ಎಲ್ಲ ಸ್ವದೇಶೀ ಗಿರಣಿಗಳಲ್ಲಿಯೂ ದೊರೆಯುವದು
೬ ಶ್ರೀ ಶಾಹು ಛತ್ರಪತಿ ಮಿಲ್ಸ ಕೊಲ್ಹಾಪುರ
೭ ಭಾರತ ಸ್ಪಿನಿಂಗ ಎಂಡ ವೀವ್ವಿಂಗ ಮಿಲ್ಸ ಹುಬ್ಬಳ್ಳಿ.
೮ ಬಿ ಮಹರಾಜ ಮಿಲ್ಸ ಬೆಂಗಳೂರ.
೯ ಬಿ.ಮಿನರ್ವ ಮಿಲ್ಸ ಬೆಂಗಳೂರ.
೧೦ ಬಿ ಚಾಮರಾಜೆಂದ್ರ ಮಿಲ್ಸ ಮೈಸೂರ
೧೧ ಪರಸೀಗಿರ್ಜ ಮ್ಯಾನ್ಯು ಫ್ಯಾಕ್ಚರಿಂಗ ಮಿಲ್ಸ ಸೋಲಾಪೂರ

ತಮ್ಮ
ಆ. ಜಿ. ಮುಳಕೋಳ

೬ ಬಾಗಲಕೋಟೆ—೪೪೩೩೩೩ ೪೪೪೪ ೪೪೪೪

ೋವಧಿ— ಮುಂಬಯಿ (ಸಂಧ ಸಹಿತ)

೧೯೧೧; ಬಿಹಾರ ೧೧೯೪೪೬; ಸಂಯುಕ್ತಪ್ರಾಂತ
೪೪೬೧೧; ಮಧ್ಯಪ್ರಾಂತ ವರ್ಹಾಡ ೧೬೫೫೬೬;
ಪಂಜಾಬ ೨೭೪೦೦೦; ಬಂಗಾಲ ೨೪೪೪೦೦;
ಮದ್ರಾಸ ೨೨೬೦೧೦; ಒಟ್ಟು ೨೪೭೪೪೪

ಸೈನ್ಯ ಮತ್ತು ಪೊಲೀಸ ಖರ್ಚು— ಸೈನ್ಯ
೪೪೬೦೦೦೦ ಪೊಲೀಸ ೫೪೪೦೦೦೦, ಈ ಎರಡೂ
ಖಾತೆಗಳಿಗಾಗಿ ಪ್ರತಿವರ್ಷವೂ ಸುಮಾರು ೭೦ ಕೋಟಿ
ರುಪಾಯಿಗಳನ್ನು ವೆಚ್ಚ ಮಾಡುವದರಲ್ಲಿ ಬರುತ್ತದೆ

ಜನಸಾಮಾನ್ಯರ್ಯ— ಪ್ರಾಂತಿಕ ಸರಕಾರದ ಉತ್ಪನ್ನ
೮೮೪೪೪೪೪ ಲೆಕ್ಕದ ಖರ್ಚು ೪೪೪೪೪೪೪ ಲಕ್ಷ ರೂ;
ಮಧ್ಯವರ್ತಿ ಸರಕಾರದ ಜಮಾ ೧೪೪೪೦೦ ಲಕ್ಷ ರೂ.
ಮತ್ತು ಖರ್ಚು ೧೪೪೦೦೬ ಲಕ್ಷ ರೂ ಸೈನ್ಯ ಖಾತೆಯು
ಎಲ್ಲ ಖಾತೆಗಳಿಗಿಂತಲೂ ಹೆಚ್ಚು ಹಣವನ್ನು ತಿನ್ನುತ್ತದೆ

ಬ್ರಿಟಿಶರ ಬಣ್ಣ ಹೊರಬಿತ್ತು

ಲಂಡನದಲ್ಲಿಯ "ಸೊಸಾಯಟಿ ಆಫ್
ಫ್ರೆಂಡ್ಸ್" ಸಭೆಯು ೧೪ ಜನ ಸಭಾಸದ್ಯ
ಮುಖ್ಯಮಂತ್ರಿ ಮಿ. ಮ್ಯಾಕಡೋನಾಲ್ಡ ಹಾಗೂ
ಫಾರಶಮಂತ್ರಿ ಮಿ. ಬೆನ್ನ ಇವರಿಗೆ ಒಂದು
ಕಾಗದ ಬರೆದು ಹಿಂದುಸ್ಥಾನದಲ್ಲಿ ಅಧಿಕಾರಿ
ಗಳು ನಡಿಸಿದ ದಬ್ಬಾಳಿಕೆಯ ಬಗ್ಗೆ ವಿಚಾರ
ಮಾಡಲು ಕೇಳಿಕೊಂಡಿದ್ದರು ಅವರು ಈಗ
ಅದಕ್ಕೆ ಉತ್ತರಕೊಟ್ಟಿದ್ದು, ಅದು ಸಾಕಷ್ಟು
ಸಮಾಧಾನಕರವಾದದ್ದಿರುವದಿಲ್ಲ. ಆದ್ದರಿಂದ
ಈ ಬಗ್ಗೆ ಮುಂದೆ ಯಾವ ಘೋರಣವನ್ನು ತಳೆ
ಯಬೇಕೆಂಬ ಬಗ್ಗೆ ವಿಚಾರ ಮಾಡಲು "ಸೊಸಾ
ಯಟಿ ಆಫ್ ಫ್ರೆಂಡ್ಸ್"ದವರು ಒಂದು ಸಭೆ
ಯನ್ನು ಕರೆದಿದ್ದಾರೆ.

ಬುಲಡಾಣಾ ಜಿಲ್ಲೆಯಲ್ಲಿ ಬೆಳೆಗಳ ಲೂಟಿ-

ಮಧ್ಯಪ್ರಾಂತಕ್ಕೆ ಸೇರಿದ ಬುಲಡಾಣಾ
ಜಿಲ್ಲೆಯ ಎಷ್ಟೋ ಹಳ್ಳಿಗಳಲ್ಲಿ ಸಾವುಕಾರ
ಜಮೀನುದಾರ್ಯ ಹಾಗು ಪೋಲೀಸವಾಲಿ ಜನರು
ಇವರ ಸಂಬಂಧಿಸಿದ ಹೊಲಗಳಲ್ಲಿಯ ಬೆಳೆ
ಗಳು ಹಳ್ಳಿಯ ಜನರಿಂದ ಲೂಟಿ ಮಾಡಲ್ಪಡ
ಹತ್ತಿದ್ದರಿಂದ, ಎಷ್ಟೋ ಜನ ಸಾವುಕಾರರು
ಭಯಭೀತರಾಗಿ ತಮ್ಮ ಪರವಾಗಿದೊಹನೆ ಹಳ್ಳಿ
ಗಳನ್ನೇ ಬಿಟ್ಟು ಹೋಗಹತ್ತಿದ್ದಾರೆ.

ಪಂಡಿತ ಮೋತಿಲಾಲಾ ಪೃಥ್ವಿಯು ತಮಗೆ ತಿಸದಿಸಕ್ಕೆ ಸುಧಾರಿಸ ಹತ್ತಿದೆ. ತಮಗೆ ಅವರಾಜ್ಯಾಮದಾಸ ವಾಚಸ್ಪತಿಯವರು ಅವರಿಗೆ ಉಪಚಾರ ಮಾಡುತ್ತಿರುವರು.

ಬಹಿಷ್ಕಾರವೇ ಬ್ರಿಟಿಶರ ಶೂಲ

"ಬಹಿಷ್ಕಾರ ಎಂಬ ಅಸ್ತ್ರ ಕೆಲವು
ನಗಣ್ಯವೆಂದು ತಿರಸ್ಕರಿಸಲು ಬರುವದಿಲ್ಲ. ಇದರ
ಪರಿಣಾಮವು ಬ್ರಿಟಿಶರಿಗೆ ಶೂಲವಾಗಿರುವದೆಂ
ಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಇದರಿಂದ
ಯಶಸ್ಸನ್ನು ಪಡೆಯಲಿಲ್ಲವೆಂದು ಅದನ್ನು ಬಹಿಷ್ಕಾರ ಶಸ್ತ್ರವನ್ನು ಇಕ್ಕಿಲವು ಇನ್ನಿಲ್ಲದ
ರುವ ಔಷಧವೆಂದೂ ಅದು ಸ್ವಾತಂತ್ರ್ಯ!
ಭೂಕಲತೀಯರಿಗೆ ಸ್ವಾತಂತ್ರ್ಯ ಕೊಡಬೇಕು"
ಮಿ. ನೊವೆಲ್ ಎ ಫಿಶರ

ಇಗೋ! ನೋಡಿರಿ

೬೯೦೦೦ ಜನರು

ಕಾರಾಗೃಹದಲ್ಲಿ!

ಸತ್ಯಾಗ್ರಹ ಚಳವಳಿಯು ಸುರುವಾದಂದಿನಿಂದ ಅಕ್ಟೋಬರ ತಿಂಗಳದ
ಕೊನೆಯವರೆಗೆ ೬೯ ಸಾವಿರಕ್ಕಿಂತ ಹೆಚ್ಚು
ಜನರು ಕಾರಾಗೃಹ ಕಂಡಿದ್ದು, ಆ ವಿ
ಭಾಗಗಳ ಬಲಿದಾನವು ಕೆಳಗೆ ತೋರಿಸಿ
ದಂತೆ ಇದೆ.

ಬಂಗಾಲ	೧೩೫೦
ಗುಜರಾಥ	೧೬೦೦
ಬಿಹಾರ	೧೧೬೪
ಸಂಯುಕ್ತ ಪ್ರಾಂತ	೯೧೫೦
ಪಂಜಾಬ	೯೦೦೦
ಮುಂಬಯಿ	೪೮೦೦
ಮದ್ರಾಸ	೫೦೦
ಒಟ್ಟು	೬೯೫೪೦

ತಿರ್ಕಿಯಲ್ಲಿಯ ಕಾಂಗ್ರೆಸ್ ಕಚೇರಿಯು ಜಪ್ತವಾಯಿತು

ಶ್ರೀ. ಅ. ಅನೆಂಡಮೆಂಟ ಕಾಯಿದೆಯ
೧೭ ನೆಯ ಕಲಮಿನಪ್ರಕಾರ ಕಾಯಿದೆಗೆ ವಿರುದ್ಧ
ವಾದ ಸಂಘಸಾರ್ಥವೆಯೆಂದು ಸಾರಿದ್ದನ್ನು ಅನು
ಸರಿಸಿ, ತಿರ್ಕಿಯ ಪೋಲಿಸ ಅಧಿಕಾರಿಗಳು ತಾ೧
೦ ನೆಯ ದಿವಸ ಅಲ್ಲಿಯ ಕಾಂಗ್ರೆಸ್ ಕಚೇರಿ
ಯನ್ನು ತಮ್ಮ ಸ್ವಾಧೀನ ಮಾಡಿಕೊಂಡು ಕೆಲವು
ಕಾಗದ ಪತ್ರಗಳನ್ನು ತೆಗೆದುಕೊಂಡು ಹೋ
ದರು ಅಷ್ಟರಲ್ಲಿ ೧೧ ಜನ ಸ್ವಯಂಸೇವಕರು
ರಾತ್ರಿಯಲ್ಲಿ ಪ್ರತಿಯೊಂದು ಲಾಯಿಗೆ ಕಾಂಗ್ರೆ
ಸ್ ಕಮಿಟಿಯೆಂಬ ಹಲಗೆಯನ್ನು ಹಚ್ಚಿದಬ್ಬಾ
ಳಿಗೆ ಅಷ್ಟರಲ್ಲಿ ಕೊಟ್ಟರು. ಅಧಿಕಾರಿಗಳು ಅವ
ರನ್ನು ಸೆರೆ ಹಿಡಿದ ಕೊಂಡು ಹೋಗಿ ಮರು
ದಿವಸ ಜನರನ್ನು ಬಿಡುಗಡೆ ಮಾಡಿದರು.

ಯಾದಿ ಭೂಮಿಯ ಮೂಲಕ ಅಂಗಿ ತೆಪ್ಪಗೆ
ಗರಿಯಾಗಿ ಜೇಲಿನಲ್ಲಿ ಕಾಲುಗಳೆಯುತ್ತಿರುವ
ಶ್ರೀ ಒಂದಕ್ಕೆ ಮಂಜನರಾಯರು ಮನೆಯಾದರಿ
ರುಡತಿಯಾಗಿ ಬಿಟ್ಟರು. ಅಕ್ಷೌಹಾರ್ಯವಾದ
ಕಾಗದ ಪತ್ರಗಳೆನ್ನೂ ಸಿಗಲಿಲ್ಲ.

ಬಂಡಿಗಾಲಿಯ ಖರಿಪತ್ತಿನ ಕಾರ್ಯಕ್ರಮ ಕಲಾಪ

ಅಂಬಿಕಾ ಪುರದ ಉಪಮಂಡಳ
ದವರು ತಂತಮ್ಮ ತಮ್ಮ ನೆಯ ಸಭೆಯನ್ನು
ಒಟ್ಟಿಗೆ ಕಲೆತು ಬೇರೆ ಬೇರೆ ವರ್ಗದವರ
ಬೇಡಿಕೆಗಳ ವಿಷಯವಾಗಿ ವಿಚಾರ ಮಾಡಿದರು.
ಮುಸಲ್ಮಾನ ಪ್ರತಿನಿಧಿಗಳೆಲ್ಲರೂ ಮೌನ ತಳೆದಿ
ದ್ದರು ಒಂಗಾಲ ಪ್ರಾಂತದ ಮುಸಲ್ಮಾನರ
ಬೇಡಿಕೆಗಳನ್ನು ಕಾಗದದಲ್ಲಿ ಬರೆದು ತಂದು ವಿ
ಧಾನಸಭೆಯವರು ಅದನ್ನು ಉಪಮಂಡಳದ
ಮುಂದೆ ಮಂಡಿಸಿದರು. ಹಿಂದೂ ಮುಸಲ್ಮಾನರ
ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸುವ
ದಾಗದಿದ್ದಲ್ಲಿ ಹಿಂದುಸ್ಥಾನ ಸರಕಾರದ ಯೋಜ
ನೆಯನ್ನು ಕೈಕೊಳ್ಳಬೇಕಾಗಿ ಸರ್ ಪೆಕ್ಕೋರ
ವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.
ಕಟ್ಟಕಡೆಗೆ ಯಾವದೂ ಬಗೆಹರಿಯದೆ ಸಭೆ
ಯು ವಿಸರ್ಜನೆ ಹಾಕಲ್ಪಟ್ಟಿತು.

ಅಧ್ಯಕ್ಷರಾದ ಸಿ. ವಿಜ್ಞಾಪನೋನಾ
ಲ್ಡರು ಅಲ್ಪಸಂಖ್ಯಾಕರ ಪ್ರಶ್ನೆಯನ್ನು ಬಗೆಹ
ರಿಸಲು ಹೊರಗಿನವರಿಗೆ ಕೇಳಿಕೊಳ್ಳುವದು
ಯೋಗ್ಯವಲ್ಲವೆಂದೂ, ಹೇಗಾದರೂ ಮಾಡಿ
ಒಪ್ಪವನ್ನು ನಿವ್ಯಪ್ಪಕ್ಕೆ ನೀವೇ ಬಗೆಹರಿಸಿಕೊಳ್ಳ
ಬೇಕೆಂದು ಅವರಿಗೆ ಅನೇಕ ಸಾರಿ
ಹೇಳಿದರು. ಬಂಗಾಲ ಹಾಗೂ ಪಂಜಾಬ
ಪ್ರಾಂತದ ಶಾಸನಸಭೆಗಳಲ್ಲಿ ಹಿಂದುಸ್ಥ
ಪ್ರತಿನಿಧಿತ್ವವನ್ನು ಮತ್ತು ಭಿನ್ನ ಭಿನ್ನ ಮತದಾ
ರ ಸಂಘಗಳನ್ನು ಬೇಡುವದನ್ನು ಮುಸಲ್ಮಾ
ನರು ಬಿಟ್ಟುಕೊಟ್ಟಿಲ್ಲ, ಅಲ್ಪಸಂಖ್ಯಾಕರ ಪ್ರಶ್ನೆ
ಯು ಬಗೆಹರಿವದಂಗಿ ತೋರುತ್ತದೆ.

ಜ್ವಾಲಾಮುಖಿಯಿಂದ ೬೦ ಜನರು ಸತ್ತರು.

ಡೆನ್ಮಾರ್ಕದಲ್ಲಿ ಮೌಂಪೆಲಿ ಜ್ವಾಲಾಮುಖಿಯ ಸ್ಪೋಟದಿಂದ ೬೦ ಹಳ್ಳಿಗಳು ಹಾಳಾಗಿ ಹೋಗಿವೆ. ೬೦೦ ಜನರು ಮರಣ ಹೊಂದಿದ್ದಾರೆ ಸರಕಾರು ಪತ್ರಕರ್ತರಿಗೆಲ್ಲ ಸತ್ತುಹೋಗಿದ್ದು, ಆ ಬೆಳೆಗಳೆಲ್ಲ ಸಂಪೂರ್ಣವಾಗಿ ಹಾಳವಾಗಿವೆ.

ಕರ್ನಾಟಕ

ಅವಿಶ್ವಾಸ ದಿವಸ ನಾಗರಿಕರು ಮೆರವಣಿಗೆಯಿಂದ ಹೊರಟುಹೋಗಿ, ಮಾಲವೀಯಜಿ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯು ಸಮಾರಂಭವನ್ನು ಜರುಗಿಸುವರೆಂದು ಮೊದಲೇ ಪ್ರಸಿದ್ಧವಾಗಿತ್ತು. ಅದಕ್ಕನುಸರಿಸಿ ಬೆಳಗಾವಿಯ ನಾಗರಿಕರು ಅಂದು ಮಂಜಾವಿನಲ್ಲಿ ಮಾರುತಿದೇವಾಲಯದ ಮುಂದೆ ಕೂಡಿ ವೀರವಣಿಗೆಯಿಂದ ಸಾಗಿ ಹೋದರು. ವೆರವಣಿಗೆಯು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೮ ಗಂಟೆಗೆ ಮಾಲವೀಯಜಿ ಚೌಕಿಗೆ ತಲುಪಿತ್ತು. ಅಲ್ಲಿ ಶ್ರೀ ಬೇವಿದತಾತ್ರಯರಾಯ್ಕುರ ಹಸ್ತದಿಂದ ರಾಷ್ಟ್ರಧ್ವಜವಂದನೆಯ ಸಮಾರಂಭವು ನೇರವೇರಿಸಲ್ಪಟ್ಟಿತು. ಆ ಸಮಯದಲ್ಲಿ ಶ್ರೀ ಬೆಳವಿಯವರು ಸನ್ಮಯೆಡಚಿತ ಭಾಷಣ ಮಾಡಿ, ಪಂಡಿತ ಮಾನವೀಯಜಿಯವರಿಗೆ ಧನ್ಯವಾದಗಳನ್ನರ್ಪಿಸಿ, ಅವರಿಗೆ ಆಯುರಾರೋಗ್ಯ ಲಭಿಸಲೆಂದು ಪ್ರಾರ್ಥಿಸಿದರು. ಬಳಿಕ ಸರಕಾರಿ ದಬ್ಬಾಳಿಕೆಯ ಮೂಲಕಾರಣವಾಗಿ ತಮ್ಮ ಶಿಕ್ಷಕ ವೃತ್ತಿಗೆ ಕಡಾಣ ಕೊಡಿದ ಶ್ರೀ ಪುರಾಣಿಕರು ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಪಂಡಿತಜಿಯವರ ಗುಣವರ್ಣನೆ ಮಾಡಿ, ಹಿಂದುಸ್ಥಾನದಲ್ಲಿ ಇತ್ತೀಚೆಗೆ ಸಂಭವಿಸಿದ ಸಂಗತಿಗಳು ಅವರಲ್ಲಿ ಹೇಗೆ ವಿಚಾರಕ್ರಾಂತಿಯನ್ನುಂಟು ಮಾಡಿವೆಯೆಂಬುದನ್ನು ಜನರಿಗೆ ತಿಳಿಸಿ ಹೇಳಿದರು.

ಸಭೆಯು ಮುಕ್ತಾಯ ಹೊಂದುವದಕ್ಕಿಂತ ಪೂರ್ವದಲ್ಲಿ ನಾಲ್ಕು ನಾಲ್ಕು ಜನ ಸತ್ಯಾಗ್ರಹಿಗಳ ಎರಡು ತಂಡಗಳು ಸಭೆಯಲ್ಲಿ ಎದ್ದುನಿಂತು, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಜ್ಞೆಯು ವಿರುದ್ಧವಾಗಿ ಪ್ರಭಾತ ಫೇರಿಯನ್ನು ತೆಗೆದುಕೊಂಡು ಹೋಗಲು ಸಿದ್ಧರಿದ್ದೇವೆಂದಾಗಿ ತಿಳಿಸಿ, ಜಯ ಜಯಕಾರ ಮಾಡುತ್ತ ಹೊಂಟುಹೋಗಿ, ಕೆಲವು ಬೀದಿಗಳಲ್ಲಿ ಸಂಚರಿಸಿದರು. ಅವರು ಇನ್ನೂ ಒಂಧನ ಕೈದಿಗಳಾಗಿಲ್ಲ.

ನಾಳಿನ ದಿವಸ ಮುಂಜಾನೆ ಲಾಲಾಜಿ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯು ಸಮಾರಂಭವು ಜರುಗಲಿರುತ್ತದೆ.

ಕರ್ನಾಟಕದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಮುದವೀಡು ಕೃಷ್ಣರಾಯರ ಮೇಲೆ ತಾ॥ ೨೨ನೆಯು ದಿವಸ ಧಾರವಾಡದಲ್ಲಿಯು ಅಧಿಕಾರಿಗಳು ೧೪೪ ನೆಯು ಕಲಮಿನ ಪ್ರಯೋಗ ಹೊರಡಿಸಿ. ಎರಡು ತಿಂಗಳು ಗಳವರೆಗೆ ಧಾರವಾಡದಲ್ಲಿ ಭಾಷಣಮಾಡಕೂಡದಾಗಿ ಅವರಿಗೆ ಅಜ್ಞೆಮಾಡಿದರು. ಶ್ರೀ ಕೃಷ್ಣರಾಯರು ಅಂದೇ ರಾತ್ರಿಯಲ್ಲಿ ಅಂಜೆಯ ಸಮಾರಂಭವನ್ನು ಜರುಗಿಸಿ, ಆ ಸಮಯದಲ್ಲಿ ಒಳ್ಳೇ ಸಭೆಯಲ್ಲಿ ಭಾಷಣಮಾಡಿ, ಅಧಿಕಾರಿಗಳು ಹೊರಡಿಸಿದ ಅಜ್ಞೆಯನ್ನು ಮುರಿದು ಬಿಟ್ಟರು.

ಹುಬ್ಬಳ್ಳಿಯಲ್ಲಿ ತಾ॥ ೧೭ ನೆಯು ದಿವಸ ಜವಾಹರಲಾಲ ದಿನದ ನಿಮಿತ್ತವಾಗಿ ನಡೆದ ಸಭೆಯಲ್ಲಿ ಜವಾಹರಲಾಲರ ಭಾಷಣ ಹಾಗು ವರ್ಕಿಂಗ ಕಮೀಟಿಯು ಠರಾವುಗಳನ್ನು ಓದಿ ಹೇಳುವ ಸಂಬಂಧವಾಗಿ, ಅಲ್ಲಿಯ ಶ್ರೀ ಶಿದ್ದೀರಪ್ಪ ಜೋಳಿನ, ಕಲ್ಲೇಶ್ವರಪ್ಪ ಉಗರಗೋಳ, ಶಿವಪುತ್ರಪ್ಪ ಗೋವನಕೊಪ್ಪ, ಸೀತಾರಾಮ ಕಾಮತ ಮತ್ತು ನಾರಾಯಣ ಜೋಶಿ ಈ ಐದು ಜನರಿಗೆ ಬೇರೆ ಬೇರೆಯಾಗಿ ಒಂದು ದಿವಸದಿಂದ ನಾಲ್ಕು ತಿಂಗಳ ವರೆಗೆ ಕಠಿಣ ಕಾರಾಗೃಹವಾಸವು ೨೫೦ ರೂಪಾಯಿ ದಂಡವೂ ಹೀಗೆ ಶಿಕ್ಷೆಗಳಾಗಿವೆ.

ಚಂದನ ಕಟ್ಟಿಗೆಗಳನ್ನು ಗಾಂಧಿ ಚೌಕಿನಲ್ಲಿ ಲಿಲಾವು ಮಾಡಿದ ಬಗ್ಗೆ ಶ್ರೀ ನಾಗಪ್ಪ ಜೀರಾ, ವಿಠ್ಠಲ ಚಾಂಡಾಗೆ, ಅಂಜನಪ್ಪ ಹಿಂಗರಿ ಮೇವಾಸಾ ಊಟನವರ ಈ ನಾಲ್ಕು ಜನರಿಗೆ ಬೇರೆ ಬೇರೆಯಾಗಿ ೧ ದಿವಸ ಕಠಿಣ ಕಾರಾಗೃಹವಾಸ ಹಾಗು ೪೦ ರೂಪಾಯಿಂದ ೬೦ ರೂ. ವರೆಗೆ ದಂಡ ಹೀಗೆ ಶಿಕ್ಷೆಗಳಾಗಿವೆ.

ಕಾನಾರದ ಮ್ಯುನಸಿಪಲ್ ಹದ್ದನ್ನು ಬಿಟ್ಟು ಹೋಗಬೇಕಾಗಿ ಡಿಸ್ಟ್ರಿಕ್ಟ ಪೋಲೀಸ ಕಾಯ್ದೆಯ ೫೬ ನೆಯ ಕಲಮಿನ ಪ್ರಕಾರ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಜ್ಞೆಯನ್ನು ಮುರಿದ ಒಕ್ಕೆ ಕಾರವಾರದಲ್ಲಿ ಶ್ರೀ ಗೋಕರ್ಣ ಹಾಗು ಶ್ರೀ ಮೆಹತಾರವರಿಗೆ ಪ್ರತ್ಯೇಕವಾಗಿ ೭೦ ರೂ. ದಂಡ, ಇಲ್ಲವೆ ೧೫ ದಿವಸ ಕಠಿಣ ಶಿಕ್ಷೆಯು ದೊರೆತಿವೆ.

ಸಿದ್ದಾಪುರ ಶಿಬಿರದಲ್ಲಿಯ ಶ್ರೀಕೃಷ್ಣ ಸುಬ್ರಾವ ಚಿತ್ರಕಥೆ ಎಂಬ ಸ್ವಯಂಸೇವಕನಿಗೆ ತಾ॥ ೧೫ನೆಯು ದಿವಸ ಕೈದಾಗಿದೆ.

ಬೆಳಗಾವಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ೨೬ ಜನ ರಾಜಕೀಯ ಕೈದಿಗಳನ್ನು ತಾ॥ ೧೪ ನೆಯು ದಿವಸ ರಾತ್ರಿ ವಿಜಾಪುರ ಜೇಲಿಗೆ ಒಯ್ದರೆಂಡೂ, ಅವರಲ್ಲಿ ಶ್ರೀ. ಚನ್ನಬಸಪ್ಪ, ವಾಟವೆ, ಗಂಗಾಧರ. ರಾಮಚಂದ್ರನ್, ರಾಮಾಚಾರ್ಯ, ಕಾಮಂತ, ದಿಡ್ಡಿಮನಿ ಮೊದಲಾದವರು ಇದ್ದರೆಂದೂ ತಿಳಿದು ಬರುತ್ತದೆ.

ಹಿಂದುಸ್ಥಾನ

ಸಕ್ಕರದಲ್ಲಿಯು ಓರ್ವ ಜವಳಿ ವ್ಯಾಪಾರಸ್ಥನ ಅಂಗಡಿಯಲ್ಲಿ ಒಂದು ಗಂಟು ಇಡಲ್ಪಟ್ಟಿತ್ತು. ಆ ವ್ಯಾಪಾರಸ್ಥನು ಅಂಗಡಿಗೆ ಬಂದ ಕೂಡಲೆ ಅದನ್ನು ಒಡೆದು ನೋಡಿದನು. ಒಂದು ಗುಂಡಿನಂತಹ ಪದಾರ್ಥವು ಕಾಗದದಲ್ಲಿ ಸುತ್ತಲ್ಪಟ್ಟಿದ್ದು ಕಂಡುಬಂತು. ಕೂಡಲೆ ಅದನ್ನು ನೆಲದ ಮೇಲೆ ಒಗೆದನು. ಅದು ಬಿಮ್ಮೆಂದು ಹೊಗೆಯ್ಮೆ ಹಾರಿತು. ವ್ಯಾಪಾರಸ್ಥನಿಗೆ ಯಾವತ್ತಿದ ಅಪಾಯವೂ ಸಂಭವಿಸಿಲ್ಲ.

ಮಹಾತ್ಮಾ ಗಾಂಧಿಯವರ ಚಿರಂಜೀವರಾದ ಶ್ರೀ ರಾಮದಾಸ ಗಾಂಧಿಯವರು ಇ. ಪಿ. ಕೋಡಿನ ೧೫೭೭ ಹಾಗು ಉಪ್ಪಿನ ಕಾಯ್ದೆಯ ೪೭ ಈ ಕಲಮುಗಳನ್ವಯ ತಾ॥ ೧೯ ನೆಯು ದಿವಸ ಮತ್ತೆ ಸೆರೆಹಿಡಿಸಲ್ಪಟ್ಟಿದ್ದಾರೆ. ತಾ॥ ೧೦ ನೆಯು ದಿವಸ ಮಾಟವಾಡಿಯಲ್ಲಿ ಭಾಷಣಮಾಡಿ ಉಪ್ಪಿನ ಕಾಯ್ದೆಭಂಗಕ್ಕೆ ಉತ್ತೇಜನ ಕೊಟ್ಟರೆಂಬ ಆರೋಪವು ಅವರ ಮೇಲೆ ಹೊರಿಸಲ್ಪಟ್ಟಿದೆ.

ಪಂಡಿತ ಮದನಮೋಹನ ಮಾಲವಿಯಾರವರು ಈಗ ಅಲಹಾಬಾದ ಸಿವಿಲ್ ಹೊಸ್ಪಿಟಲದಲ್ಲಿ ಉಪಚಾರ ಹೊಂದುತ್ತಿದ್ದು, ಅವರು ಬಹಳೇ ಅಶಕ್ತರಾಗಿರುವರು. ಒಂದು ಕಡೆಗೆ ಕುಳಿತುಕೊಳ್ಳುವದನ್ನು ಶಕ್ತಿಯು ಸಹ ಅವರಲ್ಲಿ ಈಗ ಉಳಿದಿಲ್ಲ. ತಾ॥ ೧೭ ನೆಯು ದಿವಸ ರಾತ್ರಿ ಅವರು ಸ್ವಲ್ಪ ಹೊತ್ತು ಪ್ರಜ್ಞೆಗೆ ಹೊಂದಿ ಬಂದಿದ್ದರು. ವೈದ್ಯ ಒಬ್ಬೇಲ್, ಕರ್ನಲ್ ಟಾವುನೆಂಡ ಮತ್ತು ಡಾ. ಬ್ಯಾನರ್ಜಿಯವರು ಅವರಿಗೆ ಉಪಚಾರ ಮಾಡುತ್ತಿರುವರು.

ತಾ॥ ೧೫ ನೆಯು ದಿವಸ ಯಾವನೋ ಒಬ್ಬ ಬಾರಿಯಾನು, ದೋರಸಾಪ ತಾಲೂಕಿಗೆ ಸೇರಿದ ಅಂಕಲಾವ ಹಳ್ಳಿಯ ಓರ್ವ ಪೋಲೀಸನ ಉಡುಪು ತುಬಾಕಿ ಮತ್ತು ಸಂಬಳದ ಹಣ ಇವುಗಳನ್ನು ಕದ್ದುಕೊಂಡು ಪರಾರಿಯಾಗಿ ಹೋಗಿದ್ದಾನೆ.

ಹಿಂದಿ ಮುಂಬಯಿ ಹಾಗು ಮದ್ರಾಸ ಇಲಾಖೆಗಳ ಗವರ್ನರರಾಗಿ ಕೆಲಸ ಮಾಡಿದ ಲಾರ್ಡ ವೆಯಿಲಿಂಗಡನ್ನವರು, ತಮಗಿನ ವೈಸ್ರಾಯರ ಶಾಸನಸಭೆಯಲ್ಲಿ, ಹಿಂದುಸ್ಥಾನದ ವೈಸ್ರಾಯರಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರು ಈಗ ಕಾನಡಾದ ಗವರ್ನರರ ಜನರಲರಿದ್ದು, ಅದರಿಂದ ಬೇಗನೆ ನಿವೃತ್ತಿಹೊಂದಿ, ಎಪ್ರಿಲ್ ತಿಂಗಳದಲ್ಲಿ ಅವರು ಇಲ್ಲಿಗೆ ಬರಲಿರುವರಿದ್ದಾರೆ.

ದಿಲ್ಲಿಯ ಸತ್ಯಾಗ್ರಹ ಯುದ್ಧಮಂಡಳದ ಗಾನೆಯು ಸರ್ವಾಧಿಕಾರಿಗಳಾಗಿದ್ದ ಶ್ರೀ ಮತಿ ರಾಜಪತಿ ಕೌಲರಿಗೆ ಕ್ರಿ. ಪ್ರ. ಆಮೆಂಡಮೆಂಟ್ ಶಾಸನದಿಯ ೧೭ನೆಯ ಕಲಮಿನನ್ವಯ ೬ ತಿಂಗಳ ಸಾದಾ ಶಿಕ್ಷೆಯು ವ್ಯಾಪ್ತವಾಗಿದ್ದು ಅವರು 'ಅ' ವರ್ಗದಲ್ಲಿ ಇಡಲ್ಪಟ್ಟಿದ್ದಾರೆ, ಶ್ರೀಮತಿಯವರು ಪಂಡಿತ ಜವಾಹರಲಾಲರ ಅತ್ತೆಯವರಾಗಿರುವರು.

ದಿಲ್ಲಿಯಲ್ಲಿ ಸಿಂದಿ ಅಂಗಡಿಯ ಪಿಕೆಟಿಂಗದ ಸಂಬಂಧವಾಗಿ ಶಿಕ್ಷೆಗೆ ಗುರಿಯಾದ ೨ಳಜನ ಸ್ತ್ರೀಯರಿಗೆ 'ಆ' ವರ್ಗವನ್ನು ಕೊಟ್ಟಿದ್ದರ ವೈಷಿ ಧ್ಯಾರ್ಥವಾಗಿ, ದಿಲ್ಲಿಯ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನ ಭವಿಸುತ್ತಿರುವ ಶ್ರೀ ಜೆ. ಎಂ ಸೇನಗುಪ್ತ ಹಾಗು ಅವರ ಪತ್ನಿ ಯವರಾದರೂ ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದಾರಾಗಿ ತಿಳಿಯುತ್ತದೆ.

ಶಿಕ್ಷೆಗೆ ಗುರಿಯಾದ ೨೪ ಜನ ಸ್ತ್ರೀಯರಿಗೆ 'ಆ' ವರ್ಗವನ್ನು ಕೊಟ್ಟಿದ್ದರ ನಿಷೇಧಾರ್ಥವಾಗಿ ಜೇಲಿನಲ್ಲಿ ಅನ್ನತ್ಯಾಗ ಕೈಕೊಂಡಿರುವ ೦ ಜನ ಸ್ತ್ರೀಯರಲ್ಲಿ ಕೆಲವರು ಹಸಿವನ್ನು ತಾಳಲಾರದೆ ಮೂರ್ಛೆಹೊಂದಿ ಬಿದ್ದರೆಂದು ತಿಳಿಯುತ್ತದೆ.

ಪಂಜಾಬದಲ್ಲಿಯ ಕಾಂಗ್ರೆಸ್ ಕಾರ್ಯ ಕರ್ತರಾದ ಶ್ರೀ ಲಾಲಾಚ ನಿಲಾಲ ಹಾಗು ಶ್ರೀ ಮಂಗರ್‌ದಾಸ ಇವರಿಗೆ ಕ್ರಮವಾಗಿ ೩ ಹಾಗು ೪ ತಿಂಗಳುಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಸಿಂಧಪ್ರಾಂತಕ್ಕೆ ಸೇರಿದ ಸಕ್ಕರದಲ್ಲಿ ಒಬ್ಬ ಕಬ್ಬಿಣ ವ್ಯಾಪಾರಿಯು ಕಬ್ಬಿಣವನ್ನು ಮಾರು ತ್ತ ನಿಂತಿರುವಾಗ ಯಾವನೋ ಒಬ್ಬನು ಒಂದು ಬಾಟಲಿ ಒಗೆದನು. ಅದು ಹಾರಿ ಆ ವ್ಯಾಪಾರಿ ಮತ್ತು ಅವನ ಹತ್ತಿರ ನಿಂತಿದ್ದ ಒರ್ವ ಮುಸಲ್ಮಾನನಿಗೆ ಗಾಯ ಮಾಡಿತು. ಕೂಡಲೆ ಅವ ರಿಬ್ಬರೂ ದನುಖಾನೆಗೆ ಒಪ್ಪಿಸಲ್ಪಟ್ಟರು.

ಬೆಹಾರದ ಪ್ರಸಿದ್ಧ ಕಾಂಗ್ರೆಸ್ ಮು ಖಂಡರಾದ ಬಾಬೂ ರಾಜೇಂದ್ರ ಪ್ರಸಾದರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಮೊನ್ನೆಯ ಶನಿವಾರ ದಿವಸ ಹಜಾರಿಬಾಗ ಜೇಲಿ ದಿಂದ ಬಿಡುಗಡೆಹೊಂದಿದರು.

ನಾಗಪುರದಲ್ಲಿ ಕಚ್ಚರ ಆಸ್ಪತ್ರೆಯಲ್ಲಿ ಇಡಲ್ಪಟ್ಟಿರುವ ಸೇನಾಪತಿ ಅವರಿಯವರು ಅಲ್ಲಿಯ ಆಧಾರಿಗಳಿಗೆ ಒಂದು ತಾಗದ ಬರೆದು ತಮ್ಮನ್ನು ತಮಿಳಿ ಜೇಲಿಗೆ ಒಯ್ದು ದಿವ್ಯಲ್ಲಿ ಅನ್ನತ್ಯಾಗ ಕೈಕೊಳ್ಳುವದರಲ್ಲಿ ಬರು ವದೆಂದು ತಿಳಿಸಿದ್ದಾರೆ.

ವರ್ಹಾಡ ಪ್ರಾಂತದ ಯುದ್ಧಮಂಡಳದ ಕಾರ್ಯದರ್ಶಿಗಳಾದ ಶ್ರೀ ಮುರಾತೆಯವರು ನಿನ್ನೆ ಅ ಕಲಮಿನನ್ವಯ ತಾ|| ೨೨ ನೆಯ ದಿವಸ ಸೆರೆಹಿಡಿಯಲ್ಪಟ್ಟಿದ್ದಾರೆ ಶ್ರೀಮುತರಾದ ಗರ್ಡೆ, ನಾಮದೇವ ಹಾಗು ಸೋನಟಕ್ಕೆ ಇವ ರಾದರೂ ಬಂಧನಕ್ಕೊಳಗಾಗಿದ್ದಾರೆ.

ಜೈಲಿನಲ್ಲಿ ತಮಗೆ ಸಿಗುತ್ತಿರುವ ಕೀಳು ಆಹಾರದ ನಿಷೇಧಾರ್ಥವಾಗಿ, ಯರವಾಡಾ ಜೇಲಿನಲ್ಲಿಯ ಎಲ್ಲಾ ಜನ ರಾಜಕೀಯ ಕೈದಿ ಗಳು ತಾ|| ೨೦ ರಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿದುಬಂದಿತ್ತು.

ಆಂಧ್ರ ವಿಶ್ವವಿದ್ಯಾಲಯದ ವ್ಯಾಯಿಸ್ ಚ್ಯಾನ್ಸಲರ ಶ್ರೀ ಸಿ. ಆರ್. ರೆಡ್ಡಿಯವರು ಸರ್ಕಾರಿ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ವ್ಹಾಯಿಸ್ ಚ್ಯಾನ್ಸಲರ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ.

ಡ್ರಾಯಿಂಗ ಪುಸ್ತಕವನ್ನು ಜಪ್ತ ಮಾಡಿದರು.

ರಜಪುತಾನಾ ಪ್ರಾಂತದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಅರ್ಜುನ ಲಾಲ ಸೇಠಿಯವರ ವಸತಿಗೆ ಅಜಮೀರದ ಪೋ ಲೀಸ ಅಧಿಕಾರಿಗಳು ತಾ|| ೧೭ ನೆಯ ದಿವಸ ಮುತ್ತಿಗೆ ಹಾಕಿ ೨ ಕಾಸುಗಳ ವರೆಗೆ ಝಡತಿ ಮಾಡಿದರು. ಅವರಿಗೆ ವರ್ಧದ ಚಿರಂಜೀವನ ದೊಂದು ಡ್ರಾಯಿಂಗ ಪುಸ್ತಕವ ಹೊರತಾಗಿ ಆಕ್ಷೇಪಾರ್ಹವಾದ ಕಾಗದಪತ್ರಗಳಾವವೂ ಅಲ್ಲಿ ಅವರಿಗೆ ಸಿಗಲಿಲ್ಲ. ಅಧಿಕಾರಿಗಳು ಅದನ್ನೇ ಜಪ್ತ ಮಾಡಿಕೊಂಡು ಹೋದರು. ಶ್ರೀ ಅರ್ಜು ನಲಾಲರ, ಈಗ ಅಜಮೀರ ತುರಂಗದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನ ಭವಿಸುತ್ತಿ ರುವರು

ದೇಶದಾಸ ರಾಜಬಂದಿಯವರು ಅನ್ನತ್ಯಾಗ ಕೈಕೊಂಡರು

ಪುಣೆಯಲ್ಲಿಯ ಜವಳಿ ವ್ಯಾಪಾರಸ್ಥರು ಪರದೇಶಿ ಬಟ್ಟೆಯ ವ್ಯಾಪಾರವನ್ನು ನಿಲ್ಲಿಸಲು ಇನ್ನೂ ಸಿದ್ಧರಾಗದ್ದನ್ನು ಕಂಡುಕೊಂಡು, ಪೈಸಾಫಂಡಿನ ದೇಶದಾಸ ರಾಜಬಂದಿಯವರು ಮೊನ್ನೆ ಸೋಮವಾರ ದಿವಸ ಅನ್ನವನ್ನು ಬಿಟ್ಟುಗೊಟ್ಟಿ ರುವರಾರ ಬಾಗದಲ್ಲಿ ಸತ್ಯಾಗ್ರಹ ಹೂಡಿದ್ದಾರೆ

ಬಂಡಿ ಗಾಲಿಯ ಪರಿವತ್ತಿಗೆ ಪ್ರತಿನಿಧಿ ಗಳಾಗಿ ಹೋಗಿರುವ ನೆಹರುಜಿಯವರ ಮುಖಮ್ಮದ ಅಲ್ಲಿಯವರ ಉಬ್ಬಸದ ಮೂರ್ಛೆಯಾಗಿ ಕೆಲವು ದಿನಗಳಿಂದ ಹಾಸಿಗೆ ಹಿಡಿದಿದ್ದರಷ್ಟೆ. ಅವರಿಗೆ ಈಗ ಸ್ವಲ್ಪ ಗುಣವಾಗಿದೆಯೆಂದು ತಿಳಿಯುತ್ತದೆ

ಗವ್ಹರ್ನರರಮೇಲೆ ಗುಂಡು ಹಾರಿಸಿದರು.

ಲಾಹೋರದಲ್ಲಿಯ ಪಂಜಾಬ ವಿಶ್ವವಿ ದ್ಯಾಲಯದಲ್ಲಿ ತಾ|| ೨೩ನೆಯ ದಿವಸ ಫಟಿಕೋ ತ್ಸವದ ಸಮಾರಂಭವು ನಡೆದಾಗ ಪಂಜಾಬಿನ ಗವ್ಹರ್ನರರಾದ ಸರ್ ಜೋಸ್ಪ್ರಿ ಮೊಟ್ ಮೊರಿಕ್ಸಿಯವರ ಮೇಲೆ ಮೂರು ಸಾರಿ ಗುಂಡು ಗಳು ಹಾರಿಸಲ್ಪಟ್ಟವು. ಗವ್ಹರ್ನರರ ಎಡತೊಡೆ ಹಾಗು ಎಡಕೋಳು ಇವುಗಳಿಗೆ ಸ್ವಲ್ಪ ಅಪಾಯ ಸಂಭವಿಸಿದೆ. ಸರ್ ಇನಸ್ಪೆಕ್ಟರ ಚರನಸಿಂಗರಿಗೂ ಒಂದು ಗುಂಡು ತಗಲಿ, ಅದು ಅವರ ಕ್ಷಿಯೊಳಗಿಂದ ಪಾರಾಗಿ ಹೊಯಿತು. ಕೂಡಲೆ ಅವರು ಮೇಯೋಹಾಸ್ಪಿಟಲಕ್ಕೆ ಒಯ್ಯಲ್ಪಟ್ಟರು. ಇಬ್ಬರು ಪೋಲೀಸರು ಹಾಗೆ ಒಬ್ಬ ಡಾಕ್ಟರಿಗೆಯೂ ಗಾಯಗಳುಂಟಾಗಿವೆ. ಈ ಸಂಬಂಧವಾಗಿ ಮೂವರು ವಿದ್ಯಾರ್ಥಿಗಳು ಕೈದು ಮಾಡಲ್ಪಟ್ಟಿದ್ದಾರೆ.

ಪಂಜಾಬ ವಿಶ್ವವಿದ್ಯಾಲಯದ ಫಟಿಕೋ ತ್ಸವ ಸಮಾರಂಭವು ನಡೆವ ಕ್ಷಣದಿಂದ ಗವ್ಹ ರ್ನರರು ಹೊರಬೀಳುತ್ತಿರುವಾಗ ಒಳಗಿನಿಂದ ಯಾರೋ ಕೆಲವರು ಅವರ ಮೇಲೆ ೩ ಸಲ ಗುಂಡು ಹಾರಿಸಿದರು. ಗುಂಡಿನ ಸಪ್ಪಳವನ್ನು ಕೇಳಿ ಪೋಲೀಸ ಅಧಿಕಾರಿಗಳು ಕೂಡಲೆ ಇಬ್ಬರು ಕರುಣಾಜನ್ನು ಸೆರೆಹಿಡಿದರು. ಒಟ್ಟು ನಲ್ಲಿ ಅವರಿಗೆ ಒಂದು ಪಿಸ್ತೂಲು, ಚಾಕು, ಹಾಗು ಕೆಲವು ಕಾಡತೂಸುಗಳು ದೊರೆತವು. ಗವ್ಹರ್ನರರ ಎಡತೊಡೆ ಹಾಗು ಎಡಕೋಳು ಇವು ಗಳಿಗೆ ಅಪಾಯವಾಯಿತು. ಅವರು ಕೂಡಲೆ ಹತ್ತಿರದ ಕೋಣೆಯಲ್ಲಿ ಹೋಗಿ ಕುಳಿತುಕೊಂ ಡರು. ಅಲ್ಲಿ ಕರ್ನಲ್ ಹಾರ್ಪರ ನೆಲ್ಸನ್ನನು ಅವರ ಗಾಯ ಕಟ್ಟಿದರು. ಬಳಿಕ ಗವ್ಹರ್ನರರು ಮೋಟಾರದಲ್ಲಿ ಕುಳಿತುಕೊಂಡು ಮೇಯೋ ಹಾಸ್ಪಿಟಲಕ್ಕೆ ಹೋಗಿ ಅಲ್ಲಿ ಉಪಚಾರ ಹೊಂದಿ ಗವ್ಹರ್ಮೆಂಟ ಹೌಸಕ್ಕೆ ತೆರಳಿದರು.

ಗಾಯಹೊಂದಿದವರು.

೧ ನಾ. ಗವ್ಹರ್ನರರು ೨ ಇನಸ್ಪೆಕ್ಟರ ಬುಧಸಿಂಗ ಪಠಾಣ. ೩ ಸಬ್ ಇನಸ್ಪೆಕ್ಟರ ಚರನಸಿಂಗ. ೪ ಲೇಡಿ ಡಾಕ್ಟರ ವನ್ಯಾಡೆರ ಮೊಟ್- ೫ ಶ್ರೀಮತಿ ಭಕ್ಷ್ಮಗಾರ. ಸಬ್ ಇನ ಸ್ಪೆಕ್ಟರ ಚರನಸಿಂಗರು ಆಸ್ಪತ್ರೆಯಲ್ಲಿಯೇ ಮರಣ ಹೊಂದಿದರು.

ಗುಂಡು ಹೊಡೆದವನು.

ಗವ್ಹರ್ನರರ ಮೇಲೆ ಗುಂಡುಹಾರಿಸಿದವನ ಹೆಸರು ಹರಕೃಷ್ಣನೆಂದಿದ್ದು, ಅವನು ಬಿ. ಎಸ್ಸಿ ಬಿ. ಟಿ. ಪದವೀಧರನಿರುತ್ತಾನೆ.

" ಸೊಲ್ಲಾಪುರದ ಆರೋಪಿಗಳಿಗೆ ದಯೆ ತೋರಿಸಿರಿ"

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ಶ್ರೀ ಧನಶೆಟ್ಟಿ, ಸೋದಲಾದ ನಾಲ್ಕು ಜನ ಆರೋಪಿಗಳ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಿ ಅವರಿಗೆ ದಯೆತೋರಿಸಬೇಕೆಂಬ ವಿಷಯವಾಗಿ, ನಗರಸಭೆ, ವರ್ತಕಸಂಘ, ಮಹಿಲಾಸಂಘ, ಮೊದಲಾದ ಸಾರ್ವಜನಿಕ ಸಂಸ್ಥೆಗಳೂ, ಕಾಯದೆಮಂಡಳಿಗಳ ಸಭಾಸದರೂ ಹೇಗೆ ಹೇಗೆ ಪ್ರಯತ್ನ ನಡೆಸಿರುವರೆಂಬುವದು ಕೆಳಗಿನ ಸಂಗತಿಗಳಿಂದ ವ್ಯಕ್ತವಾಗುವದು.

೧) ಶ್ರೀಮತಿ ಆಟಲ, ಶ್ರೀಮತಿ ನೆಟಲವಾಡ, ಶ್ರೀಮತಿ ಗಾಂಧಾ, ಶ್ರೀಮತಿ ಪುರುಷೋತ್ತಮದಾಸ ಈ ನಾಲ್ವರು ವೈಸ್ರಾಯಿಸರಾಯರಿಗೆ ತಂತಿ ಕಳಿಸಿ ಸೊಲ್ಲಾಪುರದ ಆರೋಪಿಗಳಿಗೆ ಜೀವದಾನ ಕೊಡಲು ಕೇಳಿಕೊಂಡಿದ್ದಾರೆ

೨) ಆರೋಪಿಗಳು ದಯೆಯ ಬಗ್ಗೆ ಬಾಂಬಶಹರ ಕಡೆಗೆ ಅರ್ಜಿಮಾಡಿದ್ದಿಲ್ಲ, ಅದನ್ನು ಬಾಂಬಶಹರಿಗೆ ಮುಟ್ಟಿಸಬಹುದೆಂದೂ ಅನುಗ್ರಹ ತೋರಿಸಬೇಕೆಂದು ರಾ. ಬ. ಕಾಳೆ ಮತ್ತು ಮುಂಬಯಿಯ ಹಿಂದೂ ವರ್ತಕ ಸಂಘದವರು ಗವರ್ನರ್‌ರವರಿಗೆ ವಿನಂತಿ ಮಾಡಿಕೊಂಡಿದ್ದಾರೆ.

೩) ಮುಂಬಯಿಯಲ್ಲಿಯ ಸರಾಫ ಸಂಘ, ಪಲಾಲರ ಸಂಘ, ಶೇವ್ಹದಾರರ ಸಂಘ, ವಾಡಿ ಜೀಂಬರ, ಈಸ್ಟ ಇಂಡಿಯನ್ ಕಾಟನ್ ಅಸೋಸಿಯೇಶನ, ಗ್ರೀನ ಮರ್ಚಂಟ್ಸ ಅಸೋಸಿಯೇಶನ್, ಇನ್‌ಶೂರನ್ಸ ಅಸೋಸಿಯೇಶನ್, ಡೆಕ್ಕನ್ ಬುಲಿಯನ್ ಎಸ್ಸೋಂಜ, ವಿಲ್ಸನ ಕಾರ್ಸ ಅಸೋಸಿಯೇಶನ್ ಮೊದಲಾದ ಸಂಸ್ಥೆಗಳು ದಯೆ ತೋರಿಸಲು ವೈಸ್ರಾಯಿಸರಾಯರ ಕಡೆಗೆ ತಂತಿ ಕಳಿಸಿದ್ದಾರೆ.

೪) ರಂಗೂನ, ಕರಾಚಿ, ಕಲಕತ್ತಾ, ಕೋಚೀನ ಮೊದಲಾದ ಪಟ್ಟಣಗಳಲ್ಲಿಯ ಪ್ರಮುಖ ವ್ಯಾಪಾರಿ ಸಂಸ್ಥೆಗಳಿಂದಲೂ ಮೇಲಿನಂತೆಯೇ ವಿನಂತಿ ಬರಮಾಡಿಕೊಂಡಿದ್ದಾರೆ.

೫) ಶ್ರೀ ನಾರಾಯಣರಾವ ಗುಂಡಾಳೆ, ವಿಶ್ವನಾಥರಾವ ಜೋಗ ಇವರು ವೈಸ್ರಾಯಿಸರಾಯರ ಕಡೆಗೆ ಈ ಬಗ್ಗೆ ತಂತಿಕಳಿಸಿದ್ದಾ; ಎಷ್ಟೋ ಜನ ಸಭಾಸದರಾಗಿದ್ದರೂ ಅದರಂತೆಯೇ ತಂತಿ ಪಸಾದಿಸಿದ್ದಾರೆ.

೬) ಮುಂಬಯಿಯ ಹಿಂದೂ ವರ್ತಕ ಸಂಘದ ಅಧ್ಯಕ್ಷರಾದ ಶ್ರೀ ಹುಸೇನಭಾಯಿ ಲಾಲಜಿಯವರು ಈ ಬಗ್ಗೆ ವೈಸ್ರಾಯಿಸರಾಯರ ಕಡೆಗೆ ಒಂದು ವಿಶೇಷ ವಿಜ್ಞಾಪನೆಯನ್ನು ಒಯ್ಯುವ ನಿರ್ಧಾರ ಮಾಡಿದ್ದು, ಅದಕ್ಕೆ ಭೇಟ್ಟಿ ಕೊಡಲು ಅವರಿಗೆ ದೆಹಲಿಯಿಂದ ಕರೆ ಬರುವ ನಿರೀಕ್ಷೆಯಿಂದ ಕಾಯುತ್ತಿದ್ದಾರೆ.

೭) ಒಂಡಿ ಗಾಲ್ ಪರಿಷತ್ತಿಗೆ ಹೋಗಿರುವ ಹಿಂದೀ ಪ್ರತಿನಿಧಿಗಳು ಬಾಂಬಶಹರ ಕಡೆಗೆ ಈ ಬಗ್ಗೆ ಒಂದು ಅರ್ಜಿ ಕಳಿಸಿ ವಿನಂತಿಸಿದ್ದು, ಅದಕ್ಕೆ ಪ್ರಸಿದ್ಧ ಬ್ಯಾರಿಸ್ಟರರಾದ ಮಿ. ವೈಟ್ಲಿಯ ಸಹಿ ಆಗಬೇಕೆಂಬ ನಿರೀಕ್ಷೆಯಲ್ಲಿದ್ದಾರೆ.

೮) ಗಲ್ಲಿನ ಶಿಕ್ಷೆಯನ್ನು ಜಾರಿಗೂ ಕೊಡಲು ಕಟ್ಟಾಜ್ಞೆಯಾಗಿ ಒಂದು ಪಾರ್ಲಿಮೆಂಟ ಕಮಿಟಿಯವರು ವರದಿ ಒಪ್ಪಿಸಿದ್ದು, ಆ ವರದಿಯ ಸೂಚನೆಯೊಂದು ಬೇಗನೆ ಪಾರ್ಲಿಮೆಂಟದ ಮುಂದೆ ಬರತಕ್ಕದ್ದಿದೆ ಯೆಂಬ ತಿಳಿದ ಕೂಡಲೆ ಆ ಕಮಿಟಿಯ ಅಧ್ಯಕ್ಷರಾದ ಶ್ರೀ. ಜೇವ್ಸ್ ಬಾರ ಬಳರ ಕಡೆಗೆ ಸೊಲ್ಲಾಪುರದ ಆರೋಪಿಗಳ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಲು ಭಾರತಮಂತ್ರಿಗಳಿಗೆ ಕಮಿಟಿಯು ಪಂಪಾಗಿ ಶಿಫಾರಸು ಮಾಡಿರಿ ಎಂದು ಪುಣೆಯ ಶ್ರೀ. ವಿನಸೆಂಟ್ಲೀರವರು ವಿನಂತಿ ಮಾಡಿಕೊಂಡಿದ್ದಾರೆ.

೯ ಕರ್ನಾಟಕ ವ್ಯಾಪಾರಿ ಸಂಘದ ವರೂ ಶ್ರೀ ಧನಶೆಟ್ಟಿ, ಸಾಂಡಾ, ಸಿಂಧೆ, ಕುರ್ಬಾನ ಹುಸೇನ ಮೊದಲಾದವರಿಗೆ ದಯೆ ತೋರಿಸಬೇಕೆಂದು ನಾ. ಗವರ್ನರ ಹಾಗೂ ವೈಸ್ರಾಯಿಸರಾಯರಿಗೆ ವಿನಂತಿ ಮಾಡಿಕೊಂಡಿದ್ದಾರೆ.

(ಈ ಬಗ್ಗೆ ವಿಚಾರ ಮಾಡುವದರಲ್ಲಿ ಒಂದೆರಡಂಬುದಾಗಿ ವೈಸ್ರಾಯಿಸರಾಯರು ಮೇಲಿನ ಕಲವು ತಂತಿಗಳಿಗೆ ಉತ್ತರ ಕೊಟ್ಟಿದಾರೆ.

೧೦ಸೊಲ್ಲಾಪುರ ಬಾರ ಅಸೋಸಿಯೇಶನಾಸೆಕ್ರೆಟ್ರಿಯವರು ಮ್ಯಾನೆಜಿಸಿಂಗ್ ಕಮಿಟಿ, ಧಾರವಾಡ ಬಾರ ಅಸೋಸಿಯೇಶನದವರೂ ಜೀವದಾನ ಕೊಡಲು ಪಡಿಕೊಂಡಿದ್ದಾರೆ.

೧೧ ಮುಂಬಯಿಯ ಮಿ. ಎಫ್. ಈ ದಿನಶಾವದವರು ನಾವಾದಾರ ಆಗಾಖಾನರಿಗೆ ತಾರು ಕಳಿಸಿ ಈ ಬಗ್ಗೆ ಪ್ರಯತ್ನ ಮಾಡಲು ವಿನಂತಿಮಾಡಿಕೊಂಡಿದ್ದಾರೆ.

೧೨ ಮುಂಬಯಿಯ ಶ್ರೀಮತಿ ಲಕ್ಷ್ಮೀಬಾಯಿ ಜಗಮೋಹನದಾಸರು ಗಲ್ಲಿ ಶ್ರೀ ಸಂಘದ ಪರವಾಗಿ ಲೇಡಿ ಆಯರ್ವಿನ ಹಾಗು ಲಾರ್ಡ ಆಯರ್ವಿನರಿಗೆ ತಾರು ಮಾಡಿ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಬೇಕಾಗಿ ಕೇಳಿಕೊಂಡಿದ್ದಾರೆ.

೧೩ ಹಿಂದುಸ್ಥಾನ ಎಷ್ಟೋ ಕಡೆಗಳಲ್ಲಿಯ ನಾಗರೀಕರು ಸಾರ್ವಜನಿಕ ಸಭೆಸೇರಿಸಿ ಗಲ್ಲಿನ ಶಿಕ್ಷೆಯನ್ನು ರದ್ದು ಪಡಿಸಬೇಕಾಗಿ ತೀರ್ಮಾನ ಮಾಡಿದ್ದಾರೆ.

ಅಫಗಾಣಿಸ್ಥಾನದಲ್ಲಿ
ಸೀಖರ ಮೇಲೆ ಬಂಡಿನ ಆರೋಪ

ಅಫಗಾನ ಸರಕಾರದ ವಿರುದ್ಧವಾಗಿ ಒಳಸಂಚು ನಡಿಸಿದ ಆರೋಪದಿಂದ ಜಲಾಲಬಾದದಪೋಲೀಸ ಅಧಿಕಾರಿಗಳು ಅಲ್ಲಿಯ ಜನ ಸೀಖ ಧರ್ಮಬೋಧಕರನ್ನು ಸೆರೆಹಿಡಿದಿದ್ದಾರೆ. ಆಗ ಅವಲ್ಲಿ ಅಧಿಕಾರಿಗಳಿಗೆ ಕೆಲವು ಪಿಸ್ತೂಲುಗಳಾದರೂ ದೊರೆತವು. ಸೆರೆಯಾಳುಗಳ ಈಗ ಕೊಣೆಯ ಮೇಲೆ ಬಿಗುಗಾಗಿ ಹೇಳಿಸಿದ್ದಾರೆ.

ಊಟಕ್ಕೆ ಕುಳಿತಾಗ
ಡೊಣೆಯ ಪ್ರಸಾದ ಸಿಕ್ಕಿತು

ಮದ್ರಾಸ ಇಲಾಖೆಯಲ್ಲಿಯ ಪದ್ಮಾವು ಪುರದ ಶ್ರೀ, ವೆಂ ಜಗಪತಿ ವರ್ಮಾರವರು ತಮ್ಮ ನೂರಾರು ಜನ ಗೆಳೆಯರು ಹಾಗು ಬಂಧು ಬಳಗದವರ ಸನ್ಮಾನಾರ್ಥವಾಗಿ ತಾ || ೨೨ ನೆಯ ದಿವಸ ತಮ್ಮ ತೋಟದಲ್ಲಿ ವನಭೋಜನವನ್ನೇರ್ಪಡಿಸಿದ್ದರು ಅವರೆಲ್ಲರೂ ಭೋಜನಕ್ಕೆ ಕುಳಿತಿರುವಾಗ ಡೆಪ್ಯೂಟಿ ಪೋಲೀಸ ಸ.ಪರಿಂಟೆಂಡೆಂಟು ಕೆಲವು ಜನ ಸಶಸ್ತ್ರ ಪೋಲೀಸರೊಂದಿಗೆ ಅಲ್ಲಿಗೆ ಸಾಗಿ ಹೋಗಿ ಎಲ್ಲರಿಗೂ ಡೊಣ್ಣೆಯ ಪ್ರಸಾದ ಕೊಟ್ಟರು. ಬ್ಯಾರಿಸ್ಟರ ಲಿಂಗಬಜಿಕೆ ವ್ಹಿ. ಆರ್. ಸ್ವಾಮಿ. ಶ್ರೀಮತಿ ಕಾಮೇಶ್ವರಮ್ಮ ಮೊದಲಾದ ೬೦ ಜನರಿಗೆ ಗಾಯಗಳಾಗಿವೆ. ಪೋಲೀಸ ಅಧಿಕಾರಿಗಳು ಹೀಗೇಕೆ ವರ್ತಿಸಿದರೆಂಬುವದು ತಿಳಿದು ಬಂದಿಲ್ಲ.

ಶ್ರೀ ವಿಠ್ಠಲಭಾಯಿಯವರು
ಮೇಜಿನಿಂದ ಕೆಳಕ್ಕೆ ಬಿದ್ದರು

ಕೋಯಮುತ್ತೂರಿನ ಸರಕಾರಿ ಡಾಕ್ಟರರು ತಾ || ೧೮ ನೆಯ ದಿವಸ ಶ್ರೀ ವಿಠ್ಠಲಭಾಯಿಯವರ ದೇಹಸ್ಥಿತಿಯನ್ನು ಪರೀಕ್ಷಿಸಿದರು. ಶ್ರೀ ವಿಠ್ಠಲಭಾಯಿಯವರು ಶಸ್ತ್ರಕ್ರಿಯೆಯ ಕೋಣೆಗೆ ನಡೆಯುತ್ತಲೆ ಹೋದರು. ಶಸ್ತ್ರಕ್ರಿಯೆಯ ಮೇಜಿನ ಮೇಲೆ ಅವರನ್ನು ಮಲಗಿಸಿ ಡಾಕ್ಟರರು ಅವರ ದೇಹಸ್ಥಿತಿಯನ್ನು ಪರೀಕ್ಷಿಸಲು ಪ್ರಾರಂಭಿಸುವಷ್ಟರಲ್ಲಿಯೇ ವೈದ್ಯನ ಒಂದು ಭಾಗವು ಒಮ್ಮಿಂದೊಮ್ಮೆ ಮುರಿದಿದ್ದರಿಂದ ಶ್ರೀ ಪಟೇಲರು ಕೆಳಕ್ಕೆ ಬಿದ್ದೆರು. ಇದರಿಂದ ಅವರಿಗೆ ಪುಷ್ಕಳವಾದ ಕೊಂದರೆಯುಂಟಾಗಿದೆ.

ಜಗತ್ತಿನ ಇತಿಹಾಸದಲ್ಲಿ ಅಪೂರ್ವ ಸಂಗತಿ.

ಮಹಾತ್ಮರ ಚಳವಳಿಯಲ್ಲಿ ಸಹಸ್ರಾರು ಜನ ಯುರೋಪಿಯನ್ನರ ವಿಶ್ವಾಸ.

ಸ್ವಿಟ್ಸರ್ಲಂಡಿನ ಯುವಕ ಸಂಘದ ಪ್ರಸಿದ್ಧ ಕಾರ್ಯಕರ್ತರಾದ ಮಿ. ಝುನುರವನ್ನವರು ತಾ ೧೫ ನೆಯ ದಿವಸ ಗುಜರಾಥ ಪ್ರಾಂತದ ಬೋರಸಾದ ತಾಲೂಕಿನ ಕಲವು ಹಳ್ಳಿಗಳಲ್ಲಿ ಸಂಚರಿಸಿ ಸತ್ಯಾಗ್ರಹ ಚಳವಳಿಯು ವಿಷಯವಾಗಿ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಚಳವಳಿಯು ಜಗತ್ತಿನ ಇತಿಹಾಸದಲ್ಲಿ ಒಂದು ಅಪೂರ್ವವಾದ ಸಂಗತಿಯಾಗಿರುತ್ತದೆ. ಜರ್ಮನಿಯಲ್ಲಿಯು ಸಾವಿರಾರು ಕರುಣಾ ಅಹಿಂಸೆ ಮತ್ತು ಸತ್ಯಗಳಲ್ಲಿ ವಿಶ್ವಾಸವನ್ನಿಟ್ಟಿದ್ದಾರೆ. ನನಗಾದರೂ ಅಹಿಂಸೆಯಲ್ಲಿ ವಿಶ್ವಾಸವಿದೆ. ಹಿಂದುಸ್ಥಾನದಲ್ಲಿಯ ಜನರು ಈ ಕಷ್ಟಕ್ಕೆ ಅಂಟಿಕೊಂಡು ಕಾರ್ಯಸಾಧಿಸುವರೆಂಬುವದನ್ನು ಕಂಡ ನನಗೆ ಬಹು ಸಂತೋಷವಾಯಿತು.

ಹಿಂದುಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಸಂಚರಿಸಿದೆ. ಭೆಟ್ಟಿಯಾದವರೊಡನೆ ಮಾತುಕತೆಯಾಡಿದೆ. ಎಷ್ಟೇ ನೋಡಿದರೆಯೂ ಪ್ರತಿಯೊಬ್ಬನು ಸ್ವಾತಂತ್ರ್ಯಕ್ಕಾಗಿ ಒಂದಿಲ್ಲೊಂದು ಬಗೆಯಿಂದ ಪ್ರಯತ್ನಿಸುತ್ತಲೇ ಇರುವನು. ಕಾರಣ ಈ ಸ್ವಾತಂತ್ರ್ಯಾಭಿಲಾಷೆಯನ್ನು ಹತ್ತಿಕ್ಕುವದು ಯಾರಿಂಗೂ ಸಾಧ್ಯವಿಲ್ಲ.

ಹಿಂದ ಸ್ಥಾನದಲ್ಲಿಯೇ ನಾನಿನ್ನು ಈ ಚಳವಳಿಯನ್ನು ಭಾಗತೆಗೆದು ಕೊಳ್ಳಬೇಕೆಂಬುದಾಗಿ ನಾನು ಮೊದಲು ಇಚ್ಛಿಸಿದೆ. ಆದರೆ ನನ್ನ ದೇಶಕ್ಕೆ ತಿರುಗಿ ಹೋಗಿ ಅಲ್ಲಿಯ ಜನರಿಗೆ ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯ ನಿಜವಾದ ಜ್ಞಾನವನ್ನು ಮಾಡಿಕೊಟ್ಟಲ್ಲಿ, ಹೆಚ್ಚಿನ ಸೇವೆಯನ್ನು ಮಾಡಿದಂತಾಗುವದೆಂದು ನನಗೆ ಎನಿಸಿದ್ದರಿಂದ ಮೊದಲಿನ ವಿಚಾರವನ್ನು ನಾನು ಬದಲಿಸಬೇಕಾಯಿತು.

ಬ್ರಿಟಿಶ ಪ್ರಭು ತ್ವವಾದಿಗಳೊಡನೆ ಮಹಾತ್ಮರು ಒಪ್ಪಂದವನ್ನು ಮಾಡಿಕೊಳ್ಳದಿದ್ದದ್ದೇ ಏಹಿತವಾಯಿತು. ಬಂಡಿಗಾಲಿಯು ಪ್ರಪತ್ತಿಗೆ ಎಂದಿಗೂ ಹುಶಾರ್ಯವಾಗದು. ಸರಕಾರದವರೇ ತಮ್ಮ ತಪ್ಪನ್ನು ತಿಳಿದುಕೊಂಡು ಮಹಾತ್ಮರು ಹಾಗು ಅಖಿಲಭಾರತೀಯರಾಷ್ಟ್ರಕಥೆಯ ಪ್ರತಿನಿಧಿಗಳೊಡನೆ ಇನ್ನಾದರೂ ಒಪ್ಪಂದ ಮಾಡಿಕೊಳ್ಳಲಿ ಅಂದರೆ ಹಿಂದುಸ್ಥಾನದ ಪ್ರಶ್ನೆಯು ತಾನಾಗಿಯೆ ಬಿಟ್ಟುಹೋಗುವದು. ತನ್ನೊಳ್ಳೆ ತಾನಿಗೆ ತಾನು ಬರ್ಮಾದರೊಳಗಾಗಿ ಹಿಂದುಸ್ಥಾನವು ಸ್ವತಂತ್ರವಾಗಿರಲೆಂದು, ನಾನು ಬಯಸುತ್ತೇನೆ.

ಅಧಿಕಾರಿಗಳು

ರೈತರ ಮನವಲಿಸ ಹತ್ತಿದರು

ಮುಂಬಯಿ ಇಲಾಖೆಯ ಕಂದಾಯ ಖಾತೆಯ ಮುಖ್ಯಾಧಿಕಾರಿಗಳಾದ ಮಿ. ಹಡಸನ್ನರು, ಜಲ್ಲಿಯ ಕಲೆಕ್ಟರ ಹಾಗು ಬೋರಸಾದ ಮಾಮಲೇದಾರರೊಡನೆ ತಾ ೧೫ ನೆಯ ದಿವಸ ಬೋರಸಾದ ತಾಲೂಕಿನ ಬೋಚಾಸನ ಹಾಗು ರಾಸ ಈ ಹಳ್ಳಿಗಳಿಗೆ ಹೋಗಿದ್ದರು. ಆಗ ಆ ಹಳ್ಳಿಗಳಲ್ಲಿ ಯಾರೂ ಅವರ ಕಣ್ಣಿಗೆ ಬೀಳಲಿಲ್ಲ. ಯಾಕಂದರೆ ರೈತರೆಲ್ಲರೂ ಗುಳೇ ಕಟ್ಟಿಕೊಂಡು ಬಡೋದಾ ಸಂಸ್ಥಾನದ ಹದ್ದನ್ನು ಸೇರಿದ್ದರು. ಆದ್ದರಿಂದ ಅಧಿಕಾರಿಗಳು ಅವರಿದ್ದಲ್ಲಿಗೇನೆ ಹೋಗಿ ಅವರ ಭೆಟ್ಟಿ ತೆಗೆದುಕೊಂಡರು. ಆ ಸಮಯದಲ್ಲಿ ಮಿ. ಹಡಸನ್ನರು ರೈತರನ್ನುದ್ದೇಶಿಸಿ ಕೆಳಗಿನಂತೆ ಸಂಭಾಷಣ ಮಾಡಿದರು.

ನಿಮ್ಮ ಬತ್ತನದ ಶೇ೦ ಎಳರಿ ಭೂಮಿಗಳು ಮಾರಲ್ಪಟ್ಟಿವೆ ಯೆಂಬುದನ್ನು ಕಂಡು ನನಗೆ ವಿಷಾದ ವೆನಿಸುತ್ತದೆ. ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಜಪ್ತವಾದ ನಿಮ್ಮ ಭೂಮಿಗಳು ನಿಮಗೆ ಸಿಗುವವು ನೀವು ಬಡವರಿರುವದಿಲ್ಲ ನಿಮಗೆ ಸಾಕಷ್ಟು ಉಳ್ಳವರೆ ವಿದೆ. ಆದ್ದರಿಂದ ತೆರಿಗೆಯನ್ನು ಕೊಡುವದೇನೂ ನಿಮಗೆ ಬಿಗಿ ಹೋಗಲಾರದು. ನೀವು ಮನೆಬಿಟ್ಟು ಹೊರಟು ಬಂದದ್ದನ್ನು ನೋಡಿ ನನಗೆ ದುಃಖವಾಗುತ್ತಿದೆ. ಎಡಸನೆಯು ಎಷ್ಟೋ ಹಳ್ಳಿಗಳಲ್ಲಿಯು ರೈತರು ತೆರಿಗೆಯು ಹಣವನ್ನು ಕೊಟ್ಟು ಸುಖದಿಂದ ಜೀವಿಸುತ್ತಿರುವರು. ಅವರಂತೆ ನೀವಾದರೂ ತೆರಿಗೆಯನ್ನು ಕೊಟ್ಟಲ್ಲಿ ನಿಮಗೆ ಯಾವ ತೊಂದರೆಯೂ ಉಂಟಾಗದು.

ಮಿ. ಹಡಸನ್ನರು ಸಂಭಾಷಣವು ಮುಗಿದ ಕೂಡಲೆ ರೈತರೆಲ್ಲರೂ ಏಕಸುತರಿಂದ ಮಹಾತ್ಮಾಗಾಂಧಿ ಹಾಗು ಸರದಾರ ವಲ್ಲಭ ಭಾಯಿಯವರು ಬಿಡುಗಡೆ ಹೊಂದಿ ಬರುವವರೆಗೆ ಒಂದು ಪೈ ಸಹ ಕೊಡುವದಿಲ್ಲವೆಂಬುದಾಗಿ ಸ್ಪಷ್ಟವಾಗಿ ತಿಳಿಸಿದರು.

ನೀವು ತೆರಿಗೆಯ ಹಣವನ್ನು ಕೊಟ್ಟಲ್ಲಿ ಮಾತ್ರ ನಿಮ್ಮ ಮಾಲುಗಳು ಬಿಡುಗಡೆ ಮಾಡಲ್ಪಡುವರು ಎಂಬುದಾಗಿ ಮಿ. ಹಡಸನ್ನರು ಅವರಿಗೆ ಹೇಳಿದರು.

ತಮ್ಮ ಮನಸಿಗೆ ಬಂದಂತೆ ವರ್ತಿಸಲು ಕೆಳಗಿನ ಅಧಿಕಾರಿಗಳಿಗೆ ಮೇಲಧಿಕಾರಿಗಳು ಮುಕ್ತದ್ವಾರವನ್ನಿಟ್ಟಿದ್ದರಿಂದ, ಅವರು ರೈತರನ್ನು ಬಹುಪರಿಯಾಗಿ ಪೀಡಿಸುತ್ತಿದ್ದಾರೆ. ಅವರ ಅನ್ಯಾಯ ಹಾಗು ಜುಲುಮೆಗಳನ್ನು ಸಹಿಸಿಕೊಳ್ಳದೆ ಇಲ್ಲಿಗೆ ಗುಳೇ ಕಟ್ಟಿಕೊಂಡು ಒಂದಿದ್ದೇವೆ. ಎಂದು ರೈತರು ಮಿ. ಹಡಸನ್ನರಿಗೆ ತಿಳಿಸಿದರು.

ನಮಗೆ ತೆರಿಗೆಯ ಹಣವನ್ನು ಕೊಡುವ ಸ್ಪರಂಗವು ನಿಮಗೆ ಇಂದಿಲ್ಲ ನಾಳೆಯಾದರೂ ಇಂದೇ ಬರುವದು. ಆದ್ದರಿಂದ ಈಗಲೆ ಅದನ್ನು ಕೊಟ್ಟು ನಿಮ್ಮ ಮನೆಗಳಿಗೆ ನೀವು ತಿರುಗಿ ಹೋಗುವದು ವಿಹಿತವಾಗಿದೆ ಎಂಬುದಾಗಿ ಮಿ. ಹಡಸನ್ನರು ರೈತರಿಗೆ ತಿಳಿಹೇಳಿದರು.

ನಮ್ಮ ನಿರ್ಧಾರವನ್ನು ಮೊದಲೇ ತಿಳಿಸಿದ್ದೇವೆ. ಈ ಒಗ್ಗೆ ನಿಮ್ಮ ಉಪದೇಶವನ್ನು ಕೇಳಲು ನಾವು ಸಿದ್ಧರಿಲ್ಲ ಎಂದು ರೈತರು ಉತ್ತರ ಕೊಟ್ಟರು.

ಅಧಿಕಾರಿಗಳು ಅವನತಮುಖರಾಗಿ ಬಂದ ಹಾದಿಗೆ ಸುಂಕವಿಲ್ಲವೆಂದು ತಿರುಗಿ ಹೊರಟು ಹೋದರು.

ಡಾಕಾದಲ್ಲಿ

ಒಬ್ಬನಿಗೆ ಕರೆನೀರಿನ ಶಿಕ್ಷೆ

ಮೇ ತಿಂಗಳ ೨೪ ನೆಯ ತಾರೀಖಿನ ದಿವಸ ಡಾಕಾದಲ್ಲಿ ಹಿಂದೂ ಮುಸಲ್ಮಾನರ ದಂಗೆಯು ಸಂಭವಿಸಿದಾಗ ಜತೀಂದ್ರನಾಥ ಕರ ಮತ್ತು ಕರ ಕೊಲೆಮಾಡಿದ ಸಂಬಂಧವಾಗಿ ಅಲ್ಲಿಯ ವೋಹಯುದ್ದೀನನಿಗೆ ಕರೆನೀರಿನ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಬೈಲಹೊಂಗಲದಲ್ಲಿ

ಜಪ್ತಿಯ ಹಾವಳಿ

ಸಿಂವಿ ಗಡ ಕಡಿದ ಬಗ್ಗೆ ಬೈಲಹೊಂಗಲ ದಲ್ಲಿ ಶ್ರೀ ದತ್ತು ಬಾಳಪ್ಪ ಕರಾಡ ಎಂಬ ಸ್ವಯಂ ಸೇವಕನಿಗೆ ೧೦೦ ರೂ. ದಂಡವಾಗಿತ್ತು. ತಾ ೧೯ ನೆಯ ದಿವಸ ಪೊಲೀಸ ಅಧಿಕಾರಿಗಳು ಅವರ ಮನೆಗೆ ವಂತ್ತಿಗೆ ಹಾತಿ ಅಷ್ಟು ರುಪಾಯಿಗಳಷ್ಟು ಜಪ್ತ ಮಾಡಿಕೊಂಡು ಹೋದರು. ಶ್ರೀ ಬಸಪ್ಪ ನೇಕಾರಿಗಳವರ ಮನೆಯಾದರೂ ಝಡತಿ ಮಾಡಲ್ಪಟ್ಟಿತು. ಆದರೆ ಅಧಿಕಾರಿಗಳಿಗೆ ಅಲ್ಲಿ ಏನೂ ಸಿಗಲಿಲ್ಲ.

ಮೈಸೂರ ಸಂಸ್ಥಾನದಲ್ಲಿ
ಪತ್ರಿಕೆಗಳಿಗೆ ಎಚ್ಚರಿಕೆ

ಮೈಸೂರ ಸಂಸ್ಥಾನದಲ್ಲಿಯು ೧ ತಾಯಿ ನಾಡು, ೨ ವಿಶ್ವಕರ್ನಾಟಕ, ೩ ಲೋಕ ಹಿತೈಷಿ ೪ ಚಿತ್ರ ಗುಪ್ತ, ೫ ಡಿಮೊಕ್ರಾಟ್, ೬ ಪಂಚಿ ಜನ್ಯ, ೭ ಪ್ರಭಾ, ೮ ಸುಬೋಧ, ೯ ರಂಗ ಭೂಮಿ ಈ ಪತ್ರಿಕೆಗಳಿಗೆ ಮೈಸೂರ ಸರ್ಕಾರದವರು ಒಂದು ಅಪ್ಪಣೆಯನ್ನು ಕಳಿಸಿ ಚರ್ಚೆಯಲ್ಲಿರುವ ವಿಷಯವನ್ನು ಬಹು ಎಚ್ಚರಿಕೆಯಿಂದ ಬರೆಯಲು ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಕೇವಲ ರಂಗಭೂಮಿಗೆ ಸಂಬಂಧಿಸಿದ ವಿಷಯಗಳಲ್ಲೇ ಇರ್ಚೆಸುತ್ತಿರುವ "ರಂಗ ಭೂಮಿ"ಗೂ ಹೀಗೆ ಎಚ್ಚರಿಕೆಯನ್ನು ಕೊಟ್ಟಿರುವದು ಬಹು ಸೋಜಿಗವಾಗಿದೆ.

ಹಾನಗಲ್ಲಿನಲ್ಲಿ
ಶ್ರೀ ಅನಂತಭಟ್ಟರಿಗೆ ಶಿಕ್ಷೆ

ಹಾನಗಲ್ಲಿನ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಅನಂತಭಟ್ಟ ಕುಂದಾಪುರರಿಗೆ ತಾಯಿದೆ ಭಂಗದ ನಿಮಿತ್ತವಾಗಿ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರೂ. ದಂಡ ಹೀಗೆ ಶಿಕ್ಷೆಯನ್ನು ವಿಧಿಸುವದರಲ್ಲಿ ಬಂದಿದೆ. ಸತ್ಯಮುಚ್ಚಲಿನ ಐದು ತಾಲೂಕ ಗಳನ್ನು ಬಿಟ್ಟು ಹೋಗಬೇಕೆಂದು ಅಧಿಕಾರಿಗಳು ಇವರಿಗೆ ಅಪ್ಪಣೆ ಮಾಡಿದ್ದರೂ ಸಹ ಇವರು ಅದನ್ನು ಧಿಕ್ಕರಿಸಿ ಹಾನಗಲ್ಲನಲ್ಲಿಯೇ ಉಳಿದಿದ್ದರು.

ಹಾವೇರಿಯಲ್ಲಿ
೪ ಜನರಿಗೆ ಶಿಕ್ಷೆ.

ಅಡವಿಯ ಕಾಯದೆಭಂಗದಲ್ಲಿ ಭಾಗ ತೆಗೆದುಕೊಂಡ ಸಲುವಾಗಿ ಹಾವೇರಿಯಲ್ಲಿ ಶ್ರೀ ವೀರಯ್ಯ ಮಠಪತಿ, ಶ್ರೀನಿವಾಚಾರ್ಯ ಡಾವಣಿಗೇರಿ, ಶಿದ್ದಯ್ಯಾ ಕಡಕೋಳ ಇವರಿಗೆ ಪ್ರತ್ಯೇಕವಾಗಿ ೪ ತಿಂಗಳ ಕಠಿಣ ಕಾರಾಗೃಹವಾಸ ಮತ್ತು ಶ್ರೀ ಗಿರಿಯಪ್ಪ ಹನುಮಂತಪ್ಪ ಇವರಿಗೆ ೨ ತಿಂಗಳ ಕಠಿಣ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ.

ದಂಡ ವಸೂಲಿಯ ಹಾವಳಿ

(ಸ್ವಂತ ಸುದ್ದಿಗಾರರಿಂದ)

ಹಾಳ್ಳಿಯ ಸರ್ವಾಧಿಕಾರಿಗಳಾದ ಶ್ರೀ ಅಮಟೂರ ಗುಡಿ.ರಾಯಂರಿಗಾಗಿ ೧೦೦ ರುಪಾಯಿ ತಿಂಗಳ ಜನದಲ್ಲಿ ತಸೂಲಾಗಬೇಕಾಗಿದ್ದು ತಾ|೩೧ ನೆಯ ನೆಯ ದಿವಸ ಪೋಲೀಸ ಅಧಿಕಾರಿಗಳು ಅವರ ಅಂಗಡಿಗೆ ಬಂದರು. ಅಂಗಡಿಯ ಚಾಲಕರು ದಂಡವನ್ನು ಕೊಡಲು ನಿರಾಕರಿಸಿದರು ಅಧಿಕಾರಿಗಳು ಅಂಗಡಿಯಲ್ಲಿ ಹೊಕ್ಕು ಪೆಟ್ಟಿಗೆಯಲ್ಲಿನ ೧೮೦ ರುಪಾಯಿಗಳನ್ನು ಜಪ್ತುಮಾಡಿ ಪಂಚ ನಾಮೆ ಮಾಡಿದರು. ಗಾಂಧಿ ಟೊಕಿಸಲ್ಲಿರುವವರು ಪಂಜರವಾಗಲು ಒಪ್ಪದ್ದರಿಂದ ಅಧಿಕಾರಿಗಳು ಚನ್ನಪ್ಪ ಬಸಪ್ಪ ಗದಗ ಮೋಟಾರ ಡ್ರಾಯಿವ್ಹರ ಹಾಗು ಹಡ್ಡಿಯ ಶೆಟ್ಟರನ್ನು ಪಂಜರಸ್ಥರಮಾಡಿ, ಪಾವತಿಸದನ್ನು ಪೆಟ್ಟಿಗೆಯಲ್ಲಿಟ್ಟ ದಂಡದ ಕಣವನ್ನು ಒಪ್ಪಿಸಿದರು. ಪಂಜರಸ್ಥರಾಗಿದ್ದ ಮೋಟಾರ ಡ್ರಾಯಿವ್ಹರನ ವೇಲೆ ಜನರು ಬಹಿಷ್ಕಾರ ಹಾಕುವದಾಗಿ ಯೋಚಿಸಿದ್ದಾರೆ.

ಅಲ್ಮಿಪೂರ ಜೇಲಿನಲ್ಲಿ ಅನ್ನತ್ಯಾಗ.

ಅಲ್ಮಿಪೂರ ಪೈಸಡೆನ್ಸಿ ಜೇಲಿನಲ್ಲಿರುವ ಎಷ್ಟೋ ಜನ ರಾಜಕೀಯ ಕೈದಿಗಳು ನಿರಶನ ವ್ರತವನ್ನು ಪ್ರಾರಂಭಿಸಿರುವರೆಂದು ತಿಳಿದು ಬಂದಿತ್ತದೆ.

ದಿಲ್ಲಿ ಜೇಲಿನಲ್ಲಿ
೪೦ ಸ್ತ್ರೀಯರ ಅನ್ನತ್ಯಾಗ.

ಕಾಯದೆಭಂಗದ ಮೂಲಕವಾಗಿ ದಿಲ್ಲಿ ಕೋರ್ಟಗಾದ ೨೪ ಜನ ಸ್ತ್ರೀಯರಿಗೆ "ಬಿ" ವರ್ಗವನ್ನು ಕೊಟ್ಟಿದ್ದರ ನಿಷೇಧಾರ್ಥವಾಗಿ ದಿಲ್ಲಿಯ ಜೇಲಿನಲ್ಲಿರುವ ೪೦ ಜನ ಸ್ತ್ರೀಯರು ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿಯುತ್ತದೆ

ಜೇಲಿನಲ್ಲಿ
ಸತ್ಯಾಗ್ರಹಿಯ ಮರಣ

ಬಳ್ಳಾರಿ ಜಿಲ್ಲೆಯ ಕಲೀಪುರ ಜೇಲಿನಲ್ಲಿ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಪ್ರಭಾಲ ಸುಬ್ರಾವ ಎಂಬ ಸತ್ಯಾಗ್ರಹಿಯು ಹೃದಯ ವಿಕಾರದಿಂದ ಜೇಲಿನಲ್ಲಿಯೇ ಮರಣ ಹೊಂದಿದನು.

ಮುರುಗೋಡದಲ್ಲಿ
ನಾಲ್ವರಿಗೆ ಶಿಕ್ಷೆ

ಮುರುಗೋಡದ ಸುತ್ತುಮುತ್ತಲಿನ ಹಳ್ಳಿಗಳಲ್ಲಿಯು ಸಿಂದಿ ಗಿಡಗಳನ್ನು ಕಡಿದ ಅರೋಪದ ಸಂಬಂಧವಾಗಿ ಅಲ್ಲಿಯ ಶ್ರೀ ಬಸವನ್ನೆಪ್ಪ ರಡಿಗುದ್ದಿ, ಅನಂತ ಮು ನವಳ್ಳಿ, ಪ್ರಲ್ಹಾದ ಸಕ್ಕೆ, ಸಣ್ಣಮಲ್ಲಪ್ಪ ಪಾಟೀಲ ಈ ನಾಲ್ಕು ಜನರಿಗೆ ತಾ| ೧೯ ನೆಯ ದಿವಸ ೧೦ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರೂ ದಂಡ, ಇಲ್ಲವೆ ಮತ್ತೆ ೩ ತಿಂಗಳ ಕಠಿಣ ವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಗಡೆಯೂದ ಮೇಲೆಯೂ ಸಹ ೫೦೦ ರೂ. ಹೊಣೆ ಕೊಡಲು ಕಡೆಯ ಇಬ್ಬರಿಗೆ ಆಜ್ಞೆ ಸಿದ್ದಾರೆ. ಮೊದಲಿನ ಮೂವರಿಗೆ ೧ ತಿ ಹಿಂದೆ ೧೩ ತಿಂಗಳ ಶಿಕ್ಷೆಯಾಗಿದೆ

ಬೆಳಗಾವಿಯಲ್ಲಿ
ಪೋಲೀಸ ಅಧಿಕಾರಿಗಳ ವೇಲೆ ಫಿರ್ಯಾ

ಬೆಳಗಾವಿಯ ಹೋಟೆಲ್ ಸೆಸ್ಟೆಲ್ಲೊ ಮಿ. ವೆಸ್ಟಗೇಟರು ತಮ್ಮನ್ನೆ ಹೊಡೆದು ಶ್ರೀ ಮಂಡಗಿಯವರೂ, ಶಿಕ್ಷೆಯನ್ನು ಕೊಂಡು ಹೋದ ನಂತರ ಸಾಬ್ ಇನ್ಸ್ಪೆ ಖಾನರು ತಮಗೆ ಬೈದು ಹೊಡೆದರೆಂದು ಗುಂಡೋಪಂತ ಜನಯಯವರೂ ಪೊಲೀ ಯಲ್ಲಿ ಅವರ ವೇಲೆ ಫಿರ್ಯಾದಿ ಮಾಡಿದಾ

ಸಿಗ್ನಾವಿಯಲ್ಲಿ
೮ ಜನರ ವೇಲೆ ಖಟ್ಲೆ

ಅಡವಿಯ ಸತ್ಯಾಗ್ರಹ ಸಂಬಂಧ ಬಂಧನಕ್ಕೊಳಗಾದ ಸ್ವಯಂಸೇವಕರ ವಿಚಾರಣೆಗೆಯ ಸಲುವಾಗಿ ಮೋಟಾರು ತರುವದರ ಅರೋಪ ಹೊರಿಸಿ ಅಧಿಕಾರಿಗಳು ಸಿಗ್ನಾವಿಯಲ್ಲಿ ೮ ಜನರ ವೇಲೆ ಖಟ್ಲೆ ಹಾಕಿದ್ದಾರೆ.

ಗದಗಿನಲ್ಲಿ
ಶ್ರೀ ಸಾವಕಾರರಿಗೆ ಸನ್ಮಾ

ಕಾಯದೆಭಂಗದ ಮೂಲಕವಾಗಿ ಶಾ ಗೃಹಕ್ಕೆ ತೆರಳಿದ ಶ್ರೀ ಅನಂತರಾವ ಸಾವ ಮಾಸ್ತರರು, ತಮ್ಮ ಶಿಕ್ಷೆಯ ಅವಧಿಗೆ ಮುಗಿಸಿಕೊಂಡು ತಾ|| ೨೧ ನೆಯ ದಿವಸ ಬಂದರು. ಗದಗ ಬೆಟಗೇರಿ ನಿವಾಸಿಗಳು ರಿಗೆ ಯೋಗ್ಯ ಆದರ ಸತ್ಕಾರಗಳನ್ನು ಮೆರವಣಿಗೆಯಿಂದ ಅವರನ್ನು ಊರಲ್ಲಿ ಕೊಂಡು ಬಂದರು ನಂತರದಲ್ಲಿ ಗ್ರಾಂಧಿ ರಲ್ಲಿ ಸಭೆಸೇರಿಸಿ, ಅವರಿಗೆ ಬಹುಮಾನ ಲಾಯಿತು. ಶ್ರೀ ಹತ್ತಿಕ್ಕೋಣಂತ ನಾಡಗೀರ ರು ಪುಜನರ ಪತಿಯಿಂದ ಅವರಿಗೆ ಸ್ವ ವನ್ನು ಕ್ರಮ. ಪಸಿದ್ಧ ವ್ಯಾಪಾರಿಗಳಾದ ರಾಮಚಂದ್ರಪ್ಪ ಕಂಪ್ಲಿಗಿಯವರು ಅವರಿಗೆ ಜನರ ಪರವಾಗಿ ಹಾರತುರಾಯಿಗಳನ್ನು ಸಿದರು. ಬಳಿಕ ಶ್ರೀ ಸಾವಕಾರ ಮಾಸ್ತರ ಒಳ್ಳೇ ಸ್ಫೂರ್ತಿದಾಯಕ ಭಾಷಣವಾಗಿ ಸರೆ ಮುಕ್ತಾಯ ವಾಯಿತು.

ವ್ಹಾಯಿಸರಾಯರು

ಎರಡು ಅಸ್ತ್ರಗಳಿಗೆ ಜೀವಕೊಟ್ಟರು.

ಮುದ್ರಣಬಕಾಸುರನೂ ಮತ್ತೆ ಬಂಡನು.

ನವ್ಹೆಂ.ಂಟ್ ಆಫ್ ಇಂಡಿಯಾ ಆಕ್ಟಿನ ನೆಯ ಕಲಮಿನನ್ವಯ ತಮಗೆ ದೊರೆತ ಧಿಕಾರವ ನೆಕ್ಕೆಗೆ ವ್ಹಾಯಿಸರಾಯರು ಕೆಳ ಎಂಡು ಆರ್ಡಿನನ್ಸುಗಳನ್ನು ಹೊರಡಿಸಿ ದ್ದಾರೆ.

೧ ಅನಲಾಪುರ್ ಇನಸ್ಟಿಗೇಶನ್ ಆರ್ಡಿ ನೆ.

೨ ಮುದ್ರಣಾಲಯ ಹಾಗು ವೃತ್ತಪತ್ರ ಕ್ಕು ಕಪತ್ರಗಳ ಆರ್ಡಿನನ್ಸು. ಸರಕಾರಕ್ಕೆ ಇಡಬೇಕಾದ ಯಾವದಾದರೂ ಕರವನ್ನಾಗಲಿ ನ್ನೆ ಭರಿಸುವಾಯವನಾಗಲಿ ಕೊಡಬಿಡಿ ಸರೂ, ತಡಮಾಡಿಕೊಡಿಸಿದೆಂದೂ ಜನರಿಗೆ ತ್ತೇಜನ ಕೊಡುವವನಿಗೆ ೬ ತಿಂಗಳ ತಿಕ್ಕೆ ಗೂ ದಂಡ ವಿಧಿಸುವದಲ್ಲಿ ಬರುವಂಥ ಗಿ ಕೊಡಬೇಸೆಯದಲ್ಲಿ ಹೇಳಿದ್ದಾರೆ. ಈ ರಾಧವನ್ನು ಮಾಡಿದವರನ್ನು ಹೊಣೆಯಿಂದ ತಕ್ಕ ದ್ದಲ್ಲವಾಗಿ ಅದರಲ್ಲಿ ಸೂಚಿಸಿದ್ದಾರೆ.

ವೃತ್ತಪತ್ರ, ಹಾಗು ಮುದ್ರಣಾಲಯ ಸರಕಾರದ ವಿಷಯಕ್ಕೆ ಅಪ್ರೀತಿ, ದ್ವೇಷ ದಲಾದವುಗಳನ್ನು ಹುಟ್ಟಿಸುವದಕ್ಕೂ, ಪದ್ರೋಹಾತ್ಮಕ ವಿಷಯಗಳನ್ನು ಪ್ರಸಾರ ಡುವದಕ್ಕೂ ಇಲ್ಲವೆ ಕಾಯಿದೆಗೆ ವಿರ ದ್ಧ ವರ್ತಿಸಲು ಜನರಿಗೆ ಉತ್ತೇಜನ ಕೊಡುವ ಸ್ಥಿತಿ ಪ್ರಯುತ್ತಿಸಿದಲ್ಲಿ ಅವುಗಳಿಗೆ ತಡೆ ುವ ಉದ್ದೇಶದಿಂದ ಎಚನೆಯ ಆರ್ಡಿ ನ ಹೊರಡಿಸಲ್ಪಟ್ಟಿದೆ. ಮುದ್ರಣಾಲಯ ಮೆ ವೃತ್ತಪತ್ರಗಳಿಂದ ಜಾಮೀನು ತೆಗೆಯಲು ಕಾರವ್ಹ ಕೊಡಲ್ಪಟ್ಟಿರುವದು. ಜಾಮೀನು ಪೈ ಮೇಲೆಯೂ ಅವುಗಳ ತಪ್ಪು ಕಾರ್ಯ ಹಾಗೆಯೆ ನಾಗಿಸಿದರೆ ಜಾಮೀನು ಜಪ್ತು ಡುವದಕ್ಕೂ ಅಧಿಕಾರವು ಕೊಡಲ್ಪಟ್ಟಿದೆ. ತ್ರಗಳ ವಿಷಯವಾಗಿ ಜೊತೆ ಆರ್ಡಿನ ದೂ ಇವರಲ್ಲಿಯೇ ಸೇರಿಕೊಂಡಿದೆ.

ವೃತ್ತಪತ್ರ ದಬ್ಬಾಳಿಕೆಯು ಕಾಯದೆಯ ತೆನ ಯಾತೆ ಹೊರಡಿಸ ಬೇಕಾಯಿ ಬಗ್ಗೆ ವ್ಹಾಯಿಸರಾಯರು ಕೆಲವು ಕಾರಣ ಪ್ರಸಿದ್ಧ ಪಡಿಸಿದ್ದು ಅವುಗಳಲ್ಲಿ ಈಗಿ ಪ್ರಮುಖವಾಗಿವೆ.

೧ ಕೆಲವು ಪತ್ರಿಕೆಗಳು ಕಾಯುಕಿಭಂಗಕ್ಕೆ ಉತ್ತೇಜನಕೊಡುವದನ್ನೇ ತಮ್ಮ ಧೋರಣವ ನ್ನಾಗಿಟ್ಟುಕೊಂಡು, ಎಲ್ಲೆಲ್ಲಿಯೂ ಅಶಾಂತತೆ ಯನ್ನು ಹರಡಲು ಪ್ರಾರಂಭಿಸಿರುತ್ತವೆ.

೨ ಹಿಂದಿನ ವೃತ್ತಪತ್ರ ದಬ್ಬಾಳಿಕೆಯು ಕಾಯುದೆಯು ಬಳಕೆಯಲ್ಲಿದ್ದಾಗ ನಿಂತು ಹೋಗಿ, ಅದು ರದ್ದಾದ ಮೇಲೆ ಪುನಃ ಪ್ರಕಟ ವಾಗುತ್ತಿರುವ ಕೆಲವು ಪತ್ರಿಕೆಗಳು, ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷರಾಜಕೀಯದಿಂದ ಹಿಂಸೆ ಹಾಗು ರಾಜ್ಯಕ್ರಾಂತಿಯರ ಅಪರಾಧಗಳಿಗೆ ಉತ್ತೇಜನ ವನ್ನು ಕೊಡಲಾರಂಭಿಸಿರುತ್ತವೆ.

೩ ಸದ್ಯದ ಪರಿಸ್ಥಿತಿಯನ್ನು ಈಗಲೆ ಎದು ರಿಸುವದು ಅತ್ಯವಶ್ಯವಾದದ್ದಾಗಿ ಕಂಡು ಬಂದಿ ದ್ದರಿಂದ, ಮಧ್ಯವರ್ತಿ ಕಾಯುದೆಮಂಡಳದ ಅಧಿ ವೇಶನದ ಹಾದಿ ನೋಡುವದು ಅಗತ್ಯ ತೋರ ಲಿಲ್ಲ

ಪೊಲ್ಲಾಪುರದ
ಅರೋಪಿಗಳಿಗೆ ಜೀವದಾನ

ಪೊಲ್ಲಾಪುರದಲ್ಲಾದ ದಂಗೆಯ ಸಂಬಂಧ ವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಧನ ಶೆಟ್ಟಿ, ಸಾರ್ದಾ, ಸಿಂದೆ ಹಾಗು ಬುರ್ಹಾನ ಹುಸೇನ ಇವರಿಗೆ ದಯೆ ತೋರಿಸಿ ಗಲ್ಲಿನ ಶಿಕ್ಷೆ ಯನ್ನು ರದ್ದು ಪಡಿಸಬೇಕಾಗಿ ಅಲ್ಲಿಯ ವೀರಶೈವ ತರುಣ ಸಂಘದವರು ವ್ಹಾಯಿಸರಾ ಯರಿಗೆ ತಾರನಿಂದ ವಿನಂತಿ ಮಾಡಿಕೊಂಡಿದ್ದಾರೆ. ಕರ್ನಾಟಕದೊಳಗಿನ ಉಳಿದ ವೀರಶೈವ ತರುಣ ಸಂಘಗಳು?

ಅಧಿಕಾರಿಗಳ ಪತ್ತೆಯಿಲ್ಲ

ಸೇವಾ ಜಿಲ್ಲೆಯಲ್ಲಿಗು ಸೇಡ ವಂಗಲ ಮದ ಕೆಲವು ಜನರ ಅಪ್ಪಿಯು ಎತ್ತಿಸುವಿ ಇನಸ್ಪೆಕ್ಟರ ಹಾಗು ಪೋಲೀಸ ಸಬ್ ಇನಸ್ಪೆ ಕ್ಟರ ಇವರ ಮೇಲೆ ತಲ್ಲೆಮಾಡಿ, ಸಿಂದಿ ಅಂಗ ಡಿಯಲ್ಲಿ ನುಗ್ಗಿ ಹೋದರು. ಈಗ ೨ ಇನ್ಸ್ಪೆರು ಅಧಿಕಾರಿಗಳ ಪತ್ತೆಯೇ ಇಲ್ಲದಾಗಿದೆ. ಪೋ ಲೀಸ ಸುಪರಂಟೆಂಡೆಂಟರು ಕೆಲವು ಜನ ಪೋ ಲೀಸರೊಂದಿಗೆ ಅಳಸಿ ಹೋಗಿದ್ದಾರೆ.

ವಿದೇಶಿ ಅರಿವೆಯು ದೇವರಿಗೂ
ಬೇಡಾಯಿತು

ಸಿಂದಿಯೆಂಬುವ ಊರೊಳಗಿನ ಲಕ್ಷ್ಮೀ ನಾರಾಯಣ ಗುಡಿಯ ಯಜಮಾನರು ಒಂದು ದಿವಸ ದೇವರಿಗೆ ವಿದೇಶಿ ಬಟ್ಟೆಗಳನ್ನು ತೊಡಿಸಿ ಊಟಕ್ಕೆ ಕುಳಿತುಕೊಂಡರು. ಊಟಕ್ಕೆ ಕುಳಿತ ಕೂಡಲೆ ಅವರಿಗೆ ಅನ್ನದಲ್ಲಿ ಹುಳಗಳಾಣಿಸಹತ್ತಿ ದವು. ಏಕದರ ಕಾರಣವರಿತು ಅವರು ಕೂಡಲೆ ದೇವರ ಮೈಯೊಳಗಿನ ವಿದೇಶಿ ಅರಿವೆಗಳನ್ನು ತೆಗೆಯಿಸಿದರು. ಅನ್ನದೊಳಗಿನ ಹುಳಗಳೆಲ್ಲ ಮಾಯವಾಗಿ ಹೋದವು. ದೇವರಿಗೂ ಪರದೇಶಿ ಅರಿವೆಯು ಬೇಡಾಯಿತು. ಪರದೇಶಿ ಬಟ್ಟೆಗಳನ್ನು ಧರಿಸುವವರು ಇದರಿಂದ ಬೋಧ ತೆಗೆದು ಕೊಳ್ಳುವರೇ?

ದಿಲ್ಲಿಯಲ್ಲಿ
ಸತ್ಯಾಗ್ರಹಕ್ಕೆ ಜಯ ದೊರೆಯಿತು

ದಿಲ್ಲಿಯಲ್ಲಿ ಪಿಕ್ಟಿಂಗಿನ ಕಲುವಾಗಿ ಶಿಕ್ಷೆಗೆ ಗುರಿಯಾದ ೨೪ ಜನ ಸ್ತ್ರೀಯರಿಗೆ ಅಧಿಕಾರಿ ಗಳು "ಬಿ" ವರ್ಗವನ್ನು ಕೊಟ್ಟಿದ್ದರ ನಿಷೇಧಾ ರ್ಥವಾಗಿ ದಿಲ್ಲಿ ಜೇಲಿನಲ್ಲಿ ೪೮ ಜನ ಸ್ತ್ರೀ ರಾಜ ಕೀಯ ಕೈದಿಗಳು ಅನ್ನತ್ಯಾಗ ಸತ್ಯಾಗ್ರಹ ವನ್ನು ಮಾಡಿದ್ದರಷ್ಟೆ, ಈಗ ಆ ೨೪ ಜನ ಸ್ತ್ರೀಯರು "ಬಿ" ವರ್ಗದಲ್ಲಿ ಇರಿಸಲ್ಪಟ್ಟಿದ್ದ ರಿಂದ ಅವರೆಲ್ಲರೂ ಅನ್ನವನ್ನು ತೆಗೆದುಕೊಳ್ಳ ಲಾರಂಭಿಸಿದ್ದಾರೆ.

ಹೊಗೆಬಂಡಿಯಲ್ಲಿ
ಹೆಣ ಸಿಕ್ಕಿತು

ಕಲಕತ್ತೆಯಿಂದ ಜಬಲಪುರ ಮಾರ್ಗ ವಾಗಿ ಬರುವ ಹೊಗೆಬಂಡಿಯು ಮುಂಬಯಿ ಬೋರಿ ಬಂದರ ಸ್ಟೇಶನದಲ್ಲಿ ನಿಂತಿತು. ಜನರು ಇಳಿದು ಹೋದರು. ಒಂದು ಟ್ರಂಕು ಮಾತ್ರ ಹಾಗೆಯೆ ಉಳಿಯಿತು. ಪೋಲೀಸರು ಅದರ ಬಾಯಿ ತೆರೆಯಿಸಿ ನೋಡಲು, ಅದರಲ್ಲಿ ಒಂದು ರುಂಡವಿಲ್ಲದ ಹೆಣ ಹೊರಬಿತ್ತು. ಪೋಲೀಸರು ಈ ಬಗ್ಗೆ ತೋಧ ನಡಿಸಿದ್ದಾರೆ.

ಬಿ. ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ.

ದಿ ನೇ ಇಸ್ವಿಯ ಇಂಡಿಯನ್ ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬ್ಯಾಂಕಿನ ಸೇವಿನ ದರವು ಕೆಳಗೆ ತೋರಿಸಿದ ಪ್ರಕಾರ ಇರುತ್ತದೆ.

ಚಾಲತೀ ಸೇವಿಗೆ ಸೂರಕ್ಕೆ ವರ್ಷಕ್ಕೆ ೨॥ ರೂ.
ಸೇವ್ಹಿಂಗ್ಸ ಬ್ಯಾಂಕ " " ೪ ರೂ.
ಮುದ್ದತೀ ಸೇವಿಗೆ " " ೬॥ ರೂ.

ಪದಲ್ಲದೆ ೩-೬ ಮತ್ತು ೯ ತಿಂಗಳ ಸೇವು ಇಡುವದಾದಲ್ಲಿ ಸಮುಚ್ಚಮಬಂಡು ದರವನ್ನು ಕೊಸ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಆಂದರೆ ಬೆಳ್ಳಿ, ಭಂಗಾರ ತಾಳುಪಡಿ ಸರಕಾರೀ ತಾಗದ ಮತ್ತು ವಿಮೆಯ ಪಾಲಿಸಿಗಳಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ತರಿಸುವಬದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ತರಿಸಿಕೊಂಡರೆ ನೂರಕ್ಕೆ ೧೨ ರಂತೆ ಉಳಿಸಿ ಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಕೊಳ್ಳಬೇಕು.

V R Torui
Managing Director

ಕಿರ್ಲೋಸ್ಕರ ನೇಗಿಲಗಳು



ಇವುಗಳ ವೈಶಿಷ್ಟ್ಯತೆ.

೧ ತಿಯಗುವ ಶುಲವುಳ್ಳದ್ದು.
೨ ಬೆಲೆಯಲ್ಲಿ ವಿದೇಶೀ ರೇಟಿಗಿಂತ ಅಗ್ಗ.
೩ ಲಕ್ಷಾವಧಿಜನರು ಹೊಸಿ ಅನುಭವಹೊಂದಿದು ಇದುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ಇಂಪಿಲ್ಲದೆ ಮಾಗಣಿಯುಂಟು. ಸದೃಶ್ಯ ಹಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ. ಜಿ. ಸಾಂಗಲಿ

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ ವನಸ್ಪತಿಗಳ ಅದ್ಭುತ ಮಹಿಮೆ.

• ಬಾಲಾರ್ಕಮಧು. •



ಇದನ್ನು ಮಕ್ಕಳು ಆನಂದದಿಂದು ಸೇವಿಸುತ್ತಾರೆ. ಇದು ಮಧುರವಾಗಿದೆ ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಉಣಿಸುವ ಹಾಲು ಅನ್ನವೂ ಮೈಗೆಹತ್ತಿ, ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೇಹಧಾರ್ಢ್ಯವೂ ಹೆಚ್ಚುವದು. ಕೇವಲ ವೈದ್ಯ ಹೊಗಳಿಕೆಯೆಂದು ತಾತ್ಸಾರ ಮಾಡದೆ ಒಂದೇಒಂದು ಶೀಸೆ ತರಿಸಿಕೊಂಡಲ್ಲಿ ಇದರ ಅಪಾರ ಗುಣವು ತಾವಾಗಿ ತಿಳಿಯುವದು.

ಬೆಲೆ ಶೀಸೆ ೧ ಕ್ಕೆ ೦—೧೨—೦ ಟಪಾ. ೦—೪—೦.

M. V. Prasadika Oushadhalaya, SHIMOGA.
Mysore State.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ಪಗರದ ಶ್ರೇಷ್ಠಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಶಾದಂಬರಿ)	೨—೮—೦
೩	ನೀಕ್ಯತೆಗೆಳು ಭಾಗ ೧.	೧—೪—೦
೪	ಪತಿವೀಕರಣ ನಾಟಕ.	೦—೧೨—೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨—೦
೭	ಲಕ್ಷ್ಮೀಬಾಯಿ ಝಾನ್ಸಿ ಚರಿತ್ರೆ.	೨—೦—೦
೮	ಶಿವ ಸುಧಾರ್ಣವ (ಸಚಿತ್ರ)	೩—೮—೦

ಕಳುಹಿಸಿಗೆ ಅರ್ಧಆಣೆ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ಯಾವ ಕಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವಂಗ್ರೆಸ್ಸಿಂದೇಸವನೆ ಹಂಚಿದೆ!

ಜನರಲ್

ಅಶ್ಯೂರನ್ಸ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೨೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ.

ಲಾಭ.

ವಿಮಾದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೨ ನೇ ವರ್ಷದಲ್ಲಿ ಹಿಂದಿನ ವರ್ಷಗಳಿಗಿಂತ ಕೆಲಸವನ್ನು ಕೊಟ್ಟ ಅತ್ಯಂತ ಹೆಚ್ಚು

ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೨೬ ನೇ ಮಾರ್ಚ ೩೧. | ೧೯೨೫ ನೇ ಡಿಸೆಂಬರ ೩೧. | ೧೯೨೬ ನೇ ಡಿಸೆಂಬರ ೩೧.

ಇಡೀ ಆಯುಷ್ಯದ (ತಪವಾಗಿ ವಿಮೆಯಿಳಿಸಿಕೊಳ್ಳುವ) ವರ್ಷಕ್ಕೆ ೧೨ % ರೂ.

ಇಡೀ ಆಯುಷ್ಯದ (ತಪವಲ್ಲದೆ ವಿಮೆಯಿಳಿಸಿಕೊಳ್ಳುವ) ವರ್ಷಕ್ಕೆ ೨೧ % ರೂ.

ಇಡೀ ಆಯುಷ್ಯದ (ತಪವಲ್ಲದೆ ದೊಡ್ಡ ವಿಮೆಯಿಳಿಸಿಕೊಳ್ಳುವ) ವರ್ಷಕ್ಕೆ ೨೨॥ ೦/೦ ರೂ.

ವರ್ಷ.	ವಾರ್ಷಿಕ ಉತ್ಪನ್ನ.	ಹೊಸ ವ್ಯವಹಾರ.
೧೯೨೩	೬,೪೪,೪೭೦	೧೯,೨೫,೫೦೦
೧೯೨೪	೭,೧೨,೬೫೪	೩೮,೦೧,೫೦೦
೧೯೨೫	೯,೫೫,೫೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರ ಬಾಗು ಅತ್ಯಂತ ಪೋಷಕವಾದ ಗಳಿಕೆ ಸ್ಥಿತಿಗಳ ಪೂರ್ಣ ಲಾಭವನ್ನು ಹೊಂದಿರಿ.

ಬಗಲಕೋಟೆಯ ಏಜಂಟರು:— ಪ್ಲಿ. ಜೆ. ಪರ್ವತಿಕರ ಮತ್ತು ಮಕ್ಕಳು.

ಜೀವ ಏಜಂಟರು— ಎಸ್. ಆರ್. ಸರದೇಸಾಯಿ, ಮುಂಬೈ ನಂ ೪.

THE UNITED KARNATAK INSURANCE COMPANY LTD. DHARWAR.

ಸುಸಂಧಿ ಸ್ವರೆಮಾಡಿರಿ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೪ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೬ ನೆ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ಬೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಆ್ಯಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುಕಾಲಿಕಜೇಸಾಯಿ ಬಿ ಎ ಬೆಣ್ಣಿಗೇರಿ

೪ ಮಿ. ರಾಮಚಂದ್ರ ರಂಗೋ ಸಾವಕಾರ ವತನದಾರ ಹಳೇಹುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿತವಸುಬ್ಬಳ್ಳಿ ವಕೀಲ ಬೈಲಹೊಂಗಲ

೭ ವಿ॥ ಆನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾಮರಾವ ವೆ ಭಂಡಿವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅನೋನಸಾಹೇಬ ಹಣಸಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಂಟ ಇನ್‌ಶ್ಯೂರನ್ಸ ಕಂಪನಿಯೆಂದರೆ ಇದೇ ಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡಿಯುವವರೂ ಕಷ್ಟಪಡಿಗರೆ ಆಗುತ್ತಾರೆ. ಪರದೇಶಿ ಕಂಪನಿಗಳಿಗೆ ಏಜಂಟರಾಗಿಯಾಗಲಿ ವಿಮೆ ಇಳಿಸಿಯಾಗಲಿ ಸಹಾಯವಾಣಿ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ ಹೆಸರು ಪಡೆಯುವದೇಕೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯು ಶೇರುಗಳು ವಸೂಲಾಗಲಿಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿರುವದು. ಶೇರುಗಳನ್ನು ವಸೂಲಾವದಕ್ಕೂ ಮತ್ತು ವಿಮೆಯ ಕೆಲಸವನ್ನು ತಂದುಕೊಡವದಕ್ಕೂ ಎಲ್ಲಾ ದೊಡ್ಡ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಎಜನ್ಸಿ ಕರಾರುಗಳು ಸುಲಭ ಪರಿಮಿತಿಗಳು, ವಿಪುಲ, ಮತ್ತು ಕಮಿಶನ ದರಗಳು ಲಾಭಕರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L Huilgolkar
ಸೆಕ್ರೆಟರಿ
ಯು. ಕ. ಇ. ಕ ಲಿ. ಧಾರವಾಡ.

ದಾಲಗೃಹ ಚೂರ್ಣ
ಬಾ. ಕೆ, ೧—೪—೦

ಡಾ. ಬೈಲೂರ

ಥಂಡಿ ಉರಿಯ ಗುಳಿಗೆಗಳು
ಬಾ. ಕ ೦—೮—೦

ಇವರ ಔಷಧಗಳು

ಕಾಫ್ ಸಾಯಿರಪ್ ಃ— ನೆಗಡಿ, ಗೊಬ್ಬರ, ಮೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟಿ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊರ್ತಾಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್‌ಸಾಯಿರಪ್ ಔಷಧದ ಉಪಯೋಗವು ಜನ್ಮಾಗಿ ಆಗುವದರಿಂದ ಎಲ್ಲರಿಗೂ ತಿಳಿಸುತ್ತೇವೆ. ಈ ಕಾಫ್‌ಸಾಯಿರಪ್‌ನ್ನು ಸಣ್ಣವುಳ್ಳಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪ್ಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಅತಂಕವಿಲ್ಲ. ಇದು ಸಂಸ್ಕರಿಸಿಯೇ ಉಪಯೋಗವಾಗಿರುವದು. ಕೆ. ಸಣ್ಣ ಬಾ. ೦ ೬—೦ ದೊಡ್ಡ ಬಾ ೧—೮—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳ ಬಹುದು.
೩ ರೂ. ಕಿಂತ ಹೆಚ್ಚಿಗೆ ಔಷಧ ಕ್ಕೆ ತರಿಸಿಕೊಳ್ಳುವವರಿಗೆ ೧೨ ಟಕ್ಕೆ ಕನಿಶನ್ ಮತ್ತು ಪ್ಯಾಕಾರ್ಡಿಂಗಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಕರ್ತೃ:— ಡಾ॥ಹರೀ ಮಹಾದೇವ ಬೈಲೂರ. ದ. ಬೆಳಗಾವ.

ಶವರಲೇಟ ಎಜನ್ಸಿ.

ನಾವು ಶವರಲೇಟ ಮೋಟರ ಕಂಪನಿಯ ಬೆಳಗಾಂವ ಮೊಟೇರ ವರ್ಕ್ಸ್ ಟ್ರಾನ್ಸ ಮೋರ್ಟ ಕಂಪನಿಯ ಸಬ್ಬ ಎಜಂಟರಿರುತ್ತೇವೆ ಈ ಗಾಡಿಗಳನ್ನ ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಒಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯು ಸುತ್ತುಮುತ್ತಲಿನ ಖಾಸಗಿ ಸರ್ವಿಸಿನ ಮೋಟರ ಮಾಲಕರ ಗೈರಸೋವಿ ದೂರವಾಗಬೇಕೆಂದು ಒಂದು ಜನರಲ್ ಮೋಟರಸ್ಟೋರ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನರಗುಂದ ಗದಗ ಮತ್ತಿತರ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರ ಗೈರಸೋವಿದೂರಾಗಬೇಕೆಂದು. ತಾ. ೩೧-೩-೩೦ ನೇ ದಿವ್ಸ (ಪೌಶ್ಯ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಸ್ಟಾರಂಭವಾಗಿದೆ)

ಇಲಕಲ್ಲದಿಂದಾ ೪॥ಘಂಟೆಗೆ ಹೋಟು ಹುನಗುಂದ, ಅನಿಸಾಡ, ಕಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಜೊಳಚಗುಡ್ಡ ಶಿವಿ, ಜಾಲಿಹಾಳ, ಹೀರೆಹಾಳ, ಕೊಕಟನೂರ, ರೊಣ, ಲಕ್ಷ್ಮೇಶ್ವರ, ನರೇಗಲ್ಲ, ಕೊಟುಮಚಗಿ, ನಾರಾಣಾಪುರ, ಮಾರ್ಗವಾಗಿ ಗದಿಗ್ಗೆ ದಿನಾ ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ, ಹೊರಟು ಸಂ ೫ ಘಂಟೆಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ಶಂಕಾಸಿದ ವೇಳೆಯಿಂದಾ ೧೫ ನಿಮಿಷ ಮುಂಚಿತವಾಗಿ ಪ್ಯಾಸಿಂಜರರು ಸ್ಟ್ಯಾಂಡಿನ ಮೇಲೆ ಹಾಜರ ಇರ್ಕಡ್ದು ಡ್ರಾಯವರನಕಡಿಯಿಂದಾ ಮೋಟರಿನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಿಕೀಟು ತೆಗೆದು ಕೊಳ್ಳತಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರೀಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ನಮುನೆಯ ಗಾಡಿಗಳಿಗೆ ಬಾಡಿಗಳನ್ನು ತಯಾರ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವಿಸ—
ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ಶವ್ರಡಲೆಟ ಸಬ್ಬ ಎಜಂಟ್ಸ ಆಂಡ ಬಾಡಿಬಿಲ್ಡರ್ಸ ಬಾಗಲಕೋಟ

THE POONA SCHOOL OF COMMERCE

Reopens on 16 th. June, Students coached for London Chamber of Commerce and other commercial examinations in banking, Accountancy Shorthand Type-writing etc. Apply for prospectus to:—

Secretary, Budhawar Chowk; Poona-city.

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕರಡಿ ಇವರಿಂದ ಬಾಗಲಕೋಟೆ ವಿದ್ಯಾಭಿವೃದ್ಧಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಪಡಿಸಲ್ಪಟ್ಟಿತು.